ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೧೧
ವಿಚಾರ ಸಾಹಿತ್ಯಮಾಲೆ – ೩೨
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಕ್ರಾಂತಿಕಾರಕ ಸರ್ವೋದಯ

## ಭವನದ ಗ್ರಂಥ ವಿಶ್ವವಿದ್ಯಾನಿಲಯ


ಮಾಲೆಯ
ಮೂಲ ಸಂಪಾದಕರು
**ಕೆ. ಎಂ. ಮುನ್ಷಿ**
**ಆರ್. ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ. ಕೆ. ಬಿರ್ಲಾ** – ಸದಸ್ಯರು
**ಎಸ್. ಜಿ. ನೇವಾತಿಯ** – ಸದಸ್ಯರು
**ಜಿ. ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್. ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ. ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)




# ಕ್ರಾಂತಿಕಾರಕ ಸರ್ವೋದಯ

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತ:
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I. ೮೯–೧


ಮೂಲ
**ಆಚಾರ್ಯ ವಿನೋಬಾ ಭಾವೆ**

ಸಂಕಲನ
**ವಸಂತ ನರಗೋಳಕರ**

ಅನುವಾದ
**ಶಂಸ ಐತಾಳ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Krantikaraka Sarvodaya :** Kannada translation of *Revolutionary Sarvodaya* by **Acharya Vinoba Bhave;** Compiled by Vasant Nargolkar **;** Kannada translation by **Shamsa Aithala ;** Editor-in-Chief: **Dr. Pradhan Gurudatta**; Editor of the series : **Dr. A.V. Narasimha Murthy;** published under the joint auspices of **Kuvempu Bhasha Bharathi Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxviii + 48 ; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxviii + ೪೮
ಬೆಲೆ : ರೂ. ೧೦/–

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೬೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫–೮–೨೦೦೯
ಸಿಎಂ/ಪಿಎಸ್/೧೪೭/೦೯

## ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝುಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝುಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೮

## ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,



ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ



ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧–೦೯–೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯–೦೮–೨೦೦೯ರ ಬೆಳಗ್ಗೆ ೧೧–೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

**(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :**

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

**(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ



ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

**(ಇ) ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ



ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಶ್ರೀ ಶಂಸ ಐತಾಳ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎನ್.ಎಸ್. ಶಾರದಾಪ್ರಸಾದ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾ ಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಕ್ರಾಂತಿಕಾರಕ ಸರ್ವೋದಯ' ಎಂಬ ಪುಸ್ತಕ ಖ್ಯಾತ ಲೇಖಕರಾದ ಶ್ರೀ ಶಂಸ ಐತಾಳ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲುಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾಭವನ**
ಚೌಪಾಟಿ ರೋಡ್, ಬೊಂಬಾಯಿ–೭ **ಕೆ. ಎಂ. ಮುನ್ಷಿ**
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

## ಕೃತಜ್ಞತೆಗಳು

ಆಚಾರ್ಯ ವಿನೋಬಾ ಭಾವೆಯವರ ಬರಹಗಳು ಮತ್ತು ಸಂವಾದಗಳಿಂದ ಆಯ್ದು ಉದ್ಧೃತ ಭಾಗಗಳನ್ನು ಮುದ್ರಿಸಲು ನೀಡಲಾದ ಅನುಮತಿಗಾಗಿ ಸರ್ವಸೇವಾ ಸಂಘ ಪ್ರಕಾಶನ, ರಾಜಘಾಟ್, ವಾರಾಣಸಿ, ಇವರಿಗೆ ಭವನದ ಪ್ರಕಾಶಕರು ತುಂಬ ಕೃತಜ್ಞರಾಗಿದ್ದಾರೆ.



## ಮುನ್ನುಡಿ

ಆಧುನಿಕ ಕಾಲದಲ್ಲಿ 'ಸರ್ವೋದಯ' ಎಂಬ ಶಬ್ದವನ್ನು ಮೊತ್ತಮೊದಲು ಬಳಸಿದವರು ಮಹಾತ್ಮಾ ಗಾಂಧಿ. 'ಸರ್ವೋದಯ' ಎಂದರೆ ಸರ್ವರ ಏಳಿಗೆ ಅಥವಾ ಕಲ್ಯಾಣ. ಆದರೆ ಈ ಶಬ್ದದ ಇಂಗ್ಲಿಷ್ ಅನುವಾದವು ಶಬ್ದದ ಸಂಪೂರ್ಣ ಅರ್ಥವನ್ನು ನೀಡುವುದಿಲ್ಲ. ದಕ್ಷಿಣ ಆಫ್ರಿಕದಲ್ಲಿದ್ದಾಗ, ೧೯೦೪ರಲ್ಲಿ ಗಾಂಧೀಜಿಯವರಿಗೆ ಜಾನ್ ರಸ್ಕಿನ್ ಬರೆದ 'ಅನ್‌ಟು ದಿಸ್ ಲಾಸ್ಟ್' ಎಂಬ ಕೃತಿಯನ್ನು ಓದುವ ಸಂದರ್ಭ ಒದಗಿ ಬಂತು. ಗಾಂಧೀಜಿ ತಮ್ಮ ಆತ್ಮಚರಿತ್ರೆಯಲ್ಲಿ ಬರೆದಂತೆ, ತುಂಬ ಆಕರ್ಷಕವಾದ ಆ ಪುಸ್ತಕವು, ಅವರು ತಮ್ಮ ಜೀವನ ಶೈಲಿಯನ್ನೇ ಬದಲಾಯಿಸುವಂತೆ ಮಾಡಿತು. ಗಾಂಧೀಜಿ ಪ್ರಕಾರ, 'ಅನ್‌ಟು ದಿಸ್ ಲಾಸ್ಟ್' ಕೃತಿಯ ಮುಖ್ಯ ಬೋಧನೆಗಳು ಹೀಗಿವೆ :

"1. ವ್ಯಕ್ತಿಯೊಬ್ಬನ ಒಳಿತು ಎಲ್ಲರ ಒಳಿತಿನಲ್ಲಿ ಅಡಗಿದೆ.
2. ಎಲ್ಲರೂ ಹೊಟ್ಟೆಪಾಡಿಗಾಗಿ ಗಳಿಸುವುದರಿಂದ, ವಕೀಲನ ಕೆಲಸಕ್ಕೆ ಇರುವಷ್ಟೇ ಮಹತ್ವ ಕ್ಷೌರಿಕನ ಕೆಲಸಕ್ಕೂ ಇರುತ್ತದೆ.
3. ಕಾರ್ಮಿಕನ ಅಥವಾ ರೈತನ ಜೀವನವು ಕುಶಲಕರ್ಮಿಯ ಜೀವನದಷ್ಟೇ ಅಮೂಲ್ಯವಾದುದು."

ಅನಂತರ ಗಾಂಧೀಜಿ, ರಸ್ಕಿನ್ ಅವರ ಗ್ರಂಥದ ಗುಜರಾತಿ ರೂಪಾಂತರವನ್ನು 'ಸರ್ವೋದಯ' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಸುಮಾರು ೨೦೦೦ ವರ್ಷಗಳ ಹಿಂದೆ ಜೀವಿಸಿದ್ದ ಆಚಾರ್ಯ ಸಮಂತಭದ್ರರ ಜೈನ ಧರ್ಮಗ್ರಂಥವೊಂದರಿಂದ **ಸರ್ವಾಪಿದಾಮಂತಕರಂ ನಿರಂತಂ ಸರ್ವೋದಯಂ ತೀರ್ಥಮಿದಂ ತವೈವ** । ಅವರು ಈ ಶಬ್ದವನ್ನು ಪಡೆದುಕೊಂಡಿದ್ದಾರೆ.

ಇದೇ ಶಬ್ದವಲ್ಲವಾದರೂ, ಇದರ ಅರ್ಥವೂ ಹಿಂದೂ ಧರ್ಮಕ್ಕೆ ಸೇರಿದ ಋಷಿಗಳು ಮತ್ತು ಮುನಿಗಳು ಪ್ರಾಚೀನ ಕಾಲದಿಂದ ಮತ್ತೆ ಮತ್ತೆ ಪಠಿಸುತ್ತ ಬಂದಿರುವ ಈ ಕೆಳಗಿನ ಪ್ರಾರ್ಥನಾ ಶ್ಲೋಕದಲ್ಲಿ ಕಂಡುಬರುತ್ತದೆ :

**ಸರ್ವೇಽಪಿ ಸುಖಿನಃ ಸಂತು ಸರ್ವೇ ಸಂತು ನಿರಾಮಯಾಃ ।**
**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಮಾಪ್ನುಯಾತ್ ॥**

"ಎಲ್ಲರೂ ಸಂತೋಷವಾಗಿರಲಿ, ಎಲ್ಲರೂ ಆರೋಗ್ಯವಂತರಾಗಿರಲಿ; ಎಲ್ಲರೂ ಉನ್ನತಿಯನ್ನು ಹೊಂದಲಿ; ಯಾರೂ ದುರದೃಷ್ಟಶಾಲಿಗಳಾಗದೆ ಇರಲಿ"

ಗಾಂಧೀಜಿಯವರು ಸಾಮಾನ್ಯವಾಗಿ ನಡೆಸುತ್ತಿದ್ದ ಸಾಮೂಹಿಕ ಪ್ರಾರ್ಥನಾ ಶ್ಲೋಕಗಳಲ್ಲಿ ಪ್ರಸಿದ್ಧವಾದ ಈ ಶ್ಲೋಕವು ಕೊನೆಯದಾಗಿದೆ. ಧರ್ಮಗಳ ಸಾಮಾಜಿಕ ಸಂಬಂಧವನ್ನು ಕುರಿತಂತೆ ಪ್ರತಿಪಾದಿಸುವಾಗ, 'ಭಗವದ್ಗೀತೆ' ಕೂಡ ಎರಡು ಸಲ ಪೂಜ್ಯ ವ್ಯಕ್ತಿಗಳನ್ನು **ಸರ್ವಭೂತಹಿತೇ ರತಾಃ** ಎಂದರೆ 'ಎಲ್ಲರ ಕಲ್ಯಾಣವನ್ನು

ಹಾರೈಸುವವರು' ಎಂದು ಉಲ್ಲೇಖಿಸಿದೆ. ಗಾಂಧೀಜಿ ಅಹಿಂಸೆಗೆ ಮಹತ್ವ ನೀಡಲು ಪೂಜ್ಯ ವ್ಯಕ್ತಿಗಳ ಈ ಆದರ್ಶವೇ ಕಾರಣ. ಎಲ್ಲರಿಗೂ ಒಳ್ಳೆಯದಾಗಲಿ ಎಂದು ದೇವರನ್ನು ಪ್ರಾರ್ಥಿಸುವುದರಿಂದಷ್ಟೇ ಶೋಷಣೆಗೆ ಮತ್ತು ದಮನಕ್ಕೆ ಈಡಾದವರನ್ನೂ, ಬಡವರನ್ನು ಅಥವಾ ಅಭಾವಪೀಡಿತರನ್ನು ಸಂಪೂರ್ಣವಾಗಿ ಸಂತೈಸಲು ಸಾಧ್ಯವಾಗಲಾರದೆಂದೂ ಗಾಂಧೀಜಿ ತಿಳಿದಿದ್ದರು. ತತ್‌ಕ್ಷಣದ ಅಗತ್ಯಗಳನ್ನು ಪೂರೈಸಿಕೊಳ್ಳಲು ಅವರಿಗೆ ಮತ್ತೆ ಮತ್ತೆ ಸಹಾಯ ಮಾಡಬೇಕು ; ದೀರ್ಘಕಾಲೀನ ಧ್ಯೇಯವಾಗಿ ಅಹಿಂಸಾತ್ಮಕ ಕ್ರಾಂತಿಯೊಂದನ್ನು ಪ್ರಾರಂಭಿಸಬೇಕು. ಇಂತಹ ಕಾರ್ಯಕ್ರಮದ ಮೂಲಕ ಮಾತ್ರ, ಪ್ರೀತಿ ಮತ್ತು ಸಹಕಾರಗಳಿಂದ ಕೂಡಿದ ಹಾಗೂ ದಮನ, ಶೋಷಣೆಗಳಿಲ್ಲದ ಸಮಾಜವನ್ನು ಸ್ಥಾಪಿಸಲು ಸಾಧ್ಯ ಎಂಬುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಅಹಿಂಸೆಯನ್ನು ಜೀವನ ಸಿದ್ಧಾಂತವನ್ನಾಗಿ ಅಳವಡಿಸಿಕೊಳ್ಳುವುದು ಮತ್ತು ರಾಷ್ಟ್ರೀಯ ಜೀವನದ ವಿವಿಧ ಕ್ಷೇತ್ರಗಳಲ್ಲಿ ನೇರವಾಗಿ ಸಂಪೂರ್ಣ ನಿಸ್ವಾರ್ಥ ಸೇವೆಯನ್ನು ಸಲ್ಲಿಸುವುದರ ಮೂಲಕ, "ಎಲ್ಲ ಜೀವಿಗಳ ಒಳಿತನ್ನು ಕಂಡು ಸಂತೋಷಪಡುವಂತಹ" ಪುರಾತನ ಆದರ್ಶವನ್ನು ಗಾಂಧೀಜಿ ತಮ್ಮ ಜೀವನದಲ್ಲಿ ರೂಪಿಸಿಕೊಂಡರು.

'ಸರ್ವೋದಯ'ವೆಂಬ ಪದ ಹಾಗೂ ಅದರ ಪರಿಕಲ್ಪನೆಗಳು ತಮ್ಮಷ್ಟಕ್ಕೆ ತಾವೇ ಗಾಂಧೀಜಿಯವರಲ್ಲಿ ಸ್ಫುರಿಸಿದವು. ಹತ್ತೊಂಬತ್ತನೆಯ ಶತಮಾನದ ಇಂಗ್ಲೆಂಡಿನಲ್ಲಿ ಪ್ರಚಲಿತವಾಗಿದ್ದ "ಅತ್ಯಧಿಕ ಸಂಖ್ಯೆಯ ಜನರಿಗೆ ಅತಿ ಹೆಚ್ಚಿನ ಒಳಿತು" ಎಂಬ ಉಪಯುಕ್ತತಾ ಸಿದ್ಧಾಂತವು ಯಥೋಚಿತವಾಗಿಲ್ಲವೆಂಬುದನ್ನು ಗಾಂಧೀಜಿ ಸ್ಪಷ್ಟವಾಗಿ ತಿಳಿದಿದ್ದುದೇ ಇದಕ್ಕೆ ಕಾರಣವಾಗಿತ್ತು. 'ಸರ್ವೋದಯ'ವೇ ಗಾಂಧೀಜಿಯ ಜೀವನ ವಿಧಾನವಾಯಿತು. ಅವರು ಆಗಾಗ ಆ ಶಬ್ದವನ್ನು ಬಳಸದೆ ಇದ್ದರೂ, ಅವರ ಜೀವಿತಾವಧಿಯಲ್ಲಿಯೇ ಅದು, ಮುಖ್ಯವಾಗಿ ಕೆಲವು ಉತ್ಕೃಷ್ಟ ನೈತಿಕ ಪ್ರೇರಣೆಗಳನ್ನೂ ಆಧುನಿಕ ಕಾಲದ ಅಗತ್ಯಗಳಿಗೆ ಸಂಗತವಾದ ಕೆಲವು ಮೌಲ್ಯಗಳು, ನಂಬಿಕೆಗಳು ಮತ್ತು ಆಚರಣೆಗಳನ್ನೂ ಪ್ರತಿನಿಧಿಸುವ ಭಾವನಾಶಾಸ್ತ್ರವಾಗಿ ನೆಲೆಗೊಂಡಿತು. ಎಲ್ಲ ಬಗೆಯ ಸಾಮಾಜಿಕ ಹಾಗೂ ರಾಜಕೀಯ ಕೆಡುಕುಗಳನ್ನು ನಿವಾರಿಸುವ ರಾಮಬಾಣವಾಗಿ ದಿವ್ಯೌಷಧವಾಗಿ ಗಾಂಧೀಜಿ 'ಸರ್ವೋದಯ' ಪರಿಕಲ್ಪನೆಯನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ಪ್ರಜಾಸತ್ತಾತ್ಮಕ ಸಮಾಜವಾದಕ್ಕಾಗಲಿ ಅಥವಾ ಬಂಡವಾಳವಾದ ಮತ್ತು ಕಮ್ಯುನಿಸ್ಟ್ ತತ್ತ್ವಕ್ಕೇ ಆಗಲಿ, 'ಸರ್ವೋದಯ'ವು ವಿರುದ್ಧವಾಗಿಲ್ಲ. ಶ್ರೇಷ್ಠವಾದ ಭಾರತೀಯ ಸಂಪ್ರದಾಯದಲ್ಲಿ, 'ಸರ್ವೋದಯ' ತತ್ತ್ವವು ಉತ್ತಮವಾದುದನ್ನು ಸ್ವೀಕರಿಸಿ, ಅನಪೇಕ್ಷಣೀಯವಾದುದನ್ನು ನಿರಾಕರಿಸುತ್ತದೆ. 'ಸರ್ವೋದಯ'ವು ಎಲ್ಲ ನದಿಗಳ ಅಂತಿಮ ಗಮ್ಯಸ್ಥಾನವಾಗಿರುವ ಸಮುದ್ರದಂತೆ. ಹಿಂಸಾತ್ಮಕ ಚಟುವಟಿಕೆಗಳಲ್ಲಿ ಭಾಗಿಗಳಾಗುವುದು ಹಾಗೂ ಅಧಿಕಾರವನ್ನು ವಶಪಡಿಸಿಕೊಳ್ಳುವುದೇ ಕ್ರಾಂತಿ ಎಂದು ನಾವು ಭಾವಿಸಿದ್ದೇವೆ. ಆದರೆ ಕ್ರಾಂತಿಯು ಪ್ರಸ್ತುತ ಚಿಂತನವಿಧಾನಗಳೂ, ಮೌಲ್ಯಗಳು, ನಂಬಿಕೆಗಳು ಮತ್ತು ಸಾಮಾಜಿಕ ವರ್ತನೆಗಳಲ್ಲಾಗುವ ಮೂಲಭೂತ ಬದಲಾವಣೆಗಳನ್ನು ಒಳಗೊಂಡಿರುತ್ತದೆ ಎಂದು 'ಸರ್ವೋದಯ'ವು ಪ್ರತಿಪಾದಿಸುತ್ತದೆ. ಆದುದರಿಂದ ಕ್ರಾಂತಿಯು ಕೇಂದ್ರಬಿಂದುವಾದ



ವ್ಯಕ್ತಿಯಿಂದಲೇ ಪ್ರಾರಂಭವಾಗಿ ಇತರರನ್ನು ವ್ಯಾಪಿಸಬೇಕು. ಅಲ್ಲದೆ 'ಸರ್ವೋದಯ'ದಲ್ಲಿ ಅಲ್ಪವಾದುದನ್ನೂ ಗುರುತಿಸಲಾಗುತ್ತದೆ, 'ಸರ್ವೋದಯ'ವನ್ನು ಸೂತ್ರರೂಪದಲ್ಲಿ ಹೇಳುವುದಾದರೆ, ಇಂದಿನ ನಮ್ಮ ಗುರಿಯು ಇನ್ನಷ್ಟು ಉನ್ನತಿಯನ್ನು ಸಾಧಿಸುವ ಮಾರ್ಗೋಪಾಯವಾಗುತ್ತದೆ, ಬಹುದೂರದ ಮುಂದಿನ ಗುರಿಯಾಗಿ ಮಾರ್ಪಡುತ್ತದೆ. ಆದುದರಿಂದ ಪರಿಶುದ್ಧವಾದ ಮಾರ್ಗಗಳಿಂದ ಮಾತ್ರ ಪರಿಶುದ್ಧವಾದ ಅಪೇಕ್ಷಣೀಯ ಗುರಿಯನ್ನು ತಲುಪಲು ಸಾಧ್ಯ ಎಂದು 'ಸರ್ವೋದಯ'ವು ಭಾವಿಸುತ್ತದೆ. ಹೀಗಾಗಿ ಅಹಿಂಸೆಗೆ ಮಹತ್ವ ನೀಡುವುದು 'ಸರ್ವೋದಯ'ದ ಮುಖ್ಯ ಸಿದ್ಧಾಂತಗಳಲ್ಲಿ ಒಂದಾಗಿರುತ್ತದೆ. ಸಾಮಾಜಿಕ ಬದಲಾವಣೆಯ ಉದ್ದೇಶದಿಂದ ಹಿಂಸೆಗೆ ಬದಲಾಗಿ ಅಹಿಂಸೆಯನ್ನು ಯಶಸ್ವಿಯಾಗಿ ಆಚರಿಸುವುದೇ ಒಂದು ಕ್ರಾಂತಿ ಎನ್ನಬಹುದು. ಗಾಂಧೀಜಿಯವರ ಮುಖಂಡತ್ವದಲ್ಲಿ ಸಾಧಿಸಲಾದ ಸ್ವಾವಲಂಬನೆ ಹಾಗೂ ಅಹಿಂಸಾತ್ಮಕ ವಿಧಾನದಲ್ಲಿ 'ಭೂದಾನ'ದ ಮೂಲಕ ಸಾವಿರಾರು ಎಕರೆ ಜಮೀನನ್ನು ವಿತರಿಸಿದುದು ಇವೇ ಪ್ರಸ್ತುತ ನಿದರ್ಶನಗಳಾಗಿವೆ. ಹೀಗೆ 'ಸರ್ವೋದಯ'ವು ಕ್ರಾಂತಿಯ ಪರಿಕಲ್ಪನೆಯನ್ನೇ ಬದಲಾಯಿಸಿಬಿಟ್ಟಿದೆ.

ಗಾಂಧೀಜಿಯವರ ನಿಧನಾನಂತರ, ಅವರು ಬಿಟ್ಟುಹೋದ ಕೆಲಸವನ್ನು ವಿನೋಬಾ ಭಾವೆ ಕೈಗೆತ್ತಿಕೊಂಡರು. ಗಾಂಧೀಜಿಯವರ ಕೆಲಸವನ್ನು ಮುಂದುವರಿಸುವ ಉದ್ದೇಶದಿಂದ ಅವರು ಆವರೆಗೆ ರಾಜಕೀಯೇತರ ಸಂಘಟನೆಯಾಗಿದ್ದ ಒಂದು ಸಾಮಾನ್ಯ ಸಂಘಟನೆಗೆ 'ಸರ್ವೋದಯ ಸಮಾಜ'ವೆಂದೂ ಅದರ ಕಾರ್ಯಕಾರಿ ಸಮಿತಿಗೆ 'ಸರ್ವ ಸೇವಾ ಸಂಘ'ವೆಂದೂ ಮರುನಾಮಕರಣ ಮಾಡಿದರು. ಹಲವು ವರ್ಷಗಳ ಕಾಲ ತಮ್ಮ ವೈಯಕ್ತಿಕ ಜೀವನದಲ್ಲಿ ಪಡೆದ 'ಸರ್ವೋದಯ'ದ ಸಿದ್ಧಾಂತಗಳ ಬಗೆಗಿನ ಸಮೃದ್ಧ ಅನುಭವಗಳು ಹಾಗೂ ತಮ್ಮ ಗಂಭೀರ ಅಧ್ಯಯನಗಳ ಫಲಿತಾಂಶವಾಗಿ, ಸರ್ವೋದಯವನ್ನು ಕುರಿತ ಗಾಂಧೀಜಿಯವರ ಭಾವನೆಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸಿ. ಬದಲಾದ ಪ್ರಸ್ತುತ ಸನ್ನಿವೇಶಗಳಿಗೆ ಅನ್ವಯಿಸಲು ವಿನೋಬಾ ಅವರಿಗೆ ಸಾಧ್ಯವಾಯಿತು, ವಿನೋಬಾ ಅವರ 'ಭೂದಾನ' ಹಾಗೂ 'ಗ್ರಾಮದಾನ' ಚಳವಳಿಗಳೂ 'ಪಾದಯಾತ್ರೆ'ಯ ಮೂಲಕ ಸಹಾನುಭೂತಿಯ ಸಂದೇಶವನ್ನು ಸಾರುವ ಅವರ ಅಪೂರ್ವ ವಿಧಾನವೂ ಜಗದ್ವ್ಯಾಪಕವಾದ ಗಮನವನ್ನು ಸೆಳೆದವು. ಒಂದು ರಾಷ್ಟ್ರವ್ಯಾಪೀ ಕಾರ್ಯಕ್ರಮವಾಗಿ 'ಗ್ರಾಮದಾನ' ಚಳವಳಿಯನ್ನು ಅಂಗೀಕರಿಸುವುದರಿಂದ, ಅನೇಕ ಸ್ವದೇಶೀ ಸಮಸ್ಯೆಗಳನ್ನು ಪರಿಹರಿಸುವುದಷ್ಟೇ ಅಲ್ಲದೆ, ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಕೂಡ ಅಂತಿಮ ಪರಿಹಾರಗಳನ್ನು ಕಂಡುಕೊಳ್ಳುವುದು ಸಾಧ್ಯವಾಗುತ್ತದೆ ಎಂದು ವಿನೋಬಾ ಪ್ರತಿಪಾದಿಸಿದರು.

ಹೀಗೆ 'ಸರ್ವೋದಯ'ವು ಜೀವನದ ಸಮಗ್ರ ಸಿದ್ಧಾಂತವಾಗಿರುತ್ತದೆ. ಅದು ಸ್ವದೇಶೀ ಉತ್ಪನ್ನವಾಗಿದ್ದು, ಭಾರತೀಯ ಸಂಸ್ಕೃತಿಯ ಗಟ್ಟಿ ಬಂಡೆಯ ಮೇಲೆ ಸ್ಥಿರವಾಗಿ ನಿಂತಿದೆ ಹಾಗೂ ಮೊತ್ತಮೊದಲ ಮತ್ತು ಕಟ್ಟಕಡೆಯ ಆಧ್ಯಾತ್ಮಿಕ ಜೀವನದ ಆದರ್ಶವನ್ನು ರೂಪಿಸುತ್ತದೆ. ಆದರೆ, ತನ್ನದೇ ಆಧ್ಯಾತ್ಮಿಕತೆಯ ಕಾರಣದಿಂದ, ಅದು, ಹಿಂದೆ ಐಹಿಕ (ಲೌಕಿಕ, ಪ್ರಾಪಂಚಿಕ) ಎಂದು ಪರಿಗಣಿಸಲ್ಪಟ್ಟ, ಹಾಗೂ ಆಧ್ಯಾತ್ಮವಾದಿಗಳು ಗಮನ ಹರಿಸಬೇಕಾಗಿಲ್ಲವೆಂದು ತಿಳಿಯಲಾದ ಅನೇಕ ವಿಷಯಗಳಿಗೆ

ಸಂಬಂಧಪಟ್ಟಿರುತ್ತದೆ. ಬಡವರಿಗೂ ಅಗತ್ಯವಿರುವವರಿಗೂ ಕೆಲಸ ಹಾಗೂ ಸಾಕಷ್ಟು ಆಹಾರ, ವಸ್ತ್ರ ಮತ್ತು ಆಶ್ರಯಗಳನ್ನು ಅವರ ಹಕ್ಕು ಎಂಬ ರೀತಿಯಲ್ಲಿ ಖಾತರಿಯಾಗಿ ಒದಗಿಸುವಂತಹ ಸಮಾಜವನ್ನು ಸ್ಥಾಪಿಸಲು ನಿಸ್ವಾರ್ಥವಾಗಿ ಪ್ರಯತ್ನಿಸುವುದನ್ನೇ 'ಸರ್ವೋದಯ'ದಲ್ಲಿ ಒಂದು ಆಧ್ಯಾತ್ಮಿಕ ಚಟುವಟಿಕೆಯೆಂದು ಪರಿಗಣಿಸಬಹುದು. ಇಂತಹ ಕಾರ್ಯಸಾಧನೆಗೆ ನಿರಂತರವಾಗಿ ಯೋಚಿಸುವ ಹಾಗೂ ತನ್ನನ್ನು ತಾನು ಅರಿಯುವ ಅಗತ್ಯವಿದೆ. ಆದುದರಿಂದ 'ಸರ್ವೋದಯ'ವು ಪಾಶ್ಚಾತ್ಯ ಸಿದ್ಧಾಂತಗಳಿಗೆ ಆಧಾರವಾಗಿರುವ ಆಂಶಿಕ ಸತ್ಯಗಳನ್ನಾಗಲಿ ಭೌತಿಕ ಅಭಿವೃದ್ಧಿ ಹಾಗೂ ಸಾಮಾಜಿಕ ಕಾರ್ಯಕ್ರಮಗಳನ್ನು ಉದ್ದೇಶವಾಗಿರಿಸಿಕೊಂಡ ಸಾಮಾಜಿಕ ಸಂಘಟನೆಗಳ ಪದ್ಧತಿಗಳನ್ನಾಗಲಿ ನಿರಾಕರಿಸುವುದಿಲ್ಲ. ಅವು ಖಂಡಿತವಾಗಿಯೂ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಸ್ವಾಗತಿಸುತ್ತದೆ. ಆದರೆ ಅವು ಆಧ್ಯಾತ್ಮಿಕತೆಯ ವಿವೇಚನಾಪೂರ್ಣ ನಿಯಂತ್ರಣದಲ್ಲಿ ಇರಬೇಕೆಂದು ಬಯಸುತ್ತದೆ. ಸಾಮಾನ್ಯವಾಗಿ ಭಾವಿಸಲಾದಂತೆ ವಿಜ್ಞಾನ ಹಾಗೂ ಆಧ್ಯಾತ್ಮಿಕತೆಗಳ ನಡುವೆ ಯಾವುದೇ ವಿರೋಧಭಾವವಿಲ್ಲ. ವ್ಯತಿರಿಕ್ತವಾಗಿ ಇವೆರಡರ ವಿವೇಚನಾಪೂರ್ಣ ಸಂಗಮದಿಂದ ಇಡೀ ಜಗತ್ತಿನಲ್ಲಿ ಶಾಂತಿ, ಸಮೃದ್ಧಿಗಳು ನೆಲೆಸಿ, ಮಾನವ ನಾಗರಿಕತೆ ಇನ್ನಷ್ಟು ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ವಾಸ್ತವವಾಗಿ ಹೇಳುವುದಾದರೆ, ಮಾರಕ ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸುತ್ತಿರುವ ಹಿನ್ನೆಲೆಯಲ್ಲಿ, ವಿಜ್ಞಾನ–ಆಧ್ಯಾತ್ಮಿಕತೆಗಳ ಸಂಗಮವಾಗಬೇಕಾದ್ದು ಅತ್ಯಂತ ಜರೂರಿನ ಹಾಗೂ ಆವಶ್ಯಕವಾದ ವಿದ್ಯಮಾನವಾಗಿದೆ.

ಈ ಕಿರುಹೊತ್ತಗೆಯಲ್ಲಿ 'ಸರ್ವೋದಯ'ದ ವಿವಿಧ ಅಂಶಗಳನ್ನು ಕುರಿತಂತೆ, ವಿನೋಬಾ ಅವರ ಬರಹಗಳು ಮತ್ತು ಸಂವಾದಗಳಿಂದ ಆಯ್ದ ಉದ್ಧೃತ ಭಾಗಗಳ ಮೂಲಕ, ಸಂಕ್ಷಿಪ್ತವಾಗಿ ಹಾಗೂ ಕೆಲಮಟ್ಟಿಗೆ ಕ್ರಮಬದ್ಧವಾಗಿ ನಿರೂಪಿಸಲಾಗಿದೆ. ಮೂಲತಃ ಮರಾಠಿ ಅಥವಾ ಹಿಂದಿಯಲ್ಲಿರುವ ಈ ಮೂಲ ಭಾಗಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸುವ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡಿದ್ದೇನೆ. ಪ್ರಕರಣಗಳನ್ನು ಮಂಡಿಸಿದ ಅನುಕ್ರಮದ ಹೊಣೆಗಾರಿಕೆಯೂ ನನ್ನದೇ ಆಗಿದೆ. ಆದರೆ ಅವುಗಳ ಭಾಷಾಂತರ ಹಾಗೂ ಜೋಡಣೆಗೆ ಸಂಬಂಧಿಸಿದಂತೆ, ಹೇಳುವುದಾದರೆ ವಿನೋಬಾ ಅವರು ಮೂಲತಃ ಸಮರ್ಥಿಸಿದ ಯಾವುದೇ ಹೇಳಿಕೆಯ ಅರ್ಥವನ್ನು ನಾನು ವಿರೂಪಗೊಳಿಸಿಲ್ಲ ಅಥವಾ ಯಾವುದೇ ಹೊಸ ಅರ್ಥವನ್ನು ಸೇರಿಸಿಲ್ಲ.

'ಸರ್ವೋದಯ'ದ ಸಮಗ್ರ ವಿಚಾರಧಾರೆಯನ್ನು ಓದುಗರಿಗೆ ತಿಳಿಯಪಡಿಸುವುದೇನೂ ಈ ಉದ್ಧೃತ ಭಾಗಗಳ ಉದ್ದೇಶವಲ್ಲ. 'ಸರ್ವೋದಯ'ದ ಬಗ್ಗೆ ಸಂಪೂರ್ಣವಾಗಿ ತಿಳಿಯಬಯಸುವ ಓದುಗರು, ಗಾಂಧೀಜಿ ಹಾಗೂ ವಿನೋಬಾಜಿ ಅವರ ಮೂಲ ಕೃತಿಗಳನ್ನು ಸಂಪೂರ್ಣವಾಗಿ ಪರಾಮರ್ಶಿಸಬೇಕು ಮತ್ತು ಇತರ ಅನೇಕ ಪ್ರಸಿದ್ಧ ಲೇಖಕರ ಗ್ರಂಥಗಳನ್ನು ಓದಬೇಕು. ಆದರೆ ಈ ಉದ್ಧೃತ ಭಾಗಗಳು ಓದುಗರಿಗೆ, ಮುಖ್ಯವಾಗಿ ಯುವಜನರಿಗೆ, 'ಸರ್ವೋದಯ'ದ ಕ್ರಾಂತಿಕಾರಕ ಸ್ವರೂಪದ ಬಗ್ಗೆ ಪ್ರಾರಂಭಿಕ ಪರಿಚಯವನ್ನು ಮಾಡಿಕೊಡುತ್ತವೆ. ಹಾಗೂ ನಮ್ಮ ದೇಶದಲ್ಲಿ ಸಾಗುತ್ತಿರುವ ಒಂದು ಅಪೂರ್ವ ಮೌನ ಕ್ರಾಂತಿಯಲ್ಲಿ ಭಾಗವಹಿಸುವಂತೆ ಅವರಿಗೆ ಪ್ರಚೋದನೆ ನೀಡುತ್ತವೆ ಎಂದು ನಾನು ನಂಬಿದ್ದೇನೆ.



ಅವರು ಹಾಗೆ ಭಾಗವಹಿಸಿದರೆ, ಆಗ ಅವರಿಗೆ ಸಮೃದ್ಧ ಅನುಭವ ಉಂಟಾಗುವುದರಲ್ಲಿ ನನಗೆ ಸಂದೇಹವಿಲ್ಲ. ಅಲ್ಲದೆ, ಫ್ರೆಂಚ್ ಕ್ರಾಂತಿಯ ಸಮಯದಲ್ಲಿ ಕವಿ ವರ್ಡ್ಸ್‌ವರ್ತ್ ಬರೆದ ಕವನವೊಂದರ ಈ ಕೆಳಗಿನ ಎರಡು ಸಾಲುಗಳು ಸದಾ ನಮ್ಮ ಸ್ಮರಣೆಯಲ್ಲಿ ಇರುತ್ತವೆ ಎಂದೂ ನಾನು ಭಾವಿಸಿದ್ದೇನೆ.

"ಅರುಣೋದಯ ಕಾಲದಲ್ಲಿ
ಬದುಕಿರುವುದು ಪರಮಸುಖ;
ಸದಾ ತಾರುಣ್ಯವನ್ನು
ಹೊಂದಿರುವುದೇ ಸ್ವರ್ಗಸುಖ"

ವಿಜ್ಞಾನಾಶ್ರಮ,
ಕೈನಾಡ್
ಜುಲೈ 17, 1964

**ವಸಂತ ನರ್ಗೋಲ್ಕರ್**

**Blank Page**



## ಪರಿವಿಡಿ


| | |
|---|---|
| ಮೊದಲ ಮಾತು | v |
| ಶುಭಾಕಾಂಕ್ಷೆ | vi |
| ಪ್ರಾಸ್ತಾವಿಕ ನುಡಿ | viii |
| ಪೀಠಿಕೆ | x |
| ಅರಿಕೆ | xvi |
| ಮೂಲ ಸಂಪಾದಕರ ಪ್ರಸ್ತಾವನೆ | xvii |
| ಕೃತಜ್ಞತೆಗಳು | xviii |
| ಮುನ್ನುಡಿ | xix |
| ೧. ಸರ್ವೋದಯ ಮತ್ತು ಸಂಪೂರ್ಣ ಕ್ರಾಂತಿ | ೧ |
| ೨. ಜೀವನದ ಆದರ್ಶ | ೬ |
| ೩. ಭಾರತ ಮತ್ತು ಅದರ ಧ್ಯೇಯ | ೧೧ |
| ೪. ಸೇವೆ | ೧೬ |
| ೫. ಶಿಕ್ಷಣ | ೧೯ |
| ೬. ಕಾಯಕಗೌರವ | ೨೩ |
| ೭. ನೀತಿಶಾಸ್ತ್ರ | ೨೬ |
| ೮. ಧರ್ಮ | ೩೦ |
| ೯. ಭೂದಾನ ಮತ್ತು ಗ್ರಾಮದಾನ | ೩೪ |
| ೧೦. ಗ್ರಾಮಸ್ವರಾಜ್ಯ ಮತ್ತು ಶಾಂತಿಸೇನೆ | ೩೯ |
| ೧೧. ಅಹಿಂಸೆ ಮತ್ತು ನೂತನ ಲೋಕವ್ಯವಸ್ಥೆ | ೪೩ |

**Blank Page**



# ಕ್ರಾಂತಿಕಾರಕ ಸರ್ವೋದಯ

# ೧ ಸರ್ವೋದಯ ಮತ್ತು ಸಂಪೂರ್ಣ ಕ್ರಾಂತಿ

೧. ನಾನು ಯುವಜನರಿಂದ ತುಂಬ ನಿರೀಕ್ಷೆಗಳನ್ನು ಇರಿಸಿಕೊಂಡಿದ್ದೇನೆ...... ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಕ್ರಾಂತಿಯುಂಟಾಗುವಂತೆ ಮಾಡುವುದೇ ನಮ್ಮ ಉದ್ದೇಶ. ಆದುದರಿಂದಲೇ ಜೀವನದ ಎಲ್ಲ ರಂಗಗಳಿಗೂ ವ್ಯಾಪಿಸುವಂತಹ ಸಂಪೂರ್ಣಕ್ರಾಂತಿಯನ್ನು ನೀವು ಮಾಡುತ್ತೀರಿ ಎಂಬುದು ನನ್ನ ನಂಬಿಕೆಯಾಗಿದೆ. ........ ಒಂದು ಕ್ರಾಂತಿ ಸಂಭವಿಸಬೇಕಾದರೆ ಅದು ಯುವಜನರಿಂದ ಹಾಗೂ ವಿದ್ಯಾರ್ಥಿಗಳಿಂದಲೇ ಪ್ರಾರಂಭವಾಗಬೇಕು........ಏಕೆಂದರೆ ಅವರು ಮಾತ್ರ ಹೊಸ ಚಿಂತನೆಗಳನ್ನೂ ಭಾವನೆಗಳನ್ನೂ ಜಗತ್ತಿಗೆ ಪರಿಚಯಮಾಡಿಕೊಡಬಲ್ಲರು, ಅಲ್ಲದೆ ಧೈರ್ಯದಿಂದ ಕಾರ್ಯಪ್ರವೃತ್ತರಾಗಬಲ್ಲರು.

೨. ಕೇವಲ ಘೋಷಣೆಗಳಿಂದ ಕ್ರಾಂತಿ ಸಂಭವಿಸಲಾರದು. ಕ್ರಾಂತಿಯನ್ನು ಮಾಡಲು ಎಲ್ಲ ದಿಸೆಗಳಲ್ಲಿ ಪ್ರಯತ್ನ ಮಾಡಬೇಕಾದ ಅಗತ್ಯವಿದೆ. ಜೀವನದ ಎಲ್ಲ ಕ್ಷೇತ್ರಗಳಲ್ಲಿ ಬದಲಾವಣೆಯಾಗಬೇಕಾಗಿದೆ........ "ವಿಷಯಗಳ ಸಾರಸತ್ತ್ವಗಳನ್ನು" ಭೇದಿಸಿ ನೋಡಬಲ್ಲ ಒಳನೋಟವನ್ನು ಆಧರಿಸಿದ ಜೀವನಸಿದ್ಧಾಂತವು ಕ್ರಾಂತಿಗೆ ಆವಶ್ಯಕ. ನಮ್ಮ ಸುತ್ತಮುತ್ತಲಿನ ಸನ್ನಿವೇಶಗಳ ಹಿಂದಿರುವಂತಹ ವಿಷಯಗಳ ಅರ್ಥವನ್ನು ಭೇದಿಸಿ ನೋಡಿ ಸ್ಪಷ್ಟವಾಗಿ ಅರಿಯುವುದು ಹಾಗೂ ಅರಿತ ಅರ್ಥಕ್ಕೆ ಅನುಗುಣವಾಗಿ ಕಾರ್ಯಪ್ರವೃತ್ತರಾಗುವುದೇ ಕ್ರಾಂತಿಕಾರಕ ಅಂತರ್ದೃಷ್ಟಿ. ಇತಿಹಾಸ ಸನ್ನಿವೇಶವೊಂದರ ಗರ್ಭದಲ್ಲಿ ಹುದುಗಿರುವ ವಿಶೇಷ ಗುಣಲಕ್ಷಣಗಳನ್ನು ತಿಳಿದುಕೊಳ್ಳುವ ಈ ಒಳನೋಟವನ್ನು ಆಧರಿಸಿದ ಸಿದ್ಧಾಂತವೇ ಕ್ರಾಂತಿಕಾರಕ ಸಿದ್ಧಾಂತ. ಇಂತಹ ಒಳನೋಟವಿರುವಲ್ಲಿ ಮಾತ್ರ ಕ್ರಾಂತಿ ಸಂಭವಿಸಲು ಸಾಧ್ಯ.... 'ಸಾಮ್ಯ–ಯೋಗ'ದ* ಆಚರಣೆಯು ಕ್ರಾಂತಿಕಾರಕ ಸಿದ್ಧಾಂತದ ಮೊದಲನೆಯ ಮುಖ್ಯಲಕ್ಷಣ........ ಕಾಯಕಗೌರವ ತತ್ತ್ವಕ್ಕೆ ನಿಷ್ಠೆ ತೋರಿಸುವುದು ಎರಡನೆಯ ಲಕ್ಷಣ......... ಮೂರನೆಯದು ಅತ್ಯಂತ ಮುಖ್ಯವಾದುದು. ವಿಶೇಷವಾಗಿ ಯುವಜನರು ಈ ಬಗ್ಗೆ ಪ್ರತಿಜ್ಞೆ ಮಾಡಬೇಕು. .........ನೀವು, ಯುವಜನರು ಎಲ್ಲ ಸಾಮಾಜಿಕ

---

* ವಿನೋಬಾಜಿ ಪ್ರಕಾರ 'ಸಾಮ್ಯ–ಯೋಗವೇ 'ಭಗವದ್ಗೀತೆ'ಯ ಮುಖ್ಯ ವಸ್ತು. ಸಮಚಿತ್ತತೆ, ಸಾಮಾಜಿಕ ಸಮಾನತೆ ಮತ್ತು ಪರಮಾತ್ಮನೊಂದಿಗೆ ಅನನ್ಯತೆ' ಇವೇ ಮಾನವನ ಜೀವನದ ಆದರ್ಶವಾಗಬೇಕು.

ಅಥವಾ ರಾಜಕೀಯ ಅನ್ಯಾಯಗಳ ವಿರುದ್ಧ ಹೋರಾಡುವ ಪ್ರತಿಜ್ಞೆಯನ್ನು ಸ್ವೀಕರಿಸಬೇಕು.

ಆದರೆ ಈ ಪ್ರತಿಜ್ಞೆಯಂತೆ ಕಾರ್ಯನಿರ್ವಹಿಸುವಾಗ ನಾವು ಹಿಂಸೆಯನ್ನು ಬಳಸಕೂಡದು. ಏಕೆಂದರೆ ಹಿಂಸೆಯ ಮೂಲಕ ಅನ್ಯಾಯಗಳ ವಿರುದ್ಧ ಹೋರಾಡುವುದು ಖಂಡಿತವಾಗಿ ಸಾಧ್ಯವಿಲ್ಲ.

೩. ಸ್ವತಃ "ದಾರಿತಪ್ಪುವುದರ" ಮೂಲಕ ಇತರರನ್ನೂ ದಾರಿತಪ್ಪಿಸುವುದು ಕೆಲವು ಸಂತರ ಸ್ವಭಾವವಾಗಿದೆ. ಅಲ್ಲದೆ, ಮುಖ್ಯವಾಗಿ ಯುವಜನರ ದಾರಿ ತಪ್ಪಿಸುವುದೇ ಅಂಥವರ ಜೀವನಧ್ಯೇಯವಾಗಿದೆ.

೪. ಒಬ್ಬ ವ್ಯಕ್ತಿಯ ಒಳಿತಿನಲ್ಲಿ ಎಲ್ಲರ ಒಳಿತು ಅಡಗಿದೆಯೆಂಬುದು 'ಸರ್ವೋದಯ' ಪರಿಕಲ್ಪನೆಯ ಅರ್ಥ. ಇತರರ ಹಿತಾಸಕ್ತಿಗಳಿಗೆ ವಿರುದ್ಧವಾದ ಹಿತಾಸಕ್ತಿಗಳನ್ನು ಒಬ್ಬ ವ್ಯಕ್ತಿ ಹೊಂದಿರಲು ಸಾಧ್ಯವೆಂಬುದೇ ಕಲ್ಪನಾತೀತ. ಇದೇ ನೀತಿಯಲ್ಲಿ ಇತರ ಸಮುದಾಯ, ವರ್ಗ ಅಥವಾ ದೇಶಗಳ ಹಿತಾಸಕ್ತಿಗಳಿಗೆ ವಿರುದ್ಧವಾದ ಹಿತಾಸಕ್ತಿಗಳನ್ನು ಯಾವುದೇ ಸಮುದಾಯ, ವರ್ಗ ಅಥವಾ ದೇಶವು ಹೊಂದಿರುವುದಿಲ್ಲ. ಪರಸ್ಪರ ವಿರುದ್ಧವಾದ ಹಿತಾಸಕ್ತಿಗಳು ಇರಬಹುದು ಎಂಬ ಅಭಿಪ್ರಾಯವೇ ಸರಿಯಲ್ಲ......ಅಲ್ಲದೆ ನಾವು ಹಾನಿಕರವಾದುದನ್ನೇ ಹಿತಾಸಕ್ತಿಯೆಂದೂ ಕೆಡುಕನ್ನೇ ಒಳಿತೆಂದೂ ಭಾವಿಸಿದ ಪಕ್ಷದಲ್ಲಿ, ಹಿತಾಸಕ್ತಿಗಳ ನಡುವೆ ಘರ್ಷಣೆ ಸಂಭವಿಸುವ ಸಾಧ್ಯತೆಯಿರುತ್ತದೆ.

೫. ರಾಜಕೀಯ ಅಧಿಕಾರವಿರುವ ಹುದ್ದೆಗಳಿಂದ ದೂರ ಉಳಿದಿರುವ, ಆದರೆ, ಸ್ವಂತ ಇಚ್ಛೆಯ ಅನುಸಾರ ನಡೆಯುವ ಸ್ವಾತಂತ್ರ್ಯವಿರುವ ಹಾಗೂ ಎಲ್ಲ ರೀತಿಯಲ್ಲಿ ಸೇವೆ, ತ್ಯಾಗ ಮತ್ತು ಅಧ್ಯಯನಗಳಿಗೇ ತಮ್ಮ ಬದುಕನ್ನು ಮುಡಿಪಾಗಿಟ್ಟ ಜನರ ಒಂದು ದೊಡ್ಡ ತಂಡವನ್ನು, ವಾತಾವರಣವನ್ನು ಪರಿಶುದ್ಧಗೊಳಿಸುವ ಹಾಗೂ ದೇಶದ ಸರ್ವಾಂಗೀಣ ಪ್ರಗತಿಯುಂಟಾಗುವಂತೆ ಮಾಡುವ ಕಾರ್ಯವನ್ನು ಸಾಧಿಸಬೇಕೆಂಬ ಸ್ಥಿರವಾದ ಅಡಿಪಾಯದ ಮೇಲೆ ರೂಪಿಸಿದಾಗ ಮಾತ್ರ, ಅಂತಹ ವ್ಯಕ್ತಿಗಳ ಗುಂಪನ್ನು ನಾನು 'ಸರ್ವೋದಯ ಸಮಾಜ' ಎಂದು ಕರೆಯುತ್ತೇನೆ. ಅದು ಎಲ್ಲರ ಕಲ್ಯಾಣಕ್ಕೆ ಮೀಸಲಾಗಿರುತ್ತದೆ........ 'ಸರ್ವೋದಯ' ಇನ್ನೊಂದು ಧಾರ್ಮಿಕ ಪಂಥವೇನೂ ಅಲ್ಲ.

೬. ಆಳುವವರು ಮತ್ತು ಆಳ್ವಿಕೆಗೆ ಒಳಗಾದವರ ನಡುವೆ ನಿಂತು ಕಾರ್ಯ ಪ್ರವೃತ್ತರಾಗುವವರನ್ನಷ್ಟೇ 'ಸರ್ವೋದಯವಾದಿಗಳು' ಎಂದು ಪರಿಗಣಿಸಬಹುದು. ಇವೆರಡೂ ವರ್ಗದವರು ಎಸಗಿದ ತಪ್ಪುಗಳನ್ನು ಎತ್ತಿಹೇಳುವುದು, ಅವರ ನಡುವಣ ಸದಾಶಯಗಳನ್ನು ಬೆಳೆಸುವುದು, ಒಂದು ವರ್ಗದವರು ಇನ್ನೊಂದು ವರ್ಗದವರಿಗೆ ಏನು ಹೇಳಬೇಕೆಂದು ಪ್ರಾಮಾಣಿಕವಾಗಿ ತಿಳಿಸುವ ಮಧ್ಯವರ್ತಿಗಳಾಗಿ



ಕೆಲಸಮಾಡುವುದು ಹಾಗೂ ಜನರ ಅಧಿಕಾರವನ್ನು ಕ್ರೋಡೀಕರಿಸುವುದು ಇವೇ 'ಸರ್ವೋದಯವಾದಿ'ಗಳ ಕಾರ್ಯ. ಆದರೆ ಅವರು ಇವೆರಡು ವರ್ಗಗಳಿಗೆ ಸೇರಿದವರಿಂದ ದೂರ ಇರುತ್ತಾರೆ; ಇವೆರಡು ಗುಂಪಿನವರ ಸೇವೆಯನ್ನೂ ಪ್ರಾಮಾಣಿಕವಾಗಿ ಮಾಡುತ್ತಾರೆ... ಇವರು ಎಲ್ಲರನ್ನೂ ಪ್ರೀತಿಸುತ್ತಾರೆ. ಆದರೆ ಜನರ ಯಾವುದೇ ಪಕ್ಷ ಅಥವಾ ಪಂಗಡಕ್ಕೆ ಸೇರುವುದಿಲ್ಲ...... ಮಾನವರೆಂದಷ್ಟೇ ಭಾವಿಸಿ ಎಲ್ಲರ ಸೇವೆಯನ್ನು ಮಾಡುತ್ತಾರೆ. ಗಂಗಾನದಿಯ ಹರಿವು, ದನವಿರಲಿ, ಹುಲಿಯಿರಲಿ ಅಥವಾ ಆಡೇ ಇರಲಿ, ಯಾರನ್ನೂ ಕುರಿತಂತೆ ಎಂದೂ ವಿಚಾರಿಸುವುದಿಲ್ಲ. ನಿಮಗೆ ಬಾಯಾರಿಕೆಯಾಗಿದ್ದರೆ, ಅದನ್ನು ತಣಿಸುವುದು ನನ್ನ ಕರ್ತವ್ಯ ಎಂದಷ್ಟೇ ಅದು ಹೇಳುತ್ತದೆ. ಗಂಗಾನದಿಯ ಹರಿವು ಪ್ರಾಣಿಪ್ರಾಣಿಗಳ ನಡುವೆ ಯಾವುದೇ ವ್ಯತ್ಯಾಸ ಮಾಡದೆ ಇರುವಂತೆ, ಎಂದರೆ ಎಲ್ಲ ಜೀವಿಗಳನ್ನೂ ಸರಿಸಮವಾಗಿ ಭಾವಿಸಿ ಉಪಚರಿಸುವಂತೆ, ಗಾಂಧೀಜಿ ಅವರು ಎಲ್ಲರನ್ನೂ ಒಂದೇ ರೀತಿ ಪ್ರೀತಿಸುವಂತೆ ನಮಗೆ ಬೋಧಿಸಿದ್ದಾರೆ. ಯಾವುದೇ ವ್ಯಕ್ತಿಯ ಪಕ್ಷ ಯಾವುದು, ಜಾತಿ ಯಾವುದು ಎಂಬುದನ್ನು ಎಂದೂ ನೋಡಬೇಡಿ; ಯಾವುದೇ ರಾಜಕೀಯ ಅಧಿಕಾರವನ್ನು ಎಂದೂ ಸ್ವೀಕರಿಸಬೇಡಿ.

೭. ಭೂದಾನ ಮತ್ತು ಗ್ರಾಮದಾನ ಚಳವಳಿಗಳ ಅನಂತರ, ದೀನ ದಲಿತರಿಗೆ ಮರುವಸತಿ ಕಲ್ಪಿಸಿಕೊಡಬೇಕು, ಅವರ ಸಂಸ್ಕೃತಿಯು ಅಭಿವೃದ್ಧಿ ಹೊಂದಬೇಕಾಗಿದೆ. 'ಗ್ರಾಮ–ಸ್ವರಾಜ್ಯ'ವನ್ನು ಸ್ಥಾಪಿಸಬೇಕು. ಮೂಲ ಶಿಕ್ಷಣವನ್ನು ಪ್ರತಿಯೊಬ್ಬರಿಗೂ ನೀಡಬೇಕು. 'ಗ್ರಾಮದಾನ' ವೆಂಬುದು ಒಂದು ಅಡಿಪಾಯವಷ್ಟೇ ಆಗಿದ್ದು, ಅದರ ಮೇಲೆ 'ಸರ್ವೋದಯ'ದ ಸಮಗ್ರ ಭವನವನ್ನು ನಿರ್ಮಿಸಬೇಕು.

೮. ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ, ಅವರು ರಾಜಕೀಯದಲ್ಲಿ ಭಾಗವಹಿಸಬೇಕೇ ಅಥವಾ ಕೂಡದೇ ಎಂಬುದು ಮತ್ತೆ ಮತ್ತೆ ಕೇಳಿಬರುತ್ತಿರುವ ಪ್ರಶ್ನೆಯಾಗಿದೆ. ನಾವು ಈಗಾಗಲೇ ವಿಶ್ವದ ಪ್ರಜೆಗಳಾಗಿದ್ದೇವೆ ಎಂಬುದನ್ನು ಈಗ ಮೊತ್ತ ಮೊದಲು ಅರಿಯಬೇಕಾದ ಅಗತ್ಯವಿದೆ. ವಿಜ್ಞಾನವು ಗತ್ಯಂತರವಿಲ್ಲದೆ ನಮ್ಮನ್ನು ವಿಶ್ವಪ್ರಜೆಗಳನ್ನಾಗಿ ಮಾಡಿಬಿಟ್ಟಿದೆ. ಇಂದು ಇಡೀ ಜಗತ್ತೇ ಸಂಕುಚಿತಗೊಂಡು, ಎಲ್ಲ ಸ್ಥಳಗಳೂ ಹಿಂದೆಂದೂ ಕಂಡುಬರದಷ್ಟು ಹತ್ತರ ಹತ್ತಿರವಾಗಿದೆ. ಆದುದರಿಂದ ಕೆಲಕಾಲ ಕೆಲಮಟ್ಟಿನ ಹೋರಾಟ ಅಥವಾ ಗುದ್ದಾಟಗಳು ಇರುತ್ತವೆ. ಆದರೆ ಅನಂತರ ಪರಸ್ಪರ ಒಬ್ಬರನ್ನು ಇನ್ನೊಬ್ಬರು ಪ್ರೀತಿಯಿಂದ ಆಲಿಂಗಿಸುತ್ತಾರೆ. ಅನೇಕ ದೇಶಗಳು ಪರಸ್ಪರ ದೂರ, ಒಂಟಿಯಾಗಿರಲು ಇನ್ನೂ ಬಹಳಕಾಲ ಸಾಧ್ಯವಿಲ್ಲ. ಆದುದರಿಂದಲೇ ರಾಜಕೀಯದ ಬಗ್ಗೆ ನಾವು ತುಂಬ ಭಿನ್ನವಾದ ಇನ್ನೊಂದು ದೃಷ್ಟಿಕೋನದಿಂದ ಆಲೋಚಿಸಬೇಕು. ನಾನು ರಾಜಕೀಯವನ್ನು 'ಲೋಕನೀತಿ'ಯೆಂದು ಪ್ರಜಾಸತ್ತಾತ್ಮಕ ಮೌಲ್ಯಗಳ ವಿಜ್ಞಾನವೆಂದು ಕರೆಯುತ್ತೇನೆ.

ನಾವೆಲ್ಲ ಈಗ ಸಾಮಾಜಿಕ ಸಂಘಟನೆಯ ಒಂದು ಹೊಸ ವ್ಯವಸ್ಥೆಯ ಸದಸ್ಯರಾಗಬೇಕು, ಇಲ್ಲಿ ಯಾರೊಬ್ಬರೂ ಇನ್ನೊಬ್ಬರ ಮೇಲೆ ಅಧಿಕಾರ ನಡೆಸುವುದಿಲ್ಲ. ಆದರೆ ಪ್ರತಿಯೊಬ್ಬ ವ್ಯಕ್ತಿಯೂ ಸ್ವತಃ ತನ್ನ ಗುಣಸ್ವಭಾವಗಳ ಮೇಲೆ ಆತ್ಮಸಂಯಮದ ಮೂಲಕ ನಿಯಂತ್ರಣವನ್ನು ಹೊಂದಿರುತ್ತಾನೆ. ನಾವು ಇಂತಹ ಒಂದು ರಾಜಕೀಯವನ್ನು ವಿಕಾಸಗೊಳಿಸಬೇಕಾಗಿದೆ ; ಇಂತಹ ಒಂದು ಸಮಾಜವನ್ನು ಸ್ಥಾಪಿಸಬೇಕಾಗಿದೆ. ಆದುದರಿಂದ 'ವಿಶ್ವ ಮಾನವ'ನೊಬ್ಬನನ್ನು ರೂಪಿಸುವ ದಿಸೆಯಲ್ಲಿ ಕಾರ್ಯಪ್ರವೃತ್ತವಾಗುವ ರಾಜಕೀಯವನ್ನು, ಈ ಶಬ್ದದ ಹಳೆಯ ಅರ್ಥವನ್ನು ಹೊಂದಿರುವ 'ರಾಜಕೀಯ'ವೆಂದು ಕರೆಯಲಾಗದು. ಆದುದರಿಂದಲೇ ನಾನು 'ಲೋಕ–ನೀತಿ'ಯೆಂದು ಕರೆಯುವ, ನಿಜವಾದ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಸ್ಥಾಪಿಸುವ ವಿಜ್ಞಾನದಲ್ಲಿ ಪರಿಣಿತರಾಗಬೇಕೆಂದು ವಿದ್ಯಾರ್ಥಿಗಳನ್ನು ಪ್ರಚೋದಿಸುತ್ತೇನೆ.

೯. 'ಸರ್ವೋದಯ' ವಿಚಾರಧಾರೆಯ ಅಂತರಾರ್ಥವು ಆಳವಾಗಿದೆ. 'ಸರ್ವೋದಯ'ವನ್ನು ಅನುಷ್ಠಾನಕ್ಕೆ ತರುವ ಪ್ರಯತ್ನವನ್ನಷ್ಟೇ ಮಾಡಬಹುದು; ಯಾರೊಬ್ಬನೂ ತನ್ನ ಜೀವನದಲ್ಲಿ ಅದನ್ನು ಎಂದೂ ಸಂಪೂರ್ಣವಾಗಿ ಆಚರಣೆಗೆ ತರಲಾರ. ಏಕೆಂದರೆ, ಜೀವನದಲ್ಲಿ 'ಸರ್ವೋದಯ'ವನ್ನು ಸಂಪೂರ್ಣವಾಗಿ ಆಚರಣೆಗೆ ತರುವ ಸಾಮರ್ಥ್ಯವನ್ನು ಪಡೆಯಲು ದೈವಸಾಕ್ಷಾತ್ಕಾರ ಅತ್ಯಗತ್ಯ. ಆದುದರಿಂದ ದೈವಸಾಕ್ಷಾತ್ಕಾರವೆಂದರೆ ಏನು ಎಂಬುದನ್ನು ನಾವು ಮೊತ್ತಮೊದಲು ಅರ್ಥಮಾಡಿಕೊಳ್ಳಬೇಕು....... ಪರಮಾತ್ಮನನ್ನು ಹುಡುಕುವುದು ಹೇಗೆ? ....... ಪರಮಾತ್ಮನೇ ಸದ್ಗುಣದ ಅವತಾರ; ಸತ್ಯ, ಪ್ರೀತಿ ಮತ್ತು ಅನುಕಂಪಗಳಂತಹ ಸದ್ಗುಣಗಳು ಅವನಲ್ಲಿ ಸಮೃದ್ಧವಾಗಿವೆ. ಇಂತಹ ಎಲ್ಲ ಮೌಲ್ಯಗಳನ್ನೂ ಸಂಪೂರ್ಣವಾಗಿ ಹೊಂದಿರುವುದೇ ದೈವಸಾಕ್ಷಾತ್ಕಾರ.

ನಾವು ಸಂಧಿಸುವ ಪ್ರತಿಯೊಬ್ಬ ವ್ಯಕ್ತಿಯೂ ಹೊಂದಿರುವ ಸದ್ಗುಣಗಳನ್ನು ತಿಳಿದುಕೊಳ್ಳಲು ನಾವು ಕಲಿಯಬೇಕು. ಅವುಗಳನ್ನು ಗುರುತಿಸಿದ ಅನಂತರ, ಅವುಗಳನ್ನು ಹೃದಯದಲ್ಲಿ ನೆಲೆಗೊಳಿಸಬೇಕು....... ಅಂತಹ ವಿಶೇಷ ಗುಣ ಸ್ವಭಾವಗಳನ್ನು ತನ್ನಲ್ಲಿಯೇ ಬೆಳೆಸಿಕೊಳ್ಳಲು ವ್ಯಕ್ತಿ ಪ್ರಯತ್ನಿಸಬೇಕು........ಪರಮಾತ್ಮನ ಗುಪ್ತ ಸಾಮರ್ಥ್ಯವನ್ನು ಸಾಕ್ಷಾತ್ಕಾರಪಡಿಸಿಕೊಳ್ಳುವುದಕ್ಕಾಗಿಯೇ ನನ್ನ ದಾನಗಳು ಸೇವೆಯ, ತ್ಯಾಗದ ಅಥವಾ 'ಸತ್ಯಾಗ್ರಹ'ದ ಸಮಗ್ರ ಕಾರ್ಯಕ್ರಮ.

೧೦. 'ಸರ್ವೋದಯ'ದ ಸಮಗ್ರ ಕಾರ್ಯಕ್ರಮವು, ಇತರರ ಒಳ್ಳೆಯ ಗುಣಸ್ವಭಾವಗಳನ್ನು ಮೆಚ್ಚುವ ಸಿದ್ಧಾಂತವನ್ನು ಆಧರಿಸಿದೆ. ಇತರರ ಒಳ್ಳೆಯ ಗುಣಸ್ವಭಾವಗಳನ್ನು ಮೆಚ್ಚಿಕೊಳ್ಳಲು ಕಲಿತರೆ, ಆಗ ಪರಮಾತ್ಮನನ್ನು ಕಂಡುಹುಡುಕ ಬಹುದೆಂದು ನಿರೀಕ್ಷಿಸಬಹುದು. ದೇವರ ಸ್ವರೂಪದ ಬಗೆಗಿನ ಈ ನೋಟವು ಆಂಶಿಕವೆಂಬಂತೆ ಕಂಡುಬರಬಹುದಾದರೂ, ವ್ಯಕ್ತಿ ಇಂತಹ ನೋಟವನ್ನು



ಹೊಂದಲೇಬೇಕು. ಸಂಪೂರ್ಣ ದೈವಸಾಕ್ಷಾತ್ಕಾರವು ಒಮ್ಮೆಲೇ ಉಂಟಾಗಲು ಸಾಧ್ಯ ಎಂದು ನಿರೀಕ್ಷಿಸಕೂಡದು. ಈ ದಿನ ಪರಮಾತ್ಮನ ಒಂದು ಮುಖದ ಸಾಕ್ಷಾತ್ಕಾರವಷ್ಟೇ ಆಗಿ ನಾಳೆ ಇನ್ನೊಂದು ಮುಖದ ಸಾಕ್ಷಾತ್ಕಾರವಾಗಬಹುದು. ದಾನಗಳ ಕಾರ್ಯಕ್ರಮ ಈ ದಿನ ಸಂಪೂರ್ಣಗೊಂಡಿತೆಂದು ಭಾವಿಸಿ; ಹೀಗೆ ನಾವು ಇಂದು ಪರಮಾತ್ಮನ ಒಂದು ಮುಖದ ನೋಟವನ್ನು ಪಡೆದೆವು....... ಜನರ ಹೃದಯಗಳಲ್ಲಿ ಅಡಗಿದ ಔದಾರ್ಯದ ಮೌಲ್ಯವನ್ನು ತಿಳಿಯಲು ನಾವು ಇಂದು ಕಲಿತೆವು. 'ಶಾಂತಿಸೇನೆ'ಯ ಕಾರ್ಯಕ್ರಮವನ್ನು ಜನರು ಹಮ್ಮಿಕೊಂಡ ಪಕ್ಷದಲ್ಲಿ, ಎಂದರೆ ಮಾಡುವ ಅಥವಾ ಮಡಿಯುವ ಸಂಕಲ್ಪವನ್ನು ಜನರು ಮಾಡಿದ ಪಕ್ಷದಲ್ಲಿ, ಅಗತ್ಯವೆನಿಸಿದರೆ ಆತ್ಮಬಲಿದಾನದ ಮೂಲಕವಾದರೂ ಸರಿಯೇ ದಂಗೆಗಳ ಸಮಯದಲ್ಲಿ ಶಾಂತಿಯನ್ನು ಸ್ಥಾಪಿಸಲು ಸಿದ್ಧರಾದ ಪಕ್ಷದಲ್ಲಿ, ಆಗ ಜನರ ಹೃದಯಗಳಲ್ಲಿ ಸ್ಥೈರ್ಯ ನೆಲಸುವುದು ಸಾಧ್ಯ......... ಈ ರೀತಿಯಾಗಿ ನಾವು ಸ್ಥೂಲ ಸಾಮಾಜಿಕ ಮಹತ್ತ್ವದಿಂದ ಕೂಡಿದ ಇಂತಹ ಕೆಲವು ಕಾರ್ಯಕ್ರಮಗಳನ್ನು ಒಂದರ ಅನಂತರ ಇನ್ನೊಂದರಂತೆ ಕೈಗೊಂಡರೆ, ಎಂದರೆ ಹಂತಹಂತವಾಗಿ ಜನರ ಬಹುಮುಖವಾದ ಸದ್ಗುಣಗಳನ್ನು ಮೆಚ್ಚುವುದನ್ನು ಕಲಿತುಕೊಂಡರೆ, ಆಗ ನಮಗೆ ದೈವಸಾಕ್ಷಾತ್ಕಾರವಾಗುವುದು ಸಾಧ್ಯ. ಇದೇ ಪರಮಾತ್ಮನನ್ನು ಸಮಗ್ರವಾಗಿ ಮತ್ತು ಸಂಪೂರ್ಣವಾಗಿ ಸಾಕ್ಷಾತ್ಕರಿಸಿಕೊಳ್ಳುವ ಕಾರ್ಯವಿಧಾನ.

ಇದು ಒಮ್ಮೆಲೇ ಸಾಧ್ಯವಾಗಲಾರದು. ಮಾನವರು ಜೀವಂತವಾಗಿರುವಷ್ಟು ದೀರ್ಘಕಾಲವೂ ಇಂತಹ ಪ್ರಯತ್ನವನ್ನು ನಿರಂತರವಾಗಿ ಮುಂದುವರಿಸಬೇಕು. ಆದುದರಿಂದಲೇ ಗಾಂಧೀಜಿ ಅವರು, ತಮ್ಮ ಪರಮಾತ್ಮನ ಅನ್ವೇಷಣೆ ಸಾಗುತ್ತಲೇ ಇದೆಯೆಂದೂ, ತಾವು ಇನ್ನೂ ಪರಮಾತ್ಮನನ್ನು ಮುಖಾಮುಖಿಯಾಗಿ ನೋಡಿಲ್ಲವೆಂದೂ ಆಗಾಗ ಹೇಳುತ್ತಿದ್ದರು. ಪರಮಾತ್ಮನನ್ನು ಕಂಡು ಹುಡುಕುವುದಕ್ಕಾಗಿಯೇ ನಮಗೆ ಈ ಜೀವನವನ್ನು ಅವನು ಅನುಗ್ರಹಿಸಿದ್ದಾನೆ....... ಆದುದರಿಂದ ನಾನು ದ್ವಿಪದಿಯೊಂದನ್ನು ರಚಿಸಿ, ಅದರಲ್ಲಿ 'ಸರ್ವೋದಯ'ದ ವಿಚಾರಧಾರೆಯನ್ನು ಮಂಡಿಸಲು ಪ್ರಯತ್ನಿಸಿದ್ದೇನೆ ಅದು ಹೀಗಿದೆ :

'ಬ್ರಹ್ಮ ಸತ್ಯಂ ಜಗತ್ ಸ್ಫೂರ್ತಿಂ ಜೀವನಂ ಸತ್ಯಶೋಧನಂ'

"ಉಪಾಧಿರಹಿತನಾದ ಬ್ರಹ್ಮನೇ ಸತ್ಯ; ಇಡೀ ವಿಶ್ವವನ್ನೇ ವ್ಯಾಪಿಸಿರುತ್ತದೆ. ವಿಶ್ವವು ಆ ಸತ್ಯದ ಕಂಪನಶೀಲ ತೋರಿಕೆಯಾಗಿದ್ದು, ನನಗೆ ಸದಾ ಸ್ಫೂರ್ತಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ. ನಿಜವಾಗಿ ಜೀವನವೇ ಆ ಸತ್ಯದ ಒಂದು ಹುಡುಕಾಟದಂತೆ."

* * * *

# ೨. ಜೀವನದ ಆದರ್ಶ

೧. ಎಲ್ಲ ಜೀವಿಗಳ ಬದುಕೂ ಆಸೆಗಳ ಆಟದಂತೆ. ಆಸೆಗಳನ್ನು ಹೊಂದಿರುವುದು ಎಲ್ಲ ಜೀವಿಗಳ ಅನಿವಾರ್ಯ ಲಕ್ಷಣ. ಜೀವನದ ಇತರ ಎಲ್ಲ ರೂಪಗಳಂತೆ, ಮಾನವನ ಜೀವನದಲ್ಲಿಯೂ ಆಸೆಗಳ ಆಟವೇ ಪ್ರಮುಖವಾಗಿದೆ. ಯಾವುದೇ ಆಸಕ್ತಿಗಳಿಲ್ಲದೆ ಗಮನ ಹರಿಸಿದಾಗ ಮಾತ್ರ ಇದೊಂದು ಆಟದಂತೆ ತೋರಿಬರುತ್ತದೆ. ಆದರೆ, ಇದರಲ್ಲಿ ತೊಡಗಿಕೊಂಡಿರುವ ವ್ಯಕ್ತಿ, ಆಸೆಗಳ ಆಕ್ರಮಣದಿಂದ ಘಾಸಿಗೊಳ್ಳುತ್ತಾನೆ. ಆದುದರಿಂದ ಆಸೆಗಳಿಂದ ಬಿಡುಗಡೆ ಹೊಂದುವುದೇ ಜೀವನದ ಅಂತಿಮ ಧ್ಯೇಯವಾಗಬೇಕೆಂದು ಅನುಭವಿಗಳಾದ ಸಂತರು ಒತ್ತಿ ಹೇಳಿದ್ದಾರೆ.

೨ 'ಈಶಾವಾಸ್ಯ ಉಪನಿಷತ್ತು' ವೇದಾಂತ ಸಿದ್ಧಾಂತವನ್ನು ಕುರಿತ ಒಂದು ಗ್ರಂಥ. ಈ ವಿಷಯಕ್ಕೆ ಸಂಬಂಧಪಟ್ಟಂತೆ, ಇತರ ಅನೇಕ ವಿವರಣಾತ್ಮಕ ವೇದಾಂತ ಕೃತಿಗಳಿವೆ. ಆದರೆ 'ಈಶಾವಾಸ್ಯ ಉಪನಿಷತ್ತಿನಲ್ಲಿ' ವೇದಗಳ ಸರ್ವಸಾರವೂ ನಮಗೆ ಲಭ್ಯವಾಗುತ್ತದೆ. ಅದರ ಮೊತ್ತ ಮೊದಲ ಶ್ಲೋಕದಲ್ಲಿಯೇ ಅದರ ಮುಖ್ಯ ಸಾರಾಂಶವನ್ನೂ ನಾವು ಪಡೆಯುತ್ತೇವೆ. **ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ । ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ ಧನಮ್ ॥ ಈಶಾ. ೧**

ವಿಶ್ವದಲ್ಲಿ ಇರುವುದೆಲ್ಲವನ್ನೂ ಪರಮಾತ್ಮನು ವ್ಯಾಪಿಸಿರುತ್ತಾನೆ ಎಂಬುದು ಈ ಶ್ಲೋಕದ ಒಟ್ಟು ಅರ್ಥ. ಪರಮಾತ್ಮನು ವ್ಯಾಪಿಸದೆ ಇರುವ ಯಾವದೇ ವಸ್ತು ವಿಶ್ವದಲ್ಲಿ ಇಲ್ಲ. ಅಸ್ತಿತ್ವದ ಪರಿಭಾಷೆಯಲ್ಲಿ ಏನಾದರೂ ಹೇಳಬೇಕಾದ ಪಕ್ಷದಲ್ಲಿ ಜಗತ್ತಿನಲ್ಲಿ ಪರಮಾತ್ಮನೊಬ್ಬನೇ ಇರುವುದು ಎಂದೇ ಹೇಳಬೇಕಾಗುತ್ತದೆ. ಅವನೊಬ್ಬನೇ ಸರ್ವಾಧಿಕಾರಿ; ಅವನೊಬ್ಬನೇ ಪರಮಪ್ರಭು. ಇದನ್ನು ತಿಳಿದುಕೊಂಡು ನಾವು ನಮ್ಮ ಎಲ್ಲವನ್ನೂ ಅವನಿಗೆ ಸಮರ್ಪಿಸಬೇಕು; ಅವನು ಕೊಡುವುದೆಲ್ಲವನ್ನೂ ದೈವಾನುಗ್ರಹವೆಂದು ಸ್ವೀಕರಿಸಬೇಕು.... ಈ ಚಿಕ್ಕ ಶ್ಲೋಕದಲ್ಲಿ, ಜೀವನದ ಮಹಾ ವಿಶ್ವ ಸಿದ್ಧಾಂತವೊಂದನ್ನು ಪ್ರತಿಪಾದಿಸಲಾಗಿದೆ; ಅಲ್ಲದೆ ಆ ಸಿದ್ಧಾಂತವನ್ನು ಅನುಷ್ಠಾನಕ್ಕೆ ತರುವ ವಿಧಾನವನ್ನು ತಿಳಿಸಲಾಗಿದೆ. ಪರಮಾತ್ಮನಿಗೆ ಸಂಪೂರ್ಣ ಶರಣಾಗುವುದು, ಎಲ್ಲವನ್ನೂ ಪರಮಾತ್ಮನ ಕೊಡುಗೆಯೆಂದು ಭಾವಿಸಿ ಸ್ವೀಕರಿಸುವುದು, ಇತರರ



ಬಗ್ಗೆ ಮಾತ್ಸರ್ಯಪಡದೆ ಇರುವುದು ಹಾಗೂ ಇತರರ ಸಂಪತ್ತುಗಳ ಬಗ್ಗೆ ದುರಾಸೆಪಡದೆ ಇರುವುದು–ಹೀಗೆ ಈ ಮಂತ್ರದಲ್ಲಿ ಜೀವನದ ಪರಿಪೂರ್ಣ ಆದರ್ಶವನ್ನು ನಮ್ಮ ಮುಂದೆ ಇಡಲಾಗಿದೆ.

೩. ನಮ್ಮ ಆತ್ಮವು ಜಗದ್ವ್ಯಾಪಕವಾಗಲು ಹಂಬಲಿಸುತ್ತ ಅವಿಶ್ರಾಂತವಾಗಿದೆ. ಇಡೀ ವಿಶ್ವವನ್ನೇ ಆಲಿಂಗಿಸಬೇಕು ಎಂಬ ಭಾವನೆ ಅದಕ್ಕೆ ಇದೆ. ಆದರೆ ನಾವೇ ಅದನ್ನು ಸಂಕುಚಿತಗೊಳಿಸಿದ್ದೇವೆ. ನಾವು ನಮ್ಮೊಳಗೆಯೇ ಅದನ್ನು ಬಂಧನದಲ್ಲಿ ಇರಿಸಿದ್ದೇವೆ. ನಮಗೇ ಅದರ ನೆನಪಿಲ್ಲ. ಬೆಳಗ್ಗಿನಿಂದ ಸಂಜೆಯವರೆಗೂ ದೇಹವನ್ನು ಮುದ್ದು ಮಾಡುವುದರಲ್ಲಿಯೇ ನಾವು ತೊಡಗಿರುತ್ತೇವೆ. ದೇಹದ ತೂಕ ಹೆಚ್ಚಾಗಿದೆಯೇ, ಅಥವಾ ಕಡಮೆಯಾಗಿದೆಯೇ ಎಂದು ನಿಖರವಾಗಿ ಅಳೆಯುವ ಕಾಳಜಿಯೊಂದೇ ನಮ್ಮ ಮನಸ್ಸಿನಲ್ಲಿ ಮುಖ್ಯವಾಗಿದೆ. ಇದಕ್ಕಿಂತ ಹೆಚ್ಚಿನ ಸಂತೋಷದ ಮೂಲ ಬೇರಾವುದೂ ಇಲ್ಲವೆಂಬಂತೆ ಕಂಡುಬರುತ್ತಿದೆ. ರಸನೇಂದ್ರಿಯದಂತಹ ಇಂದ್ರಿಯಗಳ ತೃಪ್ತಿಯಿಂದ ಸಿಗುವ ಸಂತೋಷವನ್ನು. ಪ್ರಾಣಿಗಳೂ ತಿಳಿದಿರುತ್ತದೆ. ತ್ಯಾಗ, ಆತ್ಮಸಂಯಮ, ಇಂದ್ರಿಯನಿಗ್ರಹ ಮತ್ತು ರುಚಿಕರ ಆಹಾರವನ್ನು ವರ್ಜಿಸುವುದು–ಇವೇ ಮುಂತಾದವುಗಳಿಂದ ಸಿಗುವ ಸಂತೋಷದ ಅನುಭವವನ್ನು ನೀವಿನ್ನೂ ಹೊಂದಿಲ್ಲ. ನೀವು ಹಸಿವಾಗಿದ್ದಾಗ ಕೂಡ, ಹಸಿದಿರುವವನೊಬ್ಬನಿಗೆ ಬಿಸಿ ಊಟವನ್ನು ಉಣಬಡಿಸುವುದರಿಂದ ಸಿಗುವ ಸಂತೋಷವನ್ನು ಅನುಭವಿಸಲು ಇನ್ನಾದರೂ ಕಲಿಯಿರಿ.

೪. ಅನೇಕ ಪ್ರಭಾವಗಳು ಮತ್ತು ಪರಿಣಾಮಗಳ ಫಲಿತಾಂಶವೇ ಮಾನವನ ಜೀವನ. ನಮ್ಮಿಂದ ಅಸಂಖ್ಯಾತ ಕಾರ್ಯಗಳು ನಡೆಯುತ್ತ ಇರುತ್ತವೆ. ಅವುಗಳ ಲೆಕ್ಕವನ್ನು ಇಡಲು ಹೋದರೆ ಅದೇ ಕೊನೆಯಿಲ್ಲದ ಒಂದು ಕೆಲಸವಾಗುತ್ತದೆ. ಬರಿಯ ಇಪ್ಪತ್ತನಾಲ್ಕು ಗಂಟೆಗಳ ಅವಧಿಯಲ್ಲಿ ನಾವು ಮಾಡಿದ ಕೆಲಸಗಳನ್ನು ಸ್ಥೂಲವಾಗಿ ದಾಖಲಿಸಿದಾಗ್ಯೂ, ಇವು ಅಸಂಖ್ಯಾತವಾಗಿರುತ್ತವೆ. ಉದಾಹರಣೆಗೆ, ತಿನ್ನುವುದು, ಕುಡಿಯುವುದು, ಕುಳಿತುಕೊಳ್ಳುವುದು, ನಿದ್ರಿಸುವುದು, ನಡೆಯುವುದು, ಅಲೆದಾಡುವುದು, ದುಡಿಯುವುದು, ಬರೆಯುವುದು, ಮಾತನಾಡುವುದು, ಓದುವುದು ಇತ್ಯಾದಿ. ಅಲ್ಲದೆ, ನಮ್ಮ ಮನಸ್ಸಿನಲ್ಲಿ ಯಾವಾಗಲೂ ಹಲವಾರು ಕನಸುಗಳು ಮತ್ತು ಪ್ರೀತಿ–ದ್ವೇಷಗಳ, ಗೌರವ–ಅಪಮಾನಗಳ ಹಾಗೂ ಸಂತೋಷ–ದುಃಖಗಳ ನಿರಂತರ ಪ್ರವಾಹ ಹರಿಯುತ್ತಿರುತ್ತದೆ. ಇವುಗಳಲ್ಲಿ ಪ್ರತಿಯೊಂದು ಭಾವವೂ ನಮ್ಮ ಮನಸ್ಸಿನ ಮೇಲೆ ತನ್ನ ಗಾಢಮುದ್ರೆಯನ್ನು ಒತ್ತುತ್ತದೆ. ಆದುದರಿಂದ ಜೀವನವೆಂದರೆ ಏನು ಎಂದು ಯಾರಾದರೂ ನನ್ನನ್ನು ಪ್ರಶ್ನಿಸಿದರೆ, ಅದೊಂದು ಮಾನಸಿಕ ಭಾವನೆಗಳು ಮತ್ತು ಪ್ರಭಾವಗಳ ಸಂಗ್ರಹವೆಂಬ ವ್ಯಾಖ್ಯೆಯನ್ನೇ ನಾನು ನೀಡುತ್ತೇನೆ.

ವ್ಯಾಪಾರಿಯೊಬ್ಬ ಪ್ರತಿ ದಿನ, ಪ್ರತಿ ತಿಂಗಳೂ ಹಾಗೂ ಪ್ರತಿ ವರ್ಷದ ಕೊನೆಯಲ್ಲಿ ಲಾಭ ಎಣಿಸುತ್ತಾನೆ ; ಲಾಭ ನಷ್ಟಗಳಿಗೆ ಸಂಬಂಧಿಸಿದಂತೆ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುತ್ತಾನೆ. ಇದೇ ಮಾತು ಜೀವನಕ್ಕೂ ನೇರವಾಗಿ ಅನ್ವಯಿಸುತ್ತದೆ. ವಿವಿಧ ಪ್ರಭಾವ ಹಾಗೂ ಪರಿಣಾಮಗಳು ಹೆಚ್ಚಾಗುವ ಹಾಗೂ ಕಡಿಮೆಯಾಗುವ ಸಂಭವವಿದ್ದು, ಕೆಲವು ಸಲ ಹೆಚ್ಚಿನ ಸಂಖ್ಯೆಯ ಇವುಗಳಲ್ಲಿ ಕೆಲವು ಮಾತ್ರ ಉಳಿಯುತ್ತವೆ ಜೀವನದ ಅಂತಿಮ ಕ್ಷಣ ಬಂದಾಗ, ಬದುಕಿನಲ್ಲಿ ಉಳಿದದ್ದೇನು ಎಂದು ಲೆಕ್ಕಾಚಾರ ಹಾಕಲು ಆತ್ಮವು ಪ್ರಯತ್ನಿಸುತ್ತದೆ...... ಜೀವನದ ಅಂತಿಮ ಕ್ಷಣದಲ್ಲಿ ನಿಮಗೇನು ಅನಿಸುತ್ತದೆಯೋ ಅದೇ ನಿಮ್ಮ ದೀರ್ಘಾವಧಿಯ ಕಾರ್ಯಚಟುವಟಿಕೆಗಳ ಫಲಿತಾಂಶವಾಗಿರುತ್ತದೆ.

ಸುಖಾಂತವಾಗುವುದೆಲ್ಲವೂ ಒಳ್ಳೆಯದೇ ಆಗಿರುತ್ತದೆ...ನಿಮ್ಮ ದೃಷ್ಟಿಯಲ್ಲಿರುವ ಜೀವನದ ಆದರ್ಶಕ್ಕೆ ಅನುಸಾರವಾಗಿ ಬದುಕಿನ ಯೋಜನೆಗಳನ್ನು ರೂಪಿಸಿಕೊಳ್ಳಿರಿ..... ಕೊನೆಯುಸಿರೆಳೆಯುವಾಗ ನಿಮ್ಮ ಮನಸ್ಸಿನಲ್ಲಿ ಯಾವುದು ಮುಖ್ಯವಾಗಿರಬೇಕೆಂದು ನೀವು ಬಯಸುತ್ತೀರೋ ಅದರ ಮೇಲೆ ಪ್ರಭಾವ ಬೀರುವ ದಿಸೆಯಲ್ಲಿ ನಿಮ್ಮ ಸಮಗ್ರ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಳ್ಳಿರಿ. ಆ ಗುರಿಯತ್ತಲೇ ಹಗಲಿರುಳೂ ನಿಮ್ಮ ಮನಸ್ಸು ಕೇಂದ್ರೀಕೃತವಾಗಿರಲಿ.

೫. ವಿಶ್ವಕ್ಕೆ ಒಳಿತು ಬಯಸುವುದು, ಮನಃಶಾಂತಿ ಮತ್ತು ಆಧ್ಯಾತ್ಮಿಕ ಸುಖಗಳು ಜೀವನದ, ಬೇರಾವುದಕ್ಕೂ ಹೋಲಿಸಲಾರದಂತಹ ಮೌಲ್ಯಗಳಾಗಿರುತ್ತವೆ. ಆದರೆ, ದೃಢವಾದ ವಿವೇಕ ಹಾಗೂ ಜ್ಞಾನಗಳು ಇರದ ಸಂದರ್ಭಗಳಲ್ಲಿ ಇವು ಮೂರೂ ಅಪಾಯಕ್ಕೀಡಾಗುವುದರಲ್ಲಿ ಸಂಶಯವಿಲ್ಲ. ಆದುದರಿಂದಲೇ, ಸಮಚಿತ್ತತೆ ಹಾಗೂ ಅದಕ್ಕೆ ಕಾರಣವಾಗುವ ಆತ್ಮಸಂಯಮ–ಇವು ಕೂಡ ಅಷ್ಟೇ ಅಮೂಲ್ಯವಾದ ಮೌಲ್ಯಗಳಾಗಿರುತ್ತವೆ. ಅದಕ್ಕಿಂತ ಹೆಚ್ಚಾಗಿ, ಅನಂತರ ಇವೇ ಸ್ವತಃ ಸ್ವತಂತ್ರವಾಗಿರುವ ಮೌಲ್ಯಗಳಾಗುತ್ತವೆ. ಆಧ್ಯಾತ್ಮಿಕ ಉತ್ಕಾಂಕ್ಷೆಯ ವೈಯಕ್ತಿಕ ಅಭಿವೃದ್ಧಿಗಾಗಿ ಮಾತ್ರವೇ ಅಲ್ಲಿ ಇಡೀ ಸಮಾಜದ ಶಾಶ್ವತವಾದ ನೈತಿಕ ಆರೋಗ್ಯಕ್ಕಾಗಿ ಕೂಡ, ಇವುಗಳಿಗಿಂತ ಹೆಚ್ಚು ಶ್ರೇಷ್ಠವಾದ ಬೇರೆ ಯಾವುದೇ ಉಪಯುಕ್ತ ಮೌಲ್ಯಗಳನ್ನು ಉಲ್ಲೇಖಿಸಲು ಚಿಂತಕರಿಗೆ ಸಾಧ್ಯವಾಗಿಲ್ಲ.

೬. ವ್ಯಕ್ತಿಯ ಸಂತೋಷವೆಂಬುದನ್ನು ಅವನ ಮನಸ್ಸಿನ ಸಂತೋಷಕರ ಪರಿಸ್ಥಿತಿಗೆ ಸರಿಸಮವೆಂದು ಪರಿಗಣಿಸಲು ಸಾಧ್ಯವಿಲ್ಲ. ಮನಸ್ಸು ಅನುಭವಿಸುವ ಸಂತೋಷ ಅಥವಾ ದುಃಖವು ವ್ಯಕ್ತಿ ಅನುಭವಿಸುವ ಸಂತೋಷ ಅಥವಾ ದುಃಖಕ್ಕಿಂತ ಭಿನ್ನವಾಗಿರುತ್ತದ ಔಷಧವು ನಾಲಗೆಗೆ ಕಹಿಯಾಗಿದ್ದಾಗ್ಯೂ, ರೋಗಿಗೆ ಸಿಹಿಯಾಗಿರುತ್ತದೆ.........ಸಾಮಾನ್ಯವಾಗಿ ಬದುಕಿನ ಸಮಗ್ರ ದೃಷ್ಟಿಕೋನದಿಂದ ಆಲೋಚಿಸುವಾಗ ಸಂತೋಷ ಅಥವಾ ದುಃಖದ ವ್ಯಾಖ್ಯೆಯು ಮಾನಸಿಕ



ಸಂತೋಷ ಅಥವಾ ದುಃಖದ ವ್ಯಾಖ್ಯೆಗಿಂತ, ಪರಿಗಣನಾರ್ಹವಾಗಿ ಬೇರೆಯೇ ಆಗಿರುತ್ತದೆ.

ಮನಸ್ಸನ್ನು ಮುದಗೊಳಿಸುವಂತಹ ಸಂತೋಷಗಳು ನಿಶ್ಚಯವಾಗಿಯೂ ನಿಜವಾದ ಸಂತೋಷಗಳಲ್ಲ. ಜೀವನದ ನಿಜವಾದ ಸಂತೋಷಗಳೇ ಬೇರೆ. ಇವು ಚಿತ್ತಶಾಂತಿಯಲ್ಲಿ ನೆಲೆಸಿರುತ್ತವೆ; ಹಿಂಸೆಯಿಂದ ಕೂಡಿದ ಭಾವನಾತ್ಮಕ ತಲ್ಲಣಗಳ ಸಮಯದಲ್ಲಿ ನಿಜವಾದ ಸಂತೋಷ ಉಂಟಾಗುವುದಿಲ್ಲ. ನಿಜವಾದ ಸಂತೋಷ ಉಂಟಾಗುವುದೇ ನಿರ್ಭಾವುಕತೆಯಿಂದ. ಆಧ್ಯಾತ್ಮಿಕ ದರ್ಶನದ ಪರಿಣಾಮವಾಗಿ ನಿರ್ಭಾವುಕತೆಯುಂಟಾಗುತ್ತದೆ. ಇಂತಹ ದರ್ಶನ ಉಂಟಾದ ಅನಂತರ, ಭಕ್ತಿ ಅಥವಾ ಶ್ರದ್ಧೆಯು ನೆಲಸಿ ಮನಃಶಾಂತಿ ಲಭಿಸುತ್ತದೆ. ಆಮೇಲೆ ಶಾಶ್ವತವಾದ ಸುಖದ ಭಾವನೆ ಮೂಡುತ್ತದೆ. ನಿಜವಾದ ಸುಖವು ಅಧಿಕವಾಗುತ್ತ ಹೋಗುವ ಅನುಕ್ರಮ ಹೀಗಿರುತ್ತದೆ.

೭. ವಾಸ್ತವವಾಗಿ ಹೇಳುವುದಾದರೆ, ಬದುಕುವ ಸಂಕಲ್ಪವೇ ನಿಜವಾದ ಮರಣಭಯ. ಬದುಕುವ ಇಚ್ಛೆ ಹಾಗೂ ಸಾವಿನ ಹೆದರಿಕೆ–ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಂತೆ. ರಣರಂಗದಲ್ಲಿ ಹೋರಾಡುವ ಸೈನಿಕರು ಯಾವಾಗಲೂ ಸಂತೋಷವನ್ನುಂಟುಮಾಡುವಂತಹ ನೃತ್ಯ ಮತ್ತು ಪಾನಗೋಷ್ಠಿಗಳಲ್ಲಿ ಮಗ್ನರಾಗಿರುತ್ತಾರೆ. ಪಾಸ್ಕಲ್ ಹೇಳುವಂತೆ, "ಪ್ರತಿ ಕ್ಷಣವೂ ಸಾವು ಅವರ ಮುಖವನ್ನು ದಿಟ್ಟಿಸಿನೋಡುತ್ತಿರುವುದು ಇದಕ್ಕೆ ಕಾರಣ. ಸಾವಿನ ಭಯವನ್ನು ಮರೆಯುವ ಪ್ರಯತ್ನವಾಗಿ ಅವರು ಸಂತೋಷವಾಗಿರುವಂತೆ ತೋರಿಸಿಕೊಳ್ಳುತ್ತಾರೆ." ಬದುಕಬೇಕೆಂಬ ಬಯಕೆಯೇ ವ್ಯಕ್ತಿಯ ದೇಹವನ್ನು ತಿವಿಯುವ ದೊಡ್ಡ ಮುಳ್ಳು ಆ ಬಯಕೆಯನ್ನೇ ತ್ಯಜಿಸಿದಾಗ, ಎಲ್ಲ ದುಃಖಸಂಕಟಗಳೂ ತಮ್ಮಷ್ಟಕ್ಕೆ ತಾವೇ ದೂರವಾಗುತ್ತವೆ ; ಆಗ ಜೀವನದ ದುಸ್ಸಹವಾದ ದುಃಖದಿಂದ ವ್ಯಕ್ತಿ ಮುಕ್ತನಾಗುತ್ತಾನೆ. ಅವನ ಎಲ್ಲ ಕಾತರಗಳೂ ಚಿಂತೆಗಳೂ ಒಮ್ಮೆಲೇ ಇಲ್ಲವಾಗುತ್ತವೆ. ಅವನ ಜೀವನವು ನಿಜವಾದ ಸಂತೋಷದ ಸತತ ಪ್ರವಾಹದಂತೆ ನಿರಾತಂಕವಾಗಿ ಮುಂದುವರಿಯುತ್ತದೆ.

೮. ಮೋಕ್ಷ ಎಂಬುದು ಅಗಾಧವಾದ ಜ್ಞಾನವನ್ನು ಹೊಂದಿರುವ ಯಾವನೇ ಒಬ್ಬ ವ್ಯಕ್ತಿಯ ಖಾಸಗಿ ಆಸ್ತಿಯಲ್ಲ. ಅದು ಎಲ್ಲರ ಪೂರ್ವಾರ್ಜಿತ ಖಾಸಗಿ ಆಸ್ತಿ. ಮುಕ್ತ ಆತ್ಮವನ್ನು ಕುರಿತಂತೆ ಮಾಡುವ ನಿರಂತರವಾದ ಧ್ಯಾನದಿಂದ, ಕಳೆದುಹೋಗಿರುವ ನಮ್ಮ ಸ್ವಾಮ್ಯವನ್ನು ಮರಳಿ ಪಡೆಯುವುದು ಹೇಗೆಂಬ ಅರಿವು ನಮ್ಮಲ್ಲಿ ಮೂಡುತ್ತದೆ. ಆದುದರಿಂದಲೇ ವ್ಯಕ್ತಿಯ ಜೀವನ ಶೈಲಿ ಒಂದು ಆದರ್ಶ ಮಾದರಿಯಾಗುತ್ತೆ ; ಉತ್ಕಾಂಕ್ಷಿ ಹಾಗೂ ಸಮಾಜ–ಇವೆರಡರ ಮೇಲೆಯೂ ಅಂತಹ ಆದರ್ಶ ವ್ಯಕ್ತಿ ಪ್ರಭಾವ ಬೀರುತ್ತಾನೆ. ಅವನ ಮನಸ್ಸಿನ ಉನ್ನತ ಹಂತಗಳು, ಅವನಿಗೆ ಸಹಜವಾಗಿದ್ದರೂ, ಸತತ ಪ್ರಯತ್ನದ ಮೂಲಕವೇ ತಲುಪಬೇಕಾದ

ಹಂತಗಳಾಗಿ ನಮಗೆ ತೋರುತ್ತವೆ. ಆದುದರಿಂದ ಅಂತಹ ಆದರ್ಶ ವ್ಯಕ್ತಿಗಳನ್ನು ಅನುಸರಿಸುವುದರಿಂದ ಪ್ರಯೋಜನವಿದೆ. ಅಲ್ಲಿಂದಲೇ ನಮ್ಮ ಪ್ರವಾಸವನ್ನು ನಾವು ಪ್ರಾರಂಭಿಸಬೇಕು. ಆ ದಿಸೆಯಲ್ಲಿಯೇ ನಾವು ನಮ್ಮ ಜೀವನವನ್ನು ಪುನಃ ರೂಪಿಸಿಕೊಳ್ಳಬೇಕು. ಅಂತಹ ಆದರ್ಶ ಪುರುಷರು ನಮ್ಮ ಮುಂದಿರಿಸಿದ ಜೀವನಶೈಲಿಯನ್ನೇ ನಾವು ಅನುಸರಿಸಬೇಕು. ಇಡೀ ಸಮುದಾಯದ ಜೀವನದ ನಿಜವಾದ ಪೂರ್ಣತೆಯನ್ನು ಸಾಧಿಸುವುದು ಹೀಗೆಯೇ ಆಗಿದ್ದರೂ, ಒಟ್ಟಿನಲ್ಲಿ ಆತ್ಮದ ಆಧ್ಯಾತ್ಮಿಕ ಮುಕ್ತಿಯನ್ನು ಅಂತಿಮವಾಗಿ ಹೊಂದುವತ್ತ ನಮ್ಮ ಗಮನ ಕೇಂದ್ರೀಕೃತವಾಗಿರಬೇಕು.

* * * *



# ೩. ಭಾರತ ಮತ್ತು ಅದರ ಧ್ಯೇಯ

೧. ಯಾವುದೇ ಒಂದು ದೇಶದ ಜನರು ಸಹಜ ಪ್ರವೃತ್ತಿಯಿಂದಲೇ ಅಹಿಂಸೆಯತ್ತ ಅಥವಾ ಇನ್ನೊಂದು ದೇಶದ ಜನರು ಹಿಂಸೆಯತ್ತ ಒಲವು ತೋರಿಸುತ್ತಾರೆಂದು ಭಾವಿಸುವುದು ಸೈದ್ಧಾಂತಿಕವಾಗಿ ಸರಿಯಲ್ಲ..... ಸೈದ್ಧಾಂತಿಕವಾಗಿ, ಈ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಮತ್ತು ಯೂರೋಪುಗಳ ನಡುವೆ ವ್ಯತ್ಯಾಸವಿಲ್ಲದಿದ್ದರೂ, ಇವೆರಡರ ಪ್ರಸ್ತುತ ವ್ಯವಸ್ಥೆಯಲ್ಲಿ ಕೆಲಮಟ್ಟಿನ ಒಂದು ವ್ಯತ್ಯಾಸವಿದೆ. ಇಂದಿನ ಭಾರತದ ಸಾಚಾತನವಿರುವುದು ಸಾಮಾಜಿಕ ಸಹಜೀವನದ ರಂಗದಲ್ಲಿ ನಡೆದ ಅನೇಕ ಪ್ರಯೋಗಗಳ ಫಲಿತಾಂಶವಾಗಿ. ಆದರೆ ಯೂರೋಪಿನಲ್ಲಿ ಇಂತಹ ಪ್ರಯೋಗಗಳನ್ನು ಈಚಿನ ದಿನಗಳಲ್ಲಿ ಮಾತ್ರ ನಡೆಸಲಾಗುತ್ತಿದೆ. ಭಾರತ ಹಾಗೂ ಯೂರೋಪುಗಳ ಉತ್ಸಾಹ– ಚೈತನ್ಯಗಳ ನಡುವೆ ಇರುವ ವ್ಯತ್ಯಾಸವು ಹಿರಿಯ ವ್ಯಕ್ತಿ ಹಾಗೂ ಒಬ್ಬ ಯುವಕ ಇವರ ಮನೋಭಾವಗಳ ನಡುವೆ ಕಂಡುಬರುವ ವ್ಯತ್ಯಾಸಕ್ಕೆ ಸರಿಸಮವಾಗಿದೆ.

೨. ಅಹಿಂಸೆಯ ದೃಷ್ಟಿಯಿಂದ, ಅಪಾರ ಜನಸಂಖ್ಯೆ ಮತ್ತು ದೇಶದ ವಿಸ್ತಾರ–ಇವು ನಮ್ಮ ದೇಶದ ವಿಶೇಷವಾದ ಹಾಗೂ ಅನುಕೂಲಕರವಾದ ಲಕ್ಷಣ. ನಮ್ಮಲ್ಲಿ ಇಷ್ಟು ಅಧಿಕ ಜನರಿರುವಂತಾದುದು ಏಕೆ? ಯೂರೋಪಿನ ಒಂದು ಭೂಖಂಡದಲ್ಲಿ ಅನೇಕ ಚಿಕ್ಕಪುಟ್ಟ ರಾಷ್ಟ್ರ–ರಾಜ್ಯಗಳಿರುವುದು ನಮಗೆ ತಿಳಿದಿದೆ. ಜರ್ಮನಿಯಲ್ಲಿ ಸುಮಾರು ಎಪ್ಪತ್ತು ಅಥವಾ ಎಂಬತ್ತು ಮಿಲಿಯ ಜನರಿದ್ದರೆ, ಇಂಗ್ಲೆಂಡಿನಲ್ಲಿ ಸುಮಾರು ನಲ್ವತ್ತು ಮಿಲಿಯ ಜನರಿದ್ದಾರೆ. ಇತರ ದೇಶಗಳಲ್ಲಿ ಇರುವ ಜನರ ಸಂಖ್ಯೆ ಸುಮಾರು ಇಪ್ಪತ್ತು ಅಥವಾ ಮೂವತ್ತು ಮಿಲಿಯಗಳಷ್ಟು ಮಾತ್ರ. ಈ ಅಂಕಿಅಂಶಗಳು ಯುದ್ಧ–ಪೂರ್ವ ವರ್ಷಗಳಿಗೆ ಸಂಬಂಧಪಟ್ಟಿವೆ. ಹಾಗಿರುವಾಗ ಭಾರತದಲ್ಲಿ ಸುಮಾರು ೩೦೦ ಅಥವಾ ೪೦೦ ಮಿಲಿಯಗಳಷ್ಟು ಜನರಿರುವುದು ಹೇಗೆ?.. ನಾವು ಹಿಂಸೆ ಮತ್ತು ಬೇರೆ ಬೇರೆಯಾಗಿ ಜೀವಿಸುವುದಕ್ಕೆ ಸಂಬಂಧಿಸಿದಂತೆ ಹಲವು ಪ್ರಯೋಗಗಳನ್ನು ಮಾಡಿದ್ದೇವೆ, ಮತ್ತು ಶೋಚನೀಯ ರೀತಿಯಲ್ಲಿ ಸೋಲನ್ನು ಅನುಭವಿಸಿ, ದೊಡ್ಡ ರಾಷ್ಟ್ರವನ್ನು ಸ್ಥಾಪಿಸಿದ್ದೇವೆ. ಇದೆಲ್ಲ ಇತಿಹಾಸ–ಪೂರ್ವಕಾಲದ ಚರಿತ್ರೆ. ನೀವು ಇದನ್ನು ಕಾಲ್ಪನಿಕ ಇತಿಹಾಸವೆಂದು ಕೂಡ ಕರೆಯಬಹುದು. ಆದರೆ, ಅದು ಇತಿಹಾಸವಲ್ಲದೆ ಇನ್ನೇನೂ ಅಲ್ಲ; ವಾಸ್ತವವಾಗಿ ನಡೆದಿರುವ ಘಟನೆಗಳ ವರದಿ.

ನಾವು ನಮ್ಮೊಡನೆಯೇ ಯುದ್ಧ ನಡೆಸಿದೆವೆಂದೂ ಅವು ಮಾರಕ ಯುದ್ಧಗಳಾಗಿದ್ದವೆಂದೂ ಬ್ರಿಟಿಷ್ ಹಾಗೂ ಪಾಶ್ಚಿಮಾತ್ಯ ಇತಿಹಾಸಕಾರರು ಆರೋಪಿಸುತ್ತಾರೆ. ವಿಧ್ವಂಸಕ ಹೋರಾಟಗಳು ಎಂದು ನಾನೂ ಒಪ್ಪುತ್ತೇನೆ. ಆದರೆ ಆಗ ಕೂಡ ಇತಿಹಾಸಕಾರರ ಈ ಆಕ್ಷೇಪವನ್ನು ಕುರಿತಂತೆ ನನಗೆ ಹೆಮ್ಮೆಯಾಗುತ್ತದೆ. ಏಕೆಂದರೆ, ನಾವು ಹಿಂದೆ ಮತ್ತು ಇಂದು ಕೂಡ ಒಂದು ಎಂಬುದನ್ನು ಅವರು ಒಪ್ಪಿಕೊಂಡಂತಾಗಿದೆ. ಒಂದು ಸಣ್ಣ ಸಮುದಾಯ ಅಥವಾ ಜನರ ಗುಂಪು. ನಮ್ಮಲ್ಲಿ ಒಗ್ಗಟ್ಟಿದೆ, ನಾವೆಲ್ಲ ಒಂದು ಎಂದು ಹೇಳುವುದೇ ವಿಶೇಷವಾದ ಸಂಗತಿಯಲ್ಲವೇ?

೩. ರಾಜಕೀಯ ಶಕ್ತಿಯೊಂದರಿಂದ ಮಾತ್ರ ಸಮಾಜದ ಸಂಪೂರ್ಣ ಬದಲಾವಣೆ ಸಾಧ್ಯ ಎಂದು ಪಾಶ್ಚಿಮಾತ್ಯರು ಪ್ರತಿಪಾದಿಸುತ್ತಾರೆ. ರಾಜಕೀಯದಲ್ಲಿ ಒಂದು ಪಕ್ಷವು ಸರ್ಕಾರವನ್ನು ಸ್ಥಾಪಿಸಿದಾಗ, ಇನ್ನೊಂದು ಪಕ್ಷವು ಅದನ್ನು ವಿರೋಧಿಸುತ್ತದೆ. ಈ ರೀತಿಯಲ್ಲಿ ಇವೆರಡೂ ಪಕ್ಷಗಳು ಪರಸ್ಪರ ಸುಧಾರಣೆ ಮಾಡುವಂತೆ ತಮ್ಮ ಕೆಲಸವನ್ನು ಮುಮದುವರಿಸುತ್ತವೆ; ರಾಜಕೀಯ ಸಾಮರ್ಥ್ಯದಿಂದ ಮಾತ್ರ ಬದಲಾವಣೆ ಸಾಧ್ಯ ಎಂದು ಅವು ನಂಬಿರುತ್ತವೆ. (ಈ ಪದ್ಧತಿಯನ್ನು ಅನುಕರಿಸಲು ನಾವೂ ಕಲಿತಿದ್ದೇವೆ. ಇಂದು ಭಾರತದಲ್ಲಿ ಈ ವಿವರವು ಸ್ವಾತಂತ್ರ್ಯೋತ್ತರ ಅವಧಿಯ ಪ್ರಾರಂಭ ಕಾಲಕ್ಕೆ ಸಂಬಂಧಿಸಿದೆ) ಮಹಾರಾಷ್ಟ್ರ, ಬಂಗಾಳ, ಗುಜರಾತು, ತಮಿಳುನಾಡುಗಳೇ ಮುಂತಾದ ಪ್ರಾಂತಗಳಿವೆ. ಇದೇ ರೀತಿ ಯೂರೋಪಿನಲ್ಲಿಯೂ ಬೇರೆಬೇರೆ ಭಾಷೆಗಳನ್ನಾಡುವ ಜನರ ಬೇರೆಬೇರೆ ದೇಶಗಳಿವೆ. ನಮ್ಮ ದೇಶದಲ್ಲಿ ಒಕ್ಕೂಟದ ಒಳಗೆ ಭಾಷಾ ಸ್ಥಾನಮಾನಗಳಿಗಾಗಿ ಹಕ್ಕೊತ್ತಾಯ ವಿದ್ದರೂ, ಪ್ರತ್ಯೇಕ ಸಾರ್ವಭೌಮ ರಾಷ್ಟ್ರವನ್ನು ಸ್ಥಾಪಿಸಲು ಯಾರೂ ಬಯಸಲಿಲ್ಲ.........ಇದಕ್ಕೆ ವ್ಯತಿರಿಕ್ತವಾಗಿ ಯೂರೋಪಿನಲ್ಲಿ ಸ್ವಿಟ್ಜರ್‌ಲ್ಯಾಂಡ್, ಜರ್ಮನಿ, ಬೆಲ್ಜಿಯಂ, ಫ್ರಾನ್ಸ್ ಮೊದಲಾದಂತಹ ಅನೇಕ ಚಿಕ್ಕಪುಟ್ಟ ಸ್ವತಂತ್ರ ರಾಷ್ಟ್ರಗಳಿವೆ........ಇಡೀ ಯೂರೋಪು ಸ್ಥಳೀಯಾಧಿಕಾರತತ್ತ್ವದ ಆಧಾರದ ಮೇಲೆ ರಾಜಕೀಯವಾಗಿ ವಿಂಗಡಿಸಲ್ಪಟ್ಟಿದೆ........ ಹೀಗೆ, ಸಮಾಜದ ಸಾಮಾಜಿಕ ಹಾಗೂ ರಾಜಕೀಯ ಸಂರಚನೆಗೆ ಸಂಬಂಧಿಸಿರುವಷ್ಟರ ಮಟ್ಟಿಗೆ, ಭಾರತಕ್ಕೆ ಹೋಲಿಸಿದಂತೆ ಹೇಳುವುದಾದರೆ, ಯೂರೋಪು ಭಾರತಕ್ಕಿಂತ ತುಂಬ ಹಿಂದುಳಿದಿರುವುದು ಸ್ಪಷ್ಟವಾಗಿದೆ.

೪. ಸ್ವಾತಂತ್ರ್ಯ ಲಭಿಸಿದ ಅನಂತರ, ಪ್ರತಿಯೊಂದು ಕ್ಷೇತ್ರದಲ್ಲಿಯೂ ನಮ್ಮ ಜವಾಬ್ದಾರಿ ಹೆಚ್ಚಾಗಿದೆ. ನಾವು ಸ್ವಾತಂತ್ರ್ಯವನ್ನು ಗಳಿಸಿದ್ದು ಒಂದು ವಿಶೇಷ ವಿಧಾನದಲ್ಲಿ. ಎಂದಿಗಿಂತ ನಮ್ಮ ಜವಾಬ್ದಾರಿ ಇನ್ನಷ್ಟು ಹೆಚ್ಚಾಗಲು ಇದೂ ಒಂದು ಕಾರಣವಾಗಿದೆ. ಏಕೆಂದರೆ, ಇದರಿಂದಾಗಿಯೇ ನಮ್ಮ ಬಗ್ಗೆ ಜಗತ್ತು ಕೆಲವು ಮಹಾ ನಿರೀಕ್ಷೆಗಳನ್ನು ಇರಿಸಿಕೊಂಡಿದೆ. ಇಷ್ಟೇ ಅಲ್ಲ, "ಚಿರನೂತನ"ವಾದ ನಾಗರಿಕತೆಯನ್ನು ಭಾರತವು



ಹೊಂದಿದೆ. ಇದೇ ನಾನು ಕರೆಯುವ ನಿಜವಾದ ಪುರಾತನ ಸಂಸ್ಕೃತಿಯಾಗಿರುತ್ತದೆ. ನನ್ನ ವ್ಯಾಖ್ಯಾನದ ಪ್ರಕಾರ, ಹಿಂದಿನದೇ ಆಗಿದ್ದಾಗ್ಯೂ ಯಾವಾಗಲೂ ಹೊಸದಾಗಿರುವ ಸಂಸ್ಕೃತಿಯೇ ಪುರಾತನ ಸಂಸ್ಕೃತಿ. ಯಾವಾಗಲೂ ನವನವೀನವಾಗಿರುವುದೇ ಪುರಾತನ ಸಂಸ್ಕೃತಿಯ ವಿಶೇಷ ಲಕ್ಷಣ. ಯಾವಾಗಲೂ ಹೊಸಹೊಸ ರೂಪಗಳನ್ನು ತಳೆಯುತ್ತಾ ಯಾವಾಗಲೂ 'ಪುರಾತನ'ವೆಂದು ಹೆಸರಾಗಿರುವುದೇ ನಮ್ಮ ಸಂಸ್ಕೃತಿಯ ಮುಖ್ಯ ಲಕ್ಷಣ. ಹೊಸಹೊಸ ರೂಪಗಳನ್ನು ತಾಳುವ ಸಾಮರ್ಥ್ಯವಿಲ್ಲದ ಸಂಸ್ಕೃತಿಯು ಸಂಪೂರ್ಣ ನಾಶವಾಗುತ್ತದೆ. ಭಾರತೀಯ ಸಂಸ್ಕೃತಿಗೆ ಒಂದು ವಿಶೇಷ ಲಕ್ಷಣವಿದೆ. ಇಲ್ಲಿ ಬೇರೆ ಬೇರೆ ಸಾಂಸ್ಕೃತಿಕ ಗುಂಪುಗಳು ನೆಲಸಿವೆ. ಭಾರತೀಯ ಸಂಸ್ಕೃತಿಯ ಈ ಎಲ್ಲ ವಿವಿಧ ಸಂಸ್ಕೃತಿಗಳನ್ನು ಬೆರೆಸಿ, ಸಮೀಕರಿಸಿದೆ. ಆದುದರಿಂದಲೇ ಭಾರತೀಯ ಸಂಸ್ಕೃತಿಯು ಇಷ್ಟೊಂದು ಶ್ರೀಮಂತವೂ ಪರಿಪಕ್ವವೂ ಆಗಿದೆ. ನಮ್ಮ ದೇಶವು ವಿರೋಧಿಗಳ ಜೊತೆ ರಾಜಿ ಮಾಡಿಕೊಂಡು ಎಲ್ಲರೊಂದಿಗೆ ಶಾಂತಿಸೌಹಾರ್ದಗಳೊಂದಿಗೆ ಬಾಳುವ ವಿಲಕ್ಷಣನಾದ ಸ್ವಭಾವವನ್ನು ಹೊಂದಿರುವುದರಿಂದಾಗಿ ನಾವು ವಿಶೇಷವಾದ ಜವಾಬ್ದಾರಿಯನ್ನು ಹೊಂದಿರುತ್ತೇವೆ.

೫. ನಮ್ಮ ದೇಶವೇನೂ "ಶಿಶು ರಾಷ್ಟ್ರವಲ್ಲ" ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಸುಮಾರು ೧೦,೦೦೦ ವರ್ಷಗಳ ಅನುಭವವನ್ನು ಹೊಂದಿರುವ ಈ ದೇಶ ತುಂಬ ಪುರಾತನವಾಗಿದೆ... ಈ ದೇಶದ ಮೇಲೆ ಇಡೀ ಜಗತ್ತಿನ ಕಣ್ಣಿರುವುದರಿಂದ, ಭಾರತದ ಇತಿಹಾಸವು ಕೆಲವು ವೈಚಿತ್ರ್ಯಗಳನ್ನು ಹೊಂದಿರುತ್ತದೆ. ಕಳೆದ ಎರಡು ಸಾವಿರ ವರ್ಷಗಳಿಂದ ಭಾರತವು ಸ್ಥೈರ್ಯಗೆಡದೆ ಇರುವುದಕ್ಕೆ ಇದೂ ಒಂದು ಕಾರಣವೆನ್ನಬಹುದು. ಪ್ರಾಚೀನ ಕಾಲದಿಂದಲೂ ಆತ್ಮಜ್ಞಾನದ ಪರಂಪರೆಯು ಈ ದೇಶದಲ್ಲಿ ಮುಂದುವರಿದುಕೊಂಡು ಬಂದಿದೆ.

ಈಗ ವಿಜ್ಞಾನದ ಶಕ್ತಿಸಾಮರ್ಥ್ಯಗಳು ವಿಶ್ವಾದ್ಯಂತ ತೋರಿಬರುತ್ತಿವೆ. ಒಂದೆಡೆ ಭಾರತದ ಪುರಾತನ ಆತ್ಮಜ್ಞಾನದ ಶಕ್ತಿ ಹಾಗೂ ಇನ್ನೊಂದೆಡೆ ನಮ್ಮ ಸುತ್ತ ಇರುವ ಇದೇ ವಿಶ್ವಕ್ಕೆ ಸಂಬಂಧಿಸಿದಂತಿರುವ ವಿಜ್ಞಾನದ ಆಧುನಿಕ ಸಾಮರ್ಥ್ಯ– ಇವು ಮೇಳೈಸುತ್ತಿವೆ. ಈ ವಿಜ್ಞಾನ ಮತ್ತು ಆತ್ಮಜ್ಞಾನಗಳ ನಡುವೆ ಸಹಕಾರವಿರುವಾಗ, ಪ್ರತಿ ಕ್ಷೇತ್ರದಲ್ಲಿಯೂ ಜನರಿಗೆ ಒಳಿತು ಉಂಟಾಗುವುದರಲ್ಲಿ ಸಂದೇಹಪಡ ಬೇಕಾಗಿಯೇ ಇಲ್ಲ. ಆದರೆ ವಿಜ್ಞಾನ ಮತ್ತು ಆತ್ಮಜ್ಞಾನ–ಇವೆರಡೂ ಸಮಗ್ರ ಬದುಕನ್ನು ವ್ಯಾಪಿಸಿದಾಗ ಮಾತ್ರ ಶುಭೋದಯವು ಸಾಧ್ಯವಾಗುತ್ತದೆ.

೬. ಇತರ ಯಾವುದೇ ದೇಶದ ಮೇಲೆ ಭಾರತವು ಎಂದೂ ಆಕ್ರಮಣ ನಡೆಸಿಲ್ಲವೆಂಬುದು ವಿಶ್ವಕ್ಕೇ ತಿಳಿದಿದೆ........ ಆತ್ಮವಿಜ್ಞಾನ ಹಾಗೂ ಧರ್ಮಗಳ ಸಂದೇಶವನ್ನು ಚೀನಾ, ಜಪಾನ್, ಸಿಲೋನ್, ಟಿಬೆಟ್, ಬರ್ಮಾ ಮತ್ತು ಮಧ್ಯ ಏಷ್ಯಾಗಳಿಗೆ ಬಿತ್ತರಿಸಿದ ಭಾರತವು ಎಂದೂ ಶಸ್ತ್ರಾಸ್ತ್ರಗಳನ್ನು ಬಳಸಿಲ್ಲ ; ರಾಜಕೀಯ

ಅಧಿಕಾರವನ್ನೂ ಪ್ರಯೋಗಿಸಿಲ್ಲ. ಜ್ಞಾನಪ್ರಸಾರದ ಉದ್ದೇಶದಿಂದಷ್ಟೇ ಭಾರತೀಯರು ಈ ದೇಶಗಳಿಗೆ ಭೇಟಿ ನೀಡಿದರು....... ಇತರ ದೇಶಗಳನ್ನು ವಶಪಡಿಸಿಕೊಳ್ಳಲು ಭಾರತ ಎಂದೂ ಅಪೇಕ್ಷಿಸಿಲ್ಲ ; ಅಷ್ಟೇ ಅಲ್ಲ, ಯಾವನೇ ವ್ಯಕ್ತಿಯ ಮೇಲೆ ವೈಚಾರಿಕವಾದ ದಾಳಿಯನ್ನೂ ಭಾರತವು ನಡೆಸಿಲ್ಲ .......... ವಿಚಾರಧಾರೆಯನ್ನು ಪ್ರಸಾರ ಮಾಡುವುದಷ್ಟೇ ತನ್ನ ಗುರಿಯೆಂದು ಭಾರತವು ತಿಳಿದಿತ್ತು. ಇದೇ ಭಾರತದ ಅತ್ಯಂತ ಪ್ರಮುಖವಾದ ವಿಶೇಷ ಲಕ್ಷಣ. ಭಾರತದ ಇತಿಹಾಸದ ಈ ವೈಲಕ್ಷಣ್ಯವು ನಾವು ಹೆಮ್ಮೆಪಡಬೇಕಾಗಿರುವ ವಿಷಯವಾಗಿದೆ...

ಅನೇಕ ಶತಮಾನಗಳ ಕಾಲ ಹೀಗೆ ವಿವಿಧ ಧರ್ಮ, ಜಾತಿ, ಭಾಷೆ ಹಾಗೂ ಪ್ರಾಂತಗಳಿಗೆ ಸೇರಿದ ಜನರನ್ನು ಒಟ್ಟಿಗೆ ಇರಿಸಿದ ಸಾಂಪ್ರದಾಯಿಕ ಸಂಸ್ಕೃತಿಯೇ ಭಾರತೀಯ ನಾಗರಿಕತೆಯ ಮುಖ್ಯ ಪ್ರವಾಹವಾಗಿದೆ. ಅಹಿಂಸೆಯ ಸಿದ್ಧಾಂತವು ತನ್ನ ಹುಟ್ಟನ್ನು ಪಡೆದದ್ದೇ ಈ ಸಂಪ್ರದಾಯದಿಂದ. ಇದಕ್ಕಾಗಿ ಹೆಮ್ಮೆ ತಾಳಿ......ಭಾರತದ ಸಂಸ್ಕೃತಿಯಲ್ಲಿ ಮಹಾನ್ ಧರ್ಮ ಬೋಧಕರು ಮತ್ತು ಹಿಂದೂ, ಮುಸ್ಲಿಮ್, ಕ್ರೈಸ್ತ, ಝರತುಷ್ಟ್ರ, ಬೌದ್ಧ ಹಾಗೂ ಜೈನ ಧರ್ಮಗಳಿಗೆ ಸೇರಿದ ಅಸಂಖ್ಯಾತ ಸಂತರು ಪ್ರತಿಪಾದಿಸಿದ ಸಂಪ್ರದಾಯವನ್ನು ಒಳಗೊಂಡಿದೆ........ ನಮ್ಮ ಸಂಪ್ರದಾಯಕ್ಕೆ ಅತ್ಯಂತ ಬಲಿಷ್ಠವಾದ ಆಧಾರವಿದೆ; ಅದರ ಘನತೆಯು ತನ್ನ ಸ್ವರೂಪದಲ್ಲಿ ಬಹುಮಟ್ಟಿಗೆ ಜಾಗತಿಕವಾಗಿದೆ. ವಾಸ್ತವವಾಗಿ ಹೇಳುವುದಾದರೆ, ಅದನ್ನು "ಘನತೆ"ಯೆಂದೂ ಬಣ್ಣಿಸುವಂತಿಲ್ಲ.. ಹಿಂದಿನ ಸಾಂಸ್ಕೃತಿಕ ಪ್ರಯತ್ನಗಳೊಂದಿಗೆ ಇಂದಿನ ಪ್ರಯತ್ನಗಳಿಗೆ ಸಂಬಂಧ ಕಲ್ಪಿಸುವ ಸಾಮರ್ಥ್ಯವೇ ಭಾರತೀಯ ಸಂಸ್ಕೃತಿಯ ಮುಖ್ಯ ಲಕ್ಷಣವಾಗಿದೆ.

೭. ಭಾರತದ ಘನತೆ ಗಾಂಭೀರ್ಯಗಳನ್ನು ಕುರಿತಂತೆ ಅನೇಕರು ಅನೇಕ ರೀತಿಗಳಲ್ಲಿ ವರ್ಣಿಸಿದ್ದಾರೆ. ಹಿಮಾಲಯದಂತಹ ಪರ್ವತ ಇನ್ನೆಲ್ಲೂ ಇಲ್ಲವೆಂದು ಕೆಲವರು ಹೇಳಿದ್ದರೆ, ಇನ್ನು ಕೆಲವರು ಗಂಗೆಯಂತಹ ಮಹಾನದಿ ಬೇರೆಲ್ಲೂ ಇಲ್ಲವೆಂದಿದ್ದಾರೆ. ಭಾರತದ ಇತರ ಅನೇಕ ಉತ್ಕೃಷ್ಟತೆಗಳನ್ನೂ ಸಾಮಾನ್ಯವಾಗಿ ಉಲ್ಲೇಖಿಸಲಾಗುತ್ತಿದೆ. ಆದರೆ ಇವೆಲ್ಲದರ ಹಿನ್ನೆಲೆಯಲ್ಲಿ 'ನಾನು ಮತ್ತು ನನ್ನದು' ಎಂಬ ಸಂವೇದನೆಯಿದೆ, ಅಲ್ಲದೆ ಅವುಗಳನ್ನು ನಾವೇಕೆ ಪ್ರಮುಖವೆಂದು ಹಾಗೂ ಮಹತ್ತ್ವದವೆಂದು ಪರಿಗಣಿಸಿದ್ದೇವೆಂಬುದಕ್ಕೆ ಕಾರಣವೂ ಇದೆ ; ತನ್ನ ದೇಶದ ಬಗ್ಗೆ ಪ್ರತಿಯೊಬ್ಬನಿಗೆ ವಿಶೇಷವಾದ ಪ್ರೀತಿ ಮತ್ತು ಮಮಕಾರಗಳಿರುತ್ತವೆ. ಆದುದರಿಂದ ಅವನು ತನ್ನ ದೇಶದ ಘನತೆಗಾಂಭೀರ್ಯಗಳನ್ನು ಒತ್ತಿಹೇಳುತ್ತಾನೆ. ನಾವು 'ಸಾರೇ ಜಹಾಂ ಸೇ ಅಚ್ಛಾ'* ಎಂದು ಎಂದರೆ "ಇಡೀ ಜಗತ್ತಿನಲ್ಲಿಯೇ ನಮ್ಮ ದೇಶ

* ಮಹಮ್ಮದ್ ಮೊಹಮ್ಮದ್ ಎಂಬ ಪ್ರಸಿದ್ಧ ರಾಷ್ಟ್ರಕವಿ ರಚಿಸಿದ ಒಂದು ಸುಪ್ರಸಿದ್ಧ ಜನಪ್ರಿಯ ಗೀತೆ.



ದೊಡ್ಡ ದೇಶ" ಎಂದು ಹೇಳುತ್ತೇವೆ. "ಏಕೆ ದೊಡ್ಡದು" ಎಂದರೆ "ಏಕೆಂದರೆ ಅದು ನಮ್ಮದು" ಎಂಬ ಸಮಯೋಚಿತ ಉತ್ತರ ಬರುತ್ತದೆ. "ನಮ್ಮದು" ಎಂಬ ಶಬ್ದವನ್ನು ತೆಗೆದಾಗ ಮತ್ತು ಇತರ ದೇಶಗಳೊಂದಿಗೆ ಹೋಲಿಸಿದಾಗ, ಭಾರತದ ಉತ್ಕೃಷ್ಟತೆ–ವಿಶೇಷಗಳು ಮಸುಕಾಗಬಹುದು.

ಭಾರತದ ನೆಲವು ಅಮೆರಿಕ ಸಂಯುಕ್ತ ಸಂಸ್ಥಾನಗಳ ನೆಲಕ್ಕಿಂತ ಶ್ರೇಷ್ಠವೇನೂ ಅಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅಮೆರಿಕದ ನೆಲವು ತೌಲನಿಕವಾಗಿ ಹೊಸತು. ಅದು ಹೆಚ್ಚು ಫಲವತ್ತಾದ್ದು. ಅಲ್ಲದೆ ಅಲ್ಲಿ ಅನೇಕ ದೊಡ್ಡ ದೊಡ್ಡ ನದಿಗಳಿವೆ. ಅವುಗಳಿಗೆ ಹೋಲಿಸುವಾಗ, ನಮ್ಮ ಗಂಗಾನದಿಗೆ ಅಂತಹ ಮಹತ್ತ್ವವೇನೂ ಇರಲಾರದು. ಹಿಮಾಲಯವು ಜಗತ್ತಿನಲ್ಲಿಯೇ ಅತಿ ಎತ್ತರವಾದ ಪರ್ವತವೆಂಬುದೂ ನಿಜ. ಆದರೆ ಅದನ್ನು ಬಿಟ್ಟುಳಿದಂತೆ, ಭಾರತವು ಉಳಿದ ಎಲ್ಲ ದೇಶಗಳಿಗಿಂತ ಉತ್ಕೃಷ್ಟವಾದುದೆಂಬ ನಮ್ಮ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ಯಾವುದೇ ಭೌತಿಕ ಸಾಕ್ಷ್ಯಗಳೂ ಇಲ್ಲ.

ಭಾರತದ ಭೌತಿಕ ಕಲಾವಿನ್ಯಾಸ ಅಥವಾ ಅದಕ್ಕೆ ನಿಸರ್ಗ ನೀಡಿದ ಸಹಜ ಕೊಡುಗೆಗಳು, ಯಾವುದೇ ಇತರ ದೇಶಗಳ ನೈಸರ್ಗಿಕ ಕೊಡುಗೆಗಳಿಗಿಂತ ಉತ್ಕೃಷ್ಟವಾದವು ಎಂಬ ಹೇಳಿಕೆಯನ್ನು ಸಮರ್ಥಿಸಲು ಸಾಧ್ಯವಾಗದೆ ಇದ್ದರೂ, ಭಾರತದಲ್ಲಿಯೇ ಆಧ್ಯಾತ್ಮಿಕ ಪಾಂಡಿತ್ಯದ ಉದಯವಾದುದು ಎಂದು ನಾನು ಪ್ರತಿಪಾದಿಸುತ್ತೇನೆ. ಈ ಪಾಂಡಿತ್ಯದ ಆಧಾರದ ಮೇಲೆಯೇ ಈ ಭೂದಾನ ಚಳವಳಿಯನ್ನು ನಾನು ನಡೆಸುತ್ತಿದ್ದೇನೆ. ಒಬ್ಬ ಭಾರತೀಯನಾಗಿ ಅಲ್ಲ, ಬದಲಿಗೆ ಒಬ್ಬ ಸ್ವತಂತ್ರ ಹಾಗೂ ನಿಷ್ಪಕ್ಷಪಾತ ದೃಷ್ಟಿಯ ವೀಕ್ಷಕನಾಗಿ, ಭಾರತದ ಆಧ್ಯಾತ್ಮಿಕ ಪಾಂಡಿತ್ಯಕ್ಕೆ ಸರಿಸಾಟಿಯಾಗುವ ಜ್ಞಾನವನ್ನು ಜಗತ್ತಿನ ಬೇರಾವುದೇ ದೇಶವೂ ಹೊಂದಿಲ್ಲ ಎಂದು ಘೋಷಿಸುತ್ತೇನೆ. ಜಗತ್ತಿನ ಅನೇಕ ಭಾಷೆ ಮತ್ತು ಸಾಹಿತ್ಯಗಳ ಅಧ್ಯಯನವನ್ನು ನಾನು ಮಾಡಿದ್ದೇನೆ. ಆದರೆ ಸಂಸ್ಕೃತವನ್ನು ಬಿಟ್ಟುಳಿದ ಜಗತ್ತಿನ ಇನ್ನಾವುದೇ ಭಾಷೆಗಳಲ್ಲಿಯೂ 'ತತ್ ತ್ವಮಸಿ'–'ನೀನೇ ಅವನು' ಎಂದು ಮಾನವನಿಗೆ ಸಾರುವ ಪರಮವಿಶ್ವಾಸ ಹಾಗೂ ಶ್ರದ್ಧೆಯಿಂದ ಕೂಡಿರುವ ಸಾಹಿತ್ಯ ತೋರಿ ಬರುವುದಿಲ್ಲ. ಈ ಆಧ್ಯಾತ್ಮಿಕ ವಿದ್ವತ್ತೇ ನಮ್ಮ ಬಲವಾಗಿದೆ ; ಈ ವಿದ್ವತ್ತಿನಲ್ಲಿಯೇ ಭಾರತದ ವಿಶಿಷ್ಟ ಖ್ಯಾತಿವೈಭವಗಳು ಅಡಗಿವೆ. ಈ ಪುರಾತನ ಆಧ್ಯಾತ್ಮಿಕ ಪಾಂಡಿತ್ಯದ ಕಾರಣವಾಗಿಯೇ ಭಾರತವು "ಜಗತ್ತಿನ ಉತ್ಕೃಷ್ಟ ದೇಶ"ವಾಗಿದೆ.

* * * *

## ೪. ಸೇವೆ

"ವ್ಯಕ್ತಿಯ ಸೇವೆ ಮತ್ತು ಇಡೀ ಸಮಾಜದ ಮೇಲೆ ಅನುರಕ್ತಿ" ಎಂಬ ಸೂತ್ರವೊಂದನ್ನು ನಾನು ರೂಪಿಸಿದ್ದೇನೆ. ವ್ಯಕ್ತಿಯೊಬ್ಬನ ಸೇವೆ ಮಾಡುವಾಗ ಅವನ ಮೇಲಿನ ಪ್ರೀತಿ ಹೆಚ್ಚಾಗುವ ಅಪಾಯವಿದೆ. ಆದುದರಿಂದ ಇಡೀ ಸಮಾಜದ ಮೇಲೆ ನಮಗಿರುವ ಪ್ರೀತಿ ಹೆಚ್ಚಾಗಬೇಕು. ಅಲ್ಲದೆ, ಸಮಾಜಕ್ಕೆ ಯಾವುದಾದರೂ ಸೇವೆ ಸಲ್ಲಿಸಲು ಪ್ರಯತ್ನಿಸಿದ ಪಕ್ಷದಲ್ಲಿ ಕೆಲಮಟ್ಟಿನ ಅಮೂಲ್ಯ ಸಾಧನೆಮಾಡುವುದು ಮಾತ್ರ ಸಾಧ್ಯವಾಗುತ್ತದೆ. ತನ್ನ ತಾಯಿಯ ಸೇವೆ ಮಾಡುವ ಮಗ ಇಡೀ ಜಗತ್ತಿನ ಸೇವೆಯನ್ನು ಮಾಡುತ್ತಾನೆ ಎಂದು ನಾನು ನಂಬಿದ್ದೇನೆ. ಅಮೂರ್ತ ಪರಿಕಲ್ಪನೆಯನ್ನು ಹೊಂದಿದ ಜೀವಿಯ ಸೇವೆ ಸಲ್ಲಿಸುವುದು ಅಸಾಧ್ಯ; ಮೂರ್ತ ಜೀವಿಗಳ ಸೇವೆ ಮಾಡುವುದು ಮಾತ್ರ ಸಾಧ್ಯ. ಸಮಾಜವು ಅಮೂರ್ತ, ಅಗೋಚರ ಮತ್ತು ಉಪಾಧಿರಹಿತ.

೨. ನಮ್ಮ ವಿಧಾನವು ಪ್ರೀತಿ ಮತ್ತು ಅಹಿಂಸೆಗಳನ್ನು ಆಧರಿಸಿರಬೇಕು. ಬಾಗಿಲನ್ನು ಒಡೆದು ನಾನು ಯಾವ ಕೊಠಡಿಯನ್ನೂ ಪ್ರವೇಶಿಸುವುದಿಲ್ಲ. ಇದು ನನ್ನ ಔಚಿತ್ಯಪ್ರಜ್ಞೆಗೆ ಸಂಬಂಧಿಸಿದ ವಿಷಯ. ಸೂರ್ಯಕಿರಣಗಳ ನಿದರ್ಶನವನ್ನು ನಾನು ಅನುಸರಿಸುತ್ತೇನೆ. ಅವು ಸದ್ದು ಮಾಡದೆ ಶಾಂತವಾಗಿ ಬಾಗಿಲಿನ, ತಾರಸಿಯ ಅಥವಾ ಗೋಡೆಯ ಸಂದಿನ ಮೂಲಕ ಕೊಠಡಿಯನ್ನು ಪ್ರವೇಶಿಸುತ್ತವೆ. ನಾವು ಇಂತಹ ಮನೋವೃತ್ತಿಯನ್ನೇ ಬೆಳೆಸಿಕೊಳ್ಳಬೇಕು. ನಮ್ಮ ವಿಚಾರಶಕ್ತಿಯೇ ನಮ್ಮ ದಾರಿದೀಪ......ಸೈದ್ಧಾಂತಿಕ ವಾದವಿವಾದಗಳಲ್ಲಿ ತೊಡಗುವುದು ನಮ್ಮ ಕೆಲಸವಲ್ಲ. ಅವಿಶ್ರಾಂತವಾಗಿ ಜನರ ಸೇವೆ ಮಾಡುವುದಷ್ಟೇ ನಮ್ಮ ಕೆಲಸವಾಗಬೇಕು. ನಮ್ಮ ವಿಚಾರಧಾರೆಗಳ ಪ್ರಸಾರಕ್ಕೆ ನಾವು ಬಳಸಬಹುದಾದ ಏಕೈಕ ಮಾರ್ಗವೇ ಸೇವೆ.

೩. ನಮ್ಮ ವಿಚಾರಧಾರೆಯ ಅನುಸಾರವಾಗಿ, ಜನಸೇವೆಯೇ ಜನಾರ್ಧನ ಪೂಜೆ. ಹಲವು ಹಳ್ಳಿಗಳ ಗುಂಪೇ ನಮ್ಮ ದೇವಾಲಯ.

೪. ಒಂದು ಹಳ್ಳಿಗೆ ಹೋದಾಗ ನಿಮ್ಮೆದುರು ದೊಡ್ಡ ಜಗತ್ತೇ ತೆರೆದುಕೊಳ್ಳುತ್ತದೆ. ಅನೇಕ ಸ್ತ್ರೀಪುರುಷರ ಸಂಪರ್ಕಪರಿಚಯಗಳು ನಿಮಗೆ ಆಗುತ್ತವೆ. ಪ್ರತಿ ಕ್ಷಣವೂ ನಾವು ಅವರ ಸದ್ಗುಣಗಳನ್ನಷ್ಟೇ ತಪ್ಪದೆ ಗಮನಿಸಬೇಕು. ತಪ್ಪುಗಳನ್ನು ಕಂಡು ಹುಡುಕುವ ಪ್ರವೃತ್ತಿಯನ್ನು ನಿಗ್ರಹಿಸಬೇಕು. ಮನುಷ್ಯನ ಮನಸ್ಸನ್ನು ನಾನು ಮನೆಗೆ ಹೋಲಿಸುತ್ತೇನೆ. ಮನೆಗೆ ಬಾಗಿಲುಗಳಿರುತ್ತವೆ ; ಗೋಡೆಗಳೂ ಇರುತ್ತವೆ. ವ್ಯಕ್ತಿಯ



ಸದ್ಗುಣಗಳು ಅವನ ಮನಸ್ಸಿನ ಬಾಗಿಲುಗಳಾದರೆ, ದುರ್ಗುಣಗಳು ಹಾಗೂ ಸೋಲುಗಳು ಗೋಡೆಗಳಂತೆ. ಬಾಗಿಲಿನ ಮೂಲಕ ಮನೆಯನ್ನು ಪ್ರವೇಶಿಸುವುದು ಸುಲಭ. ಗೋಡೆಯ ಮೂಲಕ ಬಲವಂತವಾಗಿ ಪ್ರವೇಶಿಸಿದ ಪಕ್ಷದಲ್ಲಿ ಪರಿಣಾಮವಾಗಿ ತಲೆಯು ಒಡೆದುಹೋಗುತ್ತದೆ. ಆದುದರಿಂದಲೇ ಇತರರ ಶ್ರೇಷ್ಠತೆಗಳನ್ನು ಮೆಚ್ಚಲು ಯಾವಾಗಲೂ ಒಂದು ಮನೋಧರ್ಮ ಆವಶ್ಯಕ. ವಾಸ್ತವವಾಗಿ ಹೇಳುವುದಾದರೆ, ಎಲ್ಲ ಸ್ತ್ರೀಪುರುಷರನ್ನು ಪರಮಾತ್ಮನ ವಿವಿಧ ಪ್ರತಿಮೆಗಳಂತೆ ಭಾವಿಸಬೇಕು. ಇದು ಸಾಧ್ಯವಾದರೆ, ಆಗ ನಮ್ಮ ಕೆಲಸ ಸುಲಭವಾಗುತ್ತದೆ.

೫. ಶಾರೀರಿಕ ಸೇವೆಯೇ ಆಗಲಿ, ಬೌದ್ಧಿಕ ಸೇವೆಯೇ ಆಗಲಿ, ಹಣದ ಅಥವಾ ಆರ್ಥಿಕ ಲಾಭದ ಪರಿಭಾಷೆಯಲ್ಲಿ ಅದರ ಮೌಲ್ಯಮಾಪನ ಮಾಡಕೂಡದು. ಇದು ಸೈದ್ಧಾಂತಿಕವಾಗಿ ಸರಿಯಲ್ಲ. ಏಕೆಂದರೆ ಸೇವೆಯೆಂಬುದು ನೈತಿಕವರ್ಗಕ್ಕೆ ಸೇರಿದ್ದು. ಆದುದರಿಂದ ಅದರ ಮೌಲ್ಯವನ್ನು ನೈತಿಕ ಪರಿಭಾಷೆಯಲ್ಲಿ ಮಾಪನ ಮಾಡಬೇಕು. ಕಾಯಿಲೆಬಿದ್ದ ಸಮಯದಲ್ಲಿ ರೋಗಿಯ ಸೇವೆಯನ್ನು, ಶುಶ್ರೂಷೆ ಮಾಡುವ ಮೂಲಕ ಅಥವಾ ಹಗಲಿರುಳೂ ಆತಂಕದಿಂದ ಅವನ ಮೇಲೆ ಕಣ್ಣಿಡುವುದರ ಮೂಲಕ ಜನಸೇವಕನೊಬ್ಬ ಮಾಡಿದ ಸೇವೆಯನ್ನು ಮೌಲ್ಯಮಾಪನ ಮಾಡುವುದು ಹೇಗೆ? ನ್ಯಾಯಾಧೀಶರೊಬ್ಬರು ನೀಡಿದ ನಿಷ್ಪಕ್ಷಪಾತ ತೀರ್ಪಿನ ಮಹತ್ತ್ವವನ್ನು ಹಣದ ಪರಿಭಾಷೆಯಲ್ಲಿ ಅಳೆಯುವುದು ಹೇಗೆ? ಮುಳುಗುತ್ತಿರುವ ಅಥವಾ ಬೆಂಕಿಯ ಜ್ವಾಲೆಗೆ ಸಿಕ್ಕಿ ಒದ್ದಾಡುತ್ತಿರುವ ವ್ಯಕ್ತಿಯನ್ನು ರಕ್ಷಿಸುವ ಶ್ಲಾಘ್ಯ ಸೇವೆಯ ಬೆಲೆಕಟ್ಟಲು ಗಣಿತದ ಮೂಲಕ ಹೇಗೆ ಸಾಧ್ಯ? ಯೋಗ್ಯ ರೀತಿಯಲ್ಲಿ ನಿರ್ವಹಿಸಿದ ಕರ್ತವ್ಯ ಅಥವಾ ಮಾಡಿದ ಸೇವೆಯಿಂದ ದೊರೆತ ಆರ್ಥಿಕ ಗಳಿಕೆಯ ಪರಿಭಾಷೆಯಲ್ಲಿ ಮೌಲ್ಯಮಾಪನ ಮಾಡುವುದನ್ನು ಬಿಟ್ಟುಬಿಡಲೇಬೇಕು. ವ್ಯಕ್ತಿಯು ತನ್ನ ಸಂಪೂರ್ಣ ಸಾಮರ್ಥ್ಯವನ್ನು ಬಳಸಿ ಸಮಾಜಕ್ಕೆ ನಿಷ್ಠ ಸೇವೆಯನ್ನು ಸಲ್ಲಿಸಬೇಕು; ಹಾಗೆಯೇ, ಸಮಾಜವು ಆ ವ್ಯಕ್ತಿಯ ಜೀವನಕ್ಕೆ ಆವಶ್ಯಕವಾಗಿರುವುದನ್ನು ಒದಗಿಸುವ ತನ್ನ ಕರ್ತವ್ಯವನ್ನು ತಪ್ಪದೆ ನಿರ್ವಹಿಸಬೇಕು. ಸೇವೆಯನ್ನು ಸಲ್ಲಿಸುವ ಅಥವಾ ಕರ್ತವ್ಯವನ್ನು ನಿರ್ವಹಿಸುವ ರೀತಿ ಹೀಗಿರಬೇಕು.

೬. ನಿಮ್ಮ ಸುತ್ತಮುತ್ತ ಇರುವವರಿಗೆ, ಸಾಧುಸಂತರಿಗೆ, ದುಃಖಸಂಕಟಗಳನ್ನು ಅನುಭವಿಸುತ್ತಿರುವವರಿಗೆ ಹಾಗೂ ನಿಮ್ಮನ್ನು ದ್ವೇಷಿಸುತ್ತಿರುವವರಿಗೆ ನೀವು ಸಲ್ಲಿಸುವ ಸೇವೆಯೇ ಅತ್ಯುತ್ತಮ ಸೇವೆ.

೭. ಸೂರ್ಯ ಎಲ್ಲಿಗೇ ಹೋಗಲಿ ಅಲ್ಲಿಗೆ ತನ್ನೊಡನೆ ಹಗಲು ಬೆಳಕನ್ನು ಕೊಂಡೊಯ್ಯುತ್ತಾನೆ. ಜನಸೇವಕನೂ ಹಾಗೆಯೇ ಮಾಡಬೇಕು. ಸಮಯ ಮತ್ತು ಸ್ಥಳ ಯಾವುದೇ ಇರಲಿ, ಯಾವುದೇ ಕೆಲಸದಲ್ಲಿ ತೊಡಗಿರಲಿ ತಾನು ಜನ ಸೇವಕನೆಂಬ ಪ್ರಜ್ಞೆ ಸದಾ ವ್ಯಕ್ತಿಗೆ ಇರಬೇಕು.

೮. ದೇಶವೊಂದು ಸ್ವಾತಂತ್ರ್ಯ ಪಡೆದಾಗ, ಅದರ ಶಕ್ತಿ ಸಾಮರ್ಥ್ಯಗಳ ಮೂಲ ಬದಲಾಗುತ್ತದೆ. ಈ ಶಕ್ತಿಸಾಮರ್ಥ್ಯಗಳು ರಾಜಕೀಯ ಚಟುವಟಿಕೆಗಳಲ್ಲಿ ಇರುವುದಿಲ್ಲ ; ಸಾಮಾಜಿಕ ಸೇವೆಯಲ್ಲಿರುತ್ತದೆ. ಸಮಾಜದ ವಿನ್ಯಾಸವನ್ನು ಬದಲಾಯಿಸುವುದು ಮತ್ತು ಆರ್ಥಿಕ ಅಸಮಾನತೆಯನ್ನು ನಿವಾರಿಸುವುದು ಮುಖ್ಯ ಕಾರ್ಯವಾಗಿದೆ. ಇಂತಹ ಎಲ್ಲ ರೀತಿಯ ಕೆಲಸಗಳನ್ನೂ ಸಾಮಾಜಿಕ ಕ್ಷೇತ್ರದಲ್ಲಿ ಮಾಡಬೇಕು. ಈ ಕಾರ್ಯದಲ್ಲಿ ತೊಡಗಿದಾಗ, ತ್ಯಾಗ ಮಾಡುವ ಅನೇಕ ಅವಕಾಶಗಳು ಒದಗಿಬರುತ್ತವೆ. ಅಂತೆಯೇ ಅನೇಕ ಕಷ್ಟಗಳೂ ಎದುರಾಗುತ್ತವೆ. ಆಗ ವ್ಯಕ್ತಿಯು ಇಂದ್ರಿಯ ಸುಖಾಪೇಕ್ಷೆಗಳನ್ನು ನಿಗ್ರಹದಲ್ಲಿ ಇರಿಸಿಕೊಳ್ಳಬೇಕು, ಜನಸೇವಕನು ಕೆಲಮಟ್ಟಿಗೆ ವಿರಕ್ತನಂತೆ ಇರಬೇಕು. ಆದುದರಿಂದಲೇ ಸಾಮಾಜಿಕ ಸೇವಾಲಯದಲ್ಲಿ ಮಾತ್ರ ಸೇವಾ ಸಾಮರ್ಥ್ಯ ಇರುತ್ತದೆ.

೯. ಸ್ಥೂಲ ದೃಷ್ಟಿಯನ್ನೂ ವಿಶ್ವ ಪರಿಭಾಷೆಯಲ್ಲಿ ಚಿಂತನೆ ನಡೆಸುವ ಅಭ್ಯಾಸವನ್ನೂ ಬೆಳೆಸಿಕೊಂಡ ವಿದ್ಯಾರ್ಥಿಗಳು ಚಿಕ್ಕಪುಟ್ಟ ಪ್ರದೇಶಗಳಲ್ಲಿ ಸೇವಾಕಾರ್ಯಗಳನ್ನು ನಿರ್ವಹಿಸತೊಡಗಿದರೆ ಅಪಾಯವಿಲ್ಲ. ಆದರೆ ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳುವ ಮೊದಲೇ ಸೀಮಿತ ಕ್ಷೇತ್ರದಲ್ಲಿ ಕೆಲಸವನ್ನು ಪ್ರಾರಂಭಿಸಿದರೆ ಆಗ ಅವರ ಸಮಗ್ರ ಬದುಕು ಕಿರಿದಾಗುತ್ತದೆ ; ಪ್ರಾಂತೀಯವಾಗುತ್ತದೆ. ಅವರು ಸೇವೆಗಾಗಿ ಆಯ್ಕೆ ಮಾಡಿಕೊಂಡ ಕ್ಷೇತ್ರವು ನಿರ್ಬಂಧಿತವಾಗಿದ್ದರೆ ಅಥವಾ ಅವರು ತಮ್ಮ ಸೇವಾಕಾರ್ಯವನ್ನು ತಮ್ಮ ಕುಟುಂಬ, ಗ್ರಾಮ ಅಥವಾ ದೇಶಕ್ಕೆ ಮಾತ್ರ ಸೀಮಿತಗೊಳಿಸಿಕೊಂಡರೆ, ಆಗ ಕೂಡ ವಿಶಾಲವಾದ ವಿಶ್ವಮನೋಭಾವದಿಂದಲೇ ಸೇವಾಕಾರ್ಯವನ್ನು ನಿರ್ವಹಿಸಬೇಕು. ಅಂತಹ ವಿಶ್ವಮನೋಭಾವವನ್ನು ವಿದ್ಯಾರ್ಥಿಗಳು ಹೊಂದಿರಲಾರರು. ನಿಮ್ಮ ಉದಾರ ಮನೋಭಾವವು ಎಷ್ಟು ವಿಸ್ತೃತವಾಗಿರುತ್ತದೋ ಅಷ್ಟುಮಟ್ಟಿಗೆ ಸೇವೆಯ ಮೌಲ್ಯವು ಅಧಿಕವಾಗಿರುತ್ತದೆ. ಸೇವೆಯ ಮೌಲ್ಯವು ಅದರ ಪರಿಮಾಣವನ್ನು ಅವಲಂಬಿಸಿರುವುದಿಲ್ಲ.

೧೦. ದೇಹವು ಒಂದು ಸೇವಾಸಾಧನವೆಂಬ ಅರಿವು, ದೇಹದ ಮೇಲಿನ ಮಮಕಾರ ಇಲ್ಲವಾದಾಗ, ಮೂಡುತ್ತದೆ. ಮತ್ತು ಆಗ, ದೇಹಕ್ಕೂ ಅದರ ನಿಜವಾದ ಘನತೆಗಾಂಭೀರ್ಯಗಳು ಪ್ರಾಪ್ತವಾಗುತ್ತವೆ........ ದೇಹದಿಂದ ಕಾರ್ಯವನ್ನು ನಿರ್ವಹಿಸುವ ಸಾಮರ್ಥ್ಯವನ್ನು ಪಡೆಯಲು, ಚಲನಶೀಲ ಯಂತ್ರಕ್ಕೆ ಕಲ್ಲಿದ್ದಲನ್ನು ಒದಗಿಸಿದಂತೆ, ನಾವು ದೇಹಕ್ಕೆ ಆಹಾರವನ್ನು ಒದಗಿಸಬೇಕಾದುದು ಆವಶ್ಯಕ. ಹೀಗೆ ದೇಹವನ್ನು ಬಳಸಿದಾಗ, ಅದು ಅಮೂಲ್ಯವಾಗುತ್ತದೆ; ಮೂಲತಃ ಸ್ವಂತ ಬೆಲೆಯಿಲ್ಲದ್ದಾಗಿದ್ದರೂ, ಅದು ಅಮೂಲ್ಯವೆನಿಸುತ್ತದೆ; ಗೌರವಕ್ಕೆ ಪಾತ್ರವಾಗುತ್ತದೆ.

* * * *



## ೫. ಶಿಕ್ಷಣ

೧. ಅಧ್ಯಯನದಲ್ಲಿ ಉದ್ದ ಅಥವಾ ಅಗಲಗಳು ಮುಖ್ಯವಲ್ಲ; ಆಳವೇ ಅತಿ ಮುಖ್ಯ. ನಿರಂತರವಾಗಿ ಗಂಟೆಗಟ್ಟಲೆ ಕಾಲ ಓದನ್ನು ಮುಂದುವರಿಸುವುದು ಹಾಗೂ ಅನೇಕ ವಿಷಯಗಳ ಅಧ್ಯಯನ ಮಾಡುವುದಕ್ಕೆ ಅಧ್ಯಯನದ 'ಉದ್ದ ಮತ್ತು ಅಗಲ'ವೆಂಬ ಪರಿಭಾಷೆಯನ್ನು ನಾನು ಬಳಸಿದ್ದೇನೆ. ಮನಸ್ಸನ್ನು ಕೇಂದ್ರೀಕರಿಸಿ, ಒಂದು ನಿಶ್ಚಿತ ವಿಷಯವನ್ನು ಕುರಿತು ಕ್ರಮಬದ್ಧವಾಗಿ, ಸ್ವಲ್ಪಸ್ವಲ್ಪವಾದರೂ ಸರಿಯೇ, ಪ್ರತಿದಿನ ಅಧ್ಯಯನ ನಡೆಸುವುದೇ ಆಳವಾದ ಅಧ್ಯಯನ.

ಆಳವಾದ ಅಧ್ಯಯನ ಹಾಗೂ ಸಂಪೂರ್ಣ ತಲ್ಲೀನತೆಗಳಿಲ್ಲದೆ ಜ್ಞಾನವನ್ನು ಸಂಪಾದಿಸುವುದು ಸಾಧ್ಯವಿಲ್ಲ. ಉದ್ದೇಶರಹಿತವಾದ ಮತ್ತು ವಿಸ್ತೃತವಾದ ಅಧ್ಯಯನವು ಶಕ್ತಿ ಸಾಮರ್ಥ್ಯಗಳ ವ್ಯರ್ಥ ಬಳಕೆಯಷ್ಟೇ ಅಲ್ಲ, ಬಹುಮಟ್ಟಿಗೆ ಆತ್ಮವಂಚನೆಯಂತೆ. ಅನೇಕ ವಿಷಯಗಳ ಬಗೆಗಿನ ಪುಸ್ತಕಗಳ ಮೇಲ್ನೋಟದ ಹಾಗೂ ವಿಸ್ತೃತವಾದ ಅಧ್ಯಯನದಲ್ಲಿ ತೊಡಗುವುದರಿಂದ ಶಕ್ತಿಯ ವ್ಯರ್ಥ ವ್ಯಯವಾಗುವುದಷ್ಟೇ ಅಲ್ಲದೆ, ಅಮೂಲ್ಯವಾದ ಏನನ್ನೂ ಸಾಧಿಸಿದಂತಾಗುವುದಿಲ್ಲ. ಅಧ್ಯಯನವು ಓದುಗನ ಬುದ್ಧಿಯನ್ನು ಸ್ವತಂತ್ರವನ್ನಾಗಿ ಪ್ರತಿಭಾಶಾಲಿಯನ್ನಾಗಿ ಮಾಡಬೇಕು. ಹೊಸ ಹೊಸ ಚಿಗುರುಗಳು ಉದಯಿಸುವಂತೆ ಮಾಡುವ ಸೃಜನಶೀಲ ಸಾಮರ್ಥ್ಯ ಪ್ರತಿಭೆ. ಹೊಸ ವಿಚಾರಗಳು, ಹೊಸ ಶಕ್ತಿ, ಹೊಸ ಸಂಶೋಧನೆ ಮತ್ತು ಹೊಸ ಸ್ಫೂರ್ತಿ– ಇವು ಪ್ರತಿಭೆಯ ಲಕ್ಷಣಗಳು. ಉದ್ದೇಶರಹಿತವಾದ ವಿಸ್ತೃತ ಅಧ್ಯಯನದ ಒತ್ತಡದಲ್ಲಿ ನಿಜವಾದ ಪ್ರತಿಭೆಯು ನಶಿಸಿಹೋಗುತ್ತದೆ.

೨. ಸಂಪಾದಿಸಬೇಕಾದ ಎರಡು ಬಗೆಯ ಅಮೂಲ್ಯ ಜ್ಞಾನಗಳಿವೆ. ನಮ್ಮ ಸುತ್ತಮುತ್ತ ಇರುವ ವಸ್ತುವಿಷಯಗಳನ್ನು ಹತ್ತಿರದಿಂದ ಪರೀಕ್ಷಿಸುವ ಸಾಮರ್ಥ್ಯವಾದ ವಿಜ್ಞಾನ ಮೊದಲನೆಯದಾದರೆ ಎರಡನೆಯದೇ ಆತ್ಮಜ್ಞಾನವನ್ನು ಆಧರಿಸಿದ ಆತ್ಮಸಂಯಮದ ಶಕ್ತಿಯನ್ನು ಬೆಳೆಸುವಂತಹ ಆಧ್ಯಾತ್ಮಿಕ ಜ್ಞಾನ. ಆದುದರಿಂದ ಇವುಗಳ ನಡುವಣ ಮಾಧ್ಯಮವಷ್ಟೇ ಆಗಿ, ಭಾಷೆಯು ನಮಗೆ ಅಗತ್ಯವಾಗಿರುತ್ತದೆ. ಈ ಉದ್ದೇಶವನ್ನಿರಿಸಿಕೊಂಡು ಮಾತ್ರ ನಾವು ಭಾಷೆಯನ್ನು ಕಲಿಯಬೇಕು. ಭಾಷೆಯು ಅಂಚೆಯಣ್ಣನ ಕೆಲಸವನ್ನಷ್ಟೇ ಮಾಡುತ್ತದೆ ; ಅದು ಆಲೋಚನೆ ಮತ್ತು ಕಲಿಕೆಗಳ ಮಾಧ್ಯಮವಾಗಿ ಮಾತ್ರ ಕಾರ್ಯವನ್ನು ನಿರ್ವಹಿಸುತ್ತದೆ.

೩. ಗ್ರಂಥಗಳ ಅಧ್ಯಯನ ಮಾಡುವುದರಿಂದ ಜ್ಞಾನವನ್ನು ಸಂಪಾದಿಸಬಹುದು ಎಂಬ ಭಾವನೆ ಸರಿಯಲ್ಲ. ವಿಸ್ತೃತ ಅಧ್ಯಯನದಿಂದ, ನಮ್ಮ ಬುದ್ಧಿಶಕ್ತಿ ಮಂಕಾಗುವ ಹಾಗೂ ಓದಿದುದೆಲ್ಲ ಸರಿ ಎಂದು ನಾವು ಪರಿಗಣಿಸುವಂತಹ ಹಂತಕ್ಕೆ ಬಂದು ಮುಟ್ಟುತ್ತೇವೆ, ಅಷ್ಟೇ! ಆದುದರಿಂದ ತುಂಬ ಹೆಚ್ಚು ಓದುವುದರಿಂದ ಸ್ವತಂತ್ರ ಆಲೋಚನೆಯನ್ನು ಮಾಡುವ ಸಾಮರ್ಥ್ಯವನ್ನು ನಾವು ಕಳೆದುಕೊಳ್ಳುತ್ತೇವೆ.

೪. ಆದುದರಿಂದ ಜ್ಞಾನಕ್ಕೆ ಕೂಡ, ಸ್ವಾಮ್ಯವನ್ನು ಹೊಂದದೆ ಇರುವ ಸಿದ್ಧಾಂತವನ್ನು ಅನ್ವಯಿಸಬೇಕು. ನಿರುಪಯುಕ್ತವಾದ ವಿವಿಧ ಜ್ಞಾನಗಳನ್ನು ಸಂಪಾದಿಸುವುದು ಸರಿಯಲ್ಲ.

೫. ಶ್ರವಣವು ಧ್ಯಾನಕ್ಕೆ ಸರಿಸಾಟಿಯಾಗಲಾರದು.

೬. ಶಿಕ್ಷಣದ ಹಳೆಯ ಪದ್ಧತಿಯ ವಿರುದ್ಧವಾಗಿ ಎಷ್ಟೊಂದು ಆಕ್ಷೇಪಣೆಗಳು ವ್ಯಕ್ತವಾಗಿವೆಯೆಂದರೆ, ಈ ಬಗ್ಗೆ ಹೇಳಲು ನನಗೇನೂ ಉಳಿದಿಲ್ಲ. ಆದರೆ, ಪರೀಕ್ಷೆಯ ಸಮಯದಲ್ಲಿ ನಮ್ಮ ಮೇಲೆ ಕಣ್ಣಿಡಲು ನೇಮಕಗೊಂಡ ಮೇಲ್ವಿಚಾರಕರ ನೆನಪಾದಾಗಲೆಲ್ಲ, ಹಳೆಯ ಶಿಕ್ಷಣಪದ್ಧತಿಯ ದೋಷಗಳ ಜ್ಞಾಪಕವಾಗುತ್ತದೆ. ವಿದ್ಯಾರ್ಥಿಗಳೂ ಪರಸ್ಪರ ನಕಲು ತೆಗೆಯಕೂಡದೆಂದು ನೋಡಿಕೊಳ್ಳಲೆಂದೇ ಈ ಮೇಲ್ವಿಚಾರಕರು ಇರುತ್ತಾರೆ. ವಿದ್ಯಾರ್ಥಿಗಳು ಅಪ್ರಾಮಾಣಿಕತನದಿಂದ ಹೀಗೆ ನಕಲು ತೆಗೆಯುತ್ತಾರೆ ಎಂದು ಪ್ರಾರಂಭದಲ್ಲಿಯೇ ಭಾವಿಸುವುದು ನನಗೆ ನೋವನ್ನು ಉಂಟುಮಾಡುತ್ತದೆ. ಹೀಗೆ ಭಾವಿಸುವುದು ಪರೀಕ್ಷೆಗೆ ಮೊದಲೇ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸಿದಂತೆ. ಅಂದಮೇಲೆ ಇತರ ಪರೀಕ್ಷೆಗಳ ಅಗತ್ಯವಾದರೂ ಏನು ?

೭. ಮೆಟ್ರಿಕ್ಯುಲೇಷನ್ ತರಗತಿಯವರೆಗೆ, ನಮ್ಮ ಶಾಲೆಗಳ ಪ್ರಭಾವಕ್ಕೆ ಒಳಗಾಗಲೇಬೇಕಾದ ಹುಡುಗನು ಕಾಯಕಗೌರವದ ಮಹತ್ತ್ವವನ್ನು ತಿಳಿಯಲು ವಿಫಲನಾಗುವುದಷ್ಟೇ ಅಲ್ಲ ; ಸ್ವಂತ ಘನತೆ–ಗೌರವಗಳನ್ನು ಕಳೆದುಕೊಳ್ಳುತ್ತಾನೆ. ಇದು ನಮ್ಮ ಶಿಕ್ಷಣ ವ್ಯವಸ್ಥೆಯ ಮಹಾಖ್ಯಾತಿಯಾಗಿದೆ! ಹಾಗಿದ್ದರೂ, ಇಂತಹ ಶಿಕ್ಷಣಪದ್ಧತಿಯ 'ಪ್ರಯೋಜನ'ವನ್ನು ಸಾಧ್ಯವಾದಷ್ಟೂ ಪಡೆದುಕೊಳ್ಳತಕ್ಕದ್ದೆಂದು ವಾದಿಸುವ ಮಹಾನುಭಾವರೂ ನಮ್ಮಲ್ಲಿದ್ದಾರೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಆತ್ಮೀಯ ಸಂಬಂಧವಿಲ್ಲದಿರುವೆಡೆ, ತ್ಯಾಗ ಅಥವಾ ಸೇವಾಮನೋಭಾವಗಳಂತಹ ಮೌಲ್ಯಗಳು ಎಲ್ಲಿಂದ ಬರಲು ಸಾಧ್ಯ? ಸೂಕ್ತ ನೈತಿಕ ವಾತಾವರಣವೂ, ಮಾತೃಭಾಷೆಗೆ ಗೌರವದ ಸ್ಥಾನವೂ, ಕಾಯಕಕ್ಕೆ ಮಹತ್ತ್ವವೂ, ಸ್ವತಂತ್ರ ಆಲೋಚನೆಗೆ ಮೌಲ್ಯವೂ ಇಲ್ಲದಿರುವೆಡೆ, ಎಂತಹ ಧನಾತ್ಮಕ 'ಪ್ರಯೋಜನ'ವನ್ನು ತಾನೇ ಪಡೆಯಲು ಸಾಧ್ಯ?

೮. ನೀತಿಬೋಧಕನು ಮೊದಲು ಶಿಷ್ಯನಾಗಬೇಕು; ಶಿಷ್ಯನಲ್ಲದವನು ಎಂದಿಗೂ



ನೀತಿಬೋಧಕನಾಗಲು ಸಾಧ್ಯವಿಲ್ಲ.

೯. ಶಿಷ್ಯನು ಸಂಪಾದಿಸಿದ ಜ್ಞಾನವನ್ನು ದೃಢಪಡಿಸುವುದಷ್ಟೇ ಗುರುವಿನ ಏಕಮೇವ ಕೆಲಸ; ಉಳಿದಂತೆ ಶಿಷ್ಯನೇ ಆತ್ಮವಿಶ್ವಾಸಿಯಾಗಿರಬೇಕು.

೧೦. ಶಿಕ್ಷಣವೆಂದರೆ ಸಜ್ಜನರ ಸಾಂಗತ್ಯವನ್ನು ಹೊಂದಿರುವುದು; ಇದಕ್ಕಿಂತ ಭಿನ್ನವಾದ ಯಾವುದೇ ರೀತಿಯಲ್ಲಿಯೂ ನಾನು ಶಿಕ್ಷಣದ ಪರಿಭಾಷೆಯನ್ನು ನೀಡಲಾರೆ.

೧೧. ನಮ್ಮ ಜನರ ನಡುವೆ ಸಾಮರಸ್ಯವಿಲ್ಲ. ಇದಕ್ಕೆ ಹಲವು ಕಾರಣಗಳಿವೆ. ........ ಶಿಕ್ಷಣ ಪದ್ಧತಿಯು ಸಂಪೂರ್ಣವಾಗಿ ಪರಿಷ್ಕರಿಸುವುದೊಂದೇ ಈ ಸಮಸ್ಯೆಗೆ ಇರುವ ಪರಿಹಾರವಾಗಿದೆ. ೧೯೪೭ರಲ್ಲಿ ನಮ್ಮ ದೇಶದಲ್ಲಿ ಸರ್ಕಾರದ ಬದಲಾವಣೆಯಾದಾಗ್ಯೂ, ಶಿಕ್ಷಣ ಪದ್ಧತಿಯಲ್ಲಿ ಯಾವ ಬದಲಾವಣೆಗಳೂ ಆಗದಿರುವುದು ನನಗೆ ಆಶ್ಚರ್ಯವನ್ನು ಉಂಟುಮಾಡಿದೆ. ಸ್ವಾತಂತ್ರ್ಯ ಲಭಿಸಿದ ದಿನವೇ ನಾನು ಹೀಗೆ ಹೇಳಿದ್ದೆ : "ಈ ದಿನ ಹಳೆಯ ಆಡಳಿತವು ಕೊನೆಗೊಂಡಿದೆ. ಹಳೆಯ ರಾಷ್ಟ್ರಧ್ವಜಕ್ಕೆ ಇನ್ನು ಒಂದೇ ಒಂದು ಕ್ಷಣ ಕಾಲ ಸ್ಥಾನವಿಲ್ಲ. ಹಾಗೆಯೇ ಹಳೆಯ ಶಿಕ್ಷಣಪದ್ಧತಿಯೂ ತತ್‌ಕ್ಷಣ ಬದಲಾಗಬೇಕು." ಆದರೆ, ಅದೇ ಶಿಕ್ಷಣ ಪದ್ಧತಿ ಇಂದಿನವರೆಗೂ ನಿರಾತಂಕವಾಗಿ ಮುಂದುವರಿಯುತ್ತ ಬಂದಿದೆ. ಭಾರತದಲ್ಲಿ ಆಡಳಿತ ನಡೆಸಲು ಇಲ್ಲಿಯ ಕೆಲವು ಜನರನ್ನು ಸರ್ಕಾರಿ ನೌಕರರನ್ನಾಗಿ ನೇಮಿಸಿಕೊಳ್ಳುವ ಆವಶ್ಯಕತೆ ಇಂಗ್ಲೆಂಡಿಗೆ ಇದ್ದಿತ್ತೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಆದ್ದರಿಂದಲೇ ತಮ್ಮ ಶಿಕ್ಷಣವನ್ನು ಅವರು ನೀಡಿದರು. ಇದರ ಪರಿಣಾಮವಾಗಿ, ಈ ಶಿಕ್ಷಣಪದ್ಧತಿಯಂತೆ ಶಿಕ್ಷಣ ಪಡೆದವರು, ಉಳಿದ ಸಾಮಾನ್ಯ ಜನರಿಂದ ಸಂಪೂರ್ಣ ಪ್ರತ್ಯೇಕಗೊಂಡರು. ಹೀಗೆ ಅವರು ಮತ್ತು ಇತರ ನಡುವೆ ಕಂದಕವುಂಟಾಯಿತು. ಈಗ ಕೂಡ ಅದೇ ಶಿಕ್ಷಣವನ್ನು ನಮ್ಮ ಜನರಿಗೆ ನೀಡಲಾಗುತ್ತಿದೆ. ಹೀಗಿರುವಾಗ, ಸಮಾಜದಲ್ಲಿ ಐಕ್ಯ ಹಾಗೂ ಸಾಮರಸ್ಯಗಳಿರಲು ಹೇಗೆ ತಾನೆ ಸಾಧ್ಯ?

೧೨. ಇಂದು ಅಧ್ಯಯನಕ್ಕೆ ಗೊತ್ತುಪಡಿಸಲಾಗಿರುವ ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ಸಂಪೂರ್ಣ ನಿರುಪಯುಕ್ತವಾಗಿವೆ. ಸಂಸ್ಕೃತವನ್ನು ಕಲಿಸುವಾಗ ಕೂಡ, ಕಾಮಸಂಬಂಧವಾದ ಪುಸ್ತಕಗಳನ್ನು ಆಯ್ಕೆ ಮಾಡಲಾಗುತ್ತಿದೆ. 'ಭಗವದ್ಗೀತೆ'ಯನ್ನಾಗಲೀ 'ಉಪನಿಷತ್ತು'ಗಳನ್ನಾಗಲೀ ಬೋಧಿಸಲಾಗುತ್ತಿಲ್ಲ. ವಿದ್ಯಾರ್ಥಿಗಳು ಪದೇಪದೇ ಚಲನಚಿತ್ರ ಮಂದಿರಗಳಿಗೆ ಹೋಗುತ್ತಿದ್ದಾರೆ..... ಇಂತಹ ಪರಿಸ್ಥಿತಿಯಿರುವಾಗ, ವಿದ್ಯಾರ್ಥಿಗಳು ಸದ್ವರ್ತನೆ ತೋರಿಸಬೇಕೆಂದು ನಿರೀಕ್ಷಿಸುವುದಾದರೂ ಹೇಗೆ? "ನೀವು ಶಿಕ್ಷಣ ಪದ್ಧತಿಯ ವಿರುದ್ಧವಾಗಿ ಏಕೆ ಮಾತನಾಡುತ್ತೀರಿ? ಲೋಕಮಾನ್ಯ ತಿಲಕರೂ ಮಹಾತ್ಮಾ ಗಾಂಧೀಜಿಯವರೂ

ಇದೇ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾಭ್ಯಾಸ ನಡೆಸಿದವರಲ್ಲವೇ?" ಎಂದು ವಾದಿಸುವ ಕೆಲವರಿದ್ದಾರೆ. ಅವರಿಗೆ ನಾನು ಹೇಳುವುದಿಷ್ಟೇ : ಲೋಕಮಾನ್ಯ ತಿಲಕರೂ ಮಹಾತ್ಮಾಗಾಂಧೀಜಿಯವರೂ ಹಾಗೆ ಬೆಳೆದದ್ದು ತಮ್ಮ ಸ್ವಪ್ರಯತ್ನದಿಂದಲ್ಲದೆ, ಈ ಪದ್ಧತಿಯ ಶಿಕ್ಷಣದಿಂದ ಅಲ್ಲ ; ಹೀಗೆ ಅವರೇ ಹೇಳಿದ್ದಾರೆ. ಆದರೂ ಅವರ ಹೆಸರುಗಳನ್ನು ಉಲ್ಲೇಖಿಸಲಾಗುತ್ತದೆ; ಅದೇ ನಿರುಪಯುಕ್ತ ಶಿಕ್ಷಣ ಪದ್ಧತಿ ಮುಂದುವರಿಯುತ್ತಿದೆ. ಇಂದು ಇಂತಹ ತುಚ್ಛ ಶಿಕ್ಷಣವನ್ನೇ ನೀಡಲಾಗುತ್ತಿದ್ದರೂ, ವಿದ್ಯಾರ್ಥಿಗಳು ತುಂಬ ಶಾಂತವಾಗಿ, ವಿಧೇಯರಾಗಿರುವುದು ನನಗೆ ತುಂಬ ಆಶ್ಚರ್ಯವನ್ನು ಉಂಟುಮಾಡುತ್ತಿದೆ.

೧೩. ನಾನೆಂಬುದು ಈ ದೇಹವಲ್ಲ, ನಾನು ಈ ದೇಹದಿಂದ ಬೇರೆಯೇ ಆಗಿರುತ್ತೇನೆ. ನಮ್ಮ ಸಹಜ ಸ್ವಭಾವವು ತುಂಬ ಸುಂದರವಾಗಿದೆ; ಸಂಪೂರ್ಣ ಪರಿಶುದ್ಧವಾಗಿದೆ. ಅದೆಂದೂ ಅಪರಿಶುದ್ಧವಾಗಲು ಸಾಧ್ಯವಿಲ್ಲ. ಅದರಿಂದ ತಪ್ಪುಗಳಾಗುವುದೂ ಸಾಧ್ಯವಿಲ್ಲ. ತಪ್ಪುಗಳಾಗುವುದು ನಮ್ಮ ದೇಹದಿಂದಲೇ. ದೇಹಕ್ಕೇ ಅನಾರೋಗ್ಯವುಂಟಾಗುವುದು, ಶಿಥಿಲವಾಗುವುದು ಕೂಡ ದೇಹವೇ. ನಾನು ಶಿಥಿಲವಾಗುವುದಿಲ್ಲ; ನನಗೆ ಅನಾರೋಗ್ಯವುಂಟಾಗುವುದೂ ಇಲ್ಲ. ಆತ್ಮವು ದೇಹಕ್ಕಿಂತ ಭಿನ್ನವೆಂಬ ಪ್ರಜ್ಞೆಯುಂಟಾಗುವುದೇ ನಿಜವಾದ ಶಿಕ್ಷಣ. ದೇಹಕ್ಕಿಂತ ಬೇರೆಯಾಗಿರುವಂತಹ ನಿಜವಾದ ಆತ್ಮದ ಅರಿವು ಮೂಡದಿರುವೆಡೆ, ಯಾವ ಶಿಕ್ಷಣಪದ್ಧತಿಯಾಗಲೀ ಯಾವ ಶಿಕ್ಷಣಸಂಸ್ಥೆಯೇ ಆಗಲಿ ಉಪಯುಕ್ತವೆನಿಸುವುದಿಲ್ಲ.

* * * *



## ೬. ಕಾಯಕ ಗೌರವ

ವಿದ್ಯಾರ್ಥಿಗಳು ದೈಹಿಕ ಶ್ರಮದ ಕೆಲಸ ಮಾಡಬೇಕೆಂದು ನಿರೀಕ್ಷಿಸುವ ಶಿಕ್ಷಕರೂ ಅವರೊಂದಿಗೆ ಕೆಲಸ ಮಾಡಲೇಬೇಕು. ತರಗತಿ ಕೊಠಡಿಗಳನ್ನು ಗುಡಿಸಿ ಸ್ವಚ್ಛಗೊಳಿಸಬೇಕು; ಇದಕ್ಕಾಗಿ ಜವಾನರನ್ನು ನೇಮಿಸಿರುತ್ತಾರೆ ಅಥವಾ ವಿದ್ಯಾರ್ಥಿಗಳೇ ಆ ಕೆಲಸ ಮಾಡುತ್ತಾರೆ. ಸಾಮಾನ್ಯವಾಗಿ ಹೀಗೆಯೇ ಇರುತ್ತದೆ. ಶಿಕ್ಷಕರು ತರಗತಿ ಕೊಠಡಿಗಳನ್ನು ಗುಡಿಸುವುದನ್ನು ನಾವೆಂದೂ ನೋಡಿಲ್ಲ. ವಿದ್ಯಾರ್ಥಿಗಳೇ ಮೊದಲು ತರಗತಿಗೆ ಬಂದರೆ, ಅವರು ಕಸ ಗುಡಿಸಬೇಕು. ಎಂದಾದರೂ ಶಿಕ್ಷಕರೇ ಮೊದಲು ಬಂದರೆ, ಅವರೇ ಆ ಕೆಲಸ ಮಾಡಬೇಕು. ಆದರೆ ಕಸ ಗುಡಿಸುವ ಕೆಲಸವು ಕೆಳದರ್ಜೆಯ ಕೆಲಸ, ಅದು ನಮ್ಮ ಘನತೆಗೆ ತಕ್ಕದ್ದಲ್ಲ ಎಂದು ನಾವು ಪರಿಗಣಿಸಿದ್ದೇವೆ. ಹೀಗಿರುವಾಗ ಶಿಕ್ಷಕರು ಅದನ್ನು ಮಾಡಬೇಕೆಂದು ನಿರೀಕ್ಷಿಸುವುದು ಹೇಗೆ?

೨. ಗ್ರಾಮಗಳ ಜನರು ದೇವರಸೇವೆ ಮಾಡುತ್ತಾರೆ, ಮತ್ತು ನಗರ ನಿವಾಸಿಗಳು ಅವರೊಂದಿಗೆ ಸಂಪರ್ಕವನ್ನು ಇರಿಸಿಕೊಂಡಿರಬೇಕು ಎಂದು ನಾನು ಆಗಾಗ ಹೇಳುತ್ತೇನೆ. ಗ್ರಾಮಸ್ಥರು ನೇರವಾಗಿ ದೇವರಸೇವೆ ಮಾಡುತ್ತಾರೆ. ಆದುದರಿಂದ ನಗರ ನಿವಾಸಿಗಳು ದೇವರ ಆ ಸೇವಕರ ಸೇವೆ ಮಾಡಬೇಕು. ಗ್ರಾಮಸ್ಥರು ಮತ್ತು ನಗರ ನಿವಾಸಿಗಳ ನಡುವೆ ಆತ್ಮೀಯ ಪ್ರೀತಿ ಬೆಳೆದರೆ, ಆಗ ಭಾರತದಲ್ಲಿ ನಿಜವಾದ ಐಕ್ಯ ಹಾಗೂ ಅನ್ಯೋನ್ಯತೆಗಳು ನೆಲಸುತ್ತವೆ.

ನಗರನಿವಾಸಿಗಳು ಗ್ರಾಮಸ್ಥರ ಒಳ್ಳೆಯ ಸ್ವಭಾವಗಳನ್ನು ಕುರಿತಂತೆ ಗಂಭೀರ ಅಧ್ಯಯನ ನಡೆಸಬೇಕು. ಗ್ರಾಮಗಳ ಜನರು ಕಷ್ಟಕರವಾದ ದೈಹಿಕ ಕೆಲಸಗಳನ್ನು ಮಾಡುತ್ತಾರೆ. ಆದರೆ ನಗರಗಳ ಜನರಿಗೆ ಇಂತಹ ಅಭ್ಯಾಸ ಇರುವುದಿಲ್ಲ. ........ಸುಶಿಕ್ಷಿತರು, ಶಾರೀರಿಕ ವ್ಯಾಯಾಮ ಮಾಡಬೇಕಾಗಿ ಬಂದ ಸಂದರ್ಭಗಳನ್ನು ಬಿಟ್ಟುಳಿದಂತೆ, ಕೆಲಸ ಮಾಡುವುದಿಲ್ಲ. ಅವರು ಇಗ್ಗುಂಡುಗಳಂತಹ ಸಾಧನಗಳನ್ನು ಹಿಡಿದುಕೊಂಡು ವ್ಯಾಯಾಮ ಮಾಡುತ್ತಾರೆ. ಕೆಲಸವು ಸಂಪೂರ್ಣ ಅನುತ್ಪಾದಕವಾದಾಗಲೂ ಕೆಲವು ಸಲ ಅದನ್ನು ಘನಕಾರ್ಯವೆಂದು ಪರಿಗಣಿಸಲಾಗುತ್ತದೆ. ಆದರೆ, ಉತ್ಪಾದನೆಯ ದೃಷ್ಟಿಯಿಂದ ಕೆಲಸ ಮಾಡುವವರನ್ನು ಕಾರ್ಮಿಕರೆಂದು ಕರೆಯಲಾಗುತ್ತದೆ. ಕಾರ್ಮಿಕರನ್ನು ಎಷ್ಟು ಕಡೆಗಣಿಸಲಾಗಿದೆಯೆಂದರೆ, ಅವರ ಹೆಸರುಗಳನ್ನು ನಾವು ನೆನಪಿನಲ್ಲಿ ಇಟ್ಟುಕೊಂಡಿರುವುದಿಲ್ಲ. ದೈಹಿಕ ಕೆಲಸ ಮಾಡುವವರನ್ನು ಕೆಳದರ್ಜೆಯವರೆಂದು ನಾವು ಭಾವಿಸಿರುತ್ತೇವೆ. ಅಸಹ್ಯಕರ

ಅಪರಾಧಗಳನ್ನು ಮಾಡುವವರನ್ನೂ ನಾಗರಿಕರೆಂದು ಗೌರವಿಸಲಾಗುತ್ತಿದೆ. ಜಾಡಮಾಲಿಗಳನ್ನು, ಬೀದಿ ಕಸಗುಡಿಸುವವರನ್ನು 'ಅಸ್ಪೃಶ್ಯ'ರೆಂದು ಕರೆಯುತ್ತೇವೆ. ನಗರನಿವಾಸಿಗಳು ಇಂತಹ ಮನೋಭಾವವನ್ನು ಬಿಡಬೇಕು, ಅವರು ಗ್ರಾಮ ನಿವಾಸಿಗಳ ಸೇವಕರಾಗಬೇಕು.

೩. ಇಂದು ಪ್ರಾಧ್ಯಾಪಕನೊಬ್ಬ ತಿಂಗಳಿಗೆ ೫೦೦ ರೂ. ಸಂಬಳ ಪಡೆಯುತ್ತಾನೆ. ಅವನಿಗೆ ವರ್ಷಕ್ಕೆ ಸುಮಾರು ಆರು ತಿಂಗಳಿನಷ್ಟು ರಜೆಯಿರುತ್ತದೆ, ಕೆಲಸವಿರುವುದು ಉಳಿದ ಆರು ತಿಂಗಳು ಮಾತ್ರ. ಈ ಆರು ತಿಂಗಳ ಅವಧಿಯಲ್ಲಿಯೂ ಅವನು ದಿನಕ್ಕೆ ಮೂರು ಗಂಟೆಗಳಿಗಿಂತ ಹೆಚ್ಚು ಸಮಯ ಕೆಲಸ ಮಾಡುವುದಿಲ್ಲ. ಆದರೂ ಅವನಿಗೆ ೫೦೦ ರೂ.ಗಳ ಮಾಸಿಕ ವೇತನ! ಎಂದರೆ ವರ್ಷಕ್ಕೆ ೬೦೦೦ ರೂ. ಸಂಬಳ. ಆರು ತಿಂಗಳ ಕಾಲ ದಿನಕ್ಕೆ ಮೂರು ಗಂಟೆಗಳ ಕೆಲಸವೆಂದರೆ, ವರ್ಷಕ್ಕೆ ೬೦೦ ಗಂಟೆಗಳಷ್ಟು ಮಾತ್ರ ಕೆಲಸ! ಆದರೆ ಅವನಿಗೆ ಸಿಗುವ ವಾರ್ಷಿಕ ವೇತನ ೬೦೦೦ ರೂ. ಹೀಗೆ ಪ್ರಾಧ್ಯಾಪಕನು ಗಂಟೆಗೆ ೧೦ ರೂ. ಸಂಭಾವನೆ ಪಡೆಯುತ್ತಾನೆ. ಆದರೆ ದೈಹಿಕ ದುಡಿಮೆಯಲ್ಲಿ ತೊಡಗುವ ಕಾರ್ಮಿಕನಿಗೆ ಒಂದು ಗಂಟೆಗೆ, ಹೆಚ್ಚೆಂದರೆ ಎರಡು ಆಣೆಗಳಷ್ಟು ಮಾತ್ರ. ಇಂತಹ ಅಸಮಾನತೆಯ ಪರಿಸ್ಥಿತಿಯಲ್ಲಿ ಧರ್ಮದ ಅಭಿವೃದ್ಧಿಯನ್ನು ನಿರೀಕ್ಷಿಸುವುದಾದರೂ ಹೇಗೆ? ಆದುದರಿಂದಲೇ, ಇನ್ನೂ ಧರ್ಮ ಸ್ಥಾಪನೆಯಾಗಿಲ್ಲವೆಂದು ನಾನು ಹೇಳುತ್ತೇನೆ.

೪. ಇಂದಿನ ದುಃಖಸಂಕಟಗಳಿಗೆ ಆಲಸ್ಯವೇ ಪ್ರಮುಖ ಕಾರಣ. ಎಲ್ಲರೂ ದೈಹಿಕ ದುಡಿಮೆಯಲ್ಲಿ ತೊಡಗುವ ನಿರ್ಧಾರ ಮಾಡಿದರೆ, ಎಲ್ಲ ದುಃಖಸಂಕಟಗಳ ನಿವಾರಣೆಯಾಗುತ್ತದೆ.

ದೈಹಿಕ ಶ್ರಮದಿಂದ ಪಾರಾಗಬೇಕು ಎಂಬ ಸಾರ್ವತ್ರಿಕ ಮನೋಭಾವನೆಯಿದೆ. ದೇಹವು ಸಂಪೂರ್ಣ ಪ್ರಯಾಸ ಹೊಂದುವ ತನಕ ಕೆಲಸ ಮಾಡಲೇಬೇಕಾದವರೇನೂ ಅಂತಹ ಕೆಲಸಗಳನ್ನು ಸ್ವಂತ ಇಚ್ಛೆಯಿಂದ ಆಯ್ದುಕೊಂಡಿರುವುದಿಲ್ಲ. ಬೇರೆ ದಾರಿಯಿಲ್ಲವಾದುದರಿಂದ ಅದಕ್ಕೆ ಅವರು ಅಂಟಿಕೊಂಡಿರುತ್ತಾರೆ. ದೈಹಿಕ ಶ್ರಮದಿಂದ ತಪ್ಪಿಸಿಕೊಳ್ಳಲು ಜಾಣ ಜನರು ಅನೇಕಾನೇಕ ಕಾರಣಗಳನ್ನು ನೀಡುತ್ತಾರೆ. "ದೈಹಿಕ ದುಡಿಮೆಯನ್ನು ವಿನಾಕಾರಣ ಏಕೆ ಮಾಡಿ ಸಮಯವನ್ನು ವ್ಯರ್ಥಗೊಳಿಸಬೇಕು?" ಎಂದು ಕೆಲವರು ಕೇಳುತ್ತಾರೆ. ಆದರೆ ಅವರು ಎಂದೂ "ವಿನಾಕಾರಣ ಏಕೆ ನಿದ್ರಿಸಬೇಕು? ಆಹಾರ ಪಾನೀಯಗಳ ಸೇವನೆಗಾಗಿ ಸಮಯವನ್ನು ಏಕೆ ವ್ಯರ್ಥಗೊಳಿಸಬೇಕು?" ಎಂದು ಕೇಳುವುದಿಲ್ಲ. ಹಸಿವಾಗುವುದರಿಂದ ಅವರು ಊಟಮಾಡುತ್ತಾರೆ, ನಿದ್ರೆ ಬರುವಂತೆ ಅನಿಸುವುದರಿಂದ ನಿದ್ರಿಸುತ್ತಾರೆ. ಆದರೆ ದೈಹಿಕವಾಗಿ ಕೆಲಸ ಮಾಡಬೇಕಾದ ಸಂದರ್ಭ ಬಂದಾಗ, ಅವರು ಬಹುಶಃ "ಇಷ್ಟೊಂದು ಕಷ್ಟಪಟ್ಟು ಏಕೆ ಕೆಲಸಮಾಡಬೇಕು? ಇಂತಹ ಶ್ರಮದ ಕೆಲಸವನ್ನು



ನಾವೇಕೆ ಮಾಡಬೇಕು? ನಾವೇಕೆ ಶ್ರಮಪಡಬೇಕು? ನಾವು ಬೌದ್ಧಿಕ ಕೆಲಸಕಾರ್ಯಗಳಲ್ಲಿ ತೊಡಗಿರುತ್ತೇವೆ" ಎಂದು ವಾದ ಮಾಡಲು ತೊಡಗುತ್ತಾರೆ. ನನ್ನ ಪ್ರಿಯ ಬಂಧುವೇ, ನೀವು ಬೌದ್ಧಿಕ ಅಥವಾ ಮಾನಸಿಕ ಕೆಲಸದಲ್ಲಿ ತೊಡಗಿರುವಿರಾದರೆ, ಬೌದ್ಧಿಕವಾಗಿ ಆಹಾರವನ್ನು ಮಾತ್ರ ಸೇವಿಸಿ, ಮಾನಸಿಕವಾಗಿ ಮಾತ್ರ ನಿದ್ದೆಮಾಡಿ ಬೌದ್ಧಿಕವಾಗಿ ಆಹಾರ ಸೇವಿಸುವ ಹಾಗೂ ಮಾನಸಿಕವಾಗಿ ನಿದ್ರಿಸುವ ಯಾವುದಾದರೂ ವಿಧಾನವನ್ನು ರೂಪಿಸಿಕೊಳ್ಳಿ.

೫. "ಹೊಟ್ಟೆಪಾಡಿಗಾಗಿ ಕೆಲಸಮಾಡುವುದು" ಎಂಬ ಮಾತು ಇತ್ತೀಚೆಗೆ ಜನಜನಿತವಾಗುತ್ತಿದೆ. ಆದರೆ ಅದೇನೂ ಹೊಚ್ಚಹೊಸ ಮಾತಲ್ಲ. ಈ ಹಿಂದೆಯೇ ಟಾಲ್‌ಸ್ಟಾಯ್ ಈ ಮಾತನ್ನು ಬಳಸಿದ್ದಾನೆ. ........... ಈ ವಿಷಯದ ಬಗ್ಗೆ ನಾನು ಆಲೋಚನೆಯನ್ನಷ್ಟೇ ಮಾಡಿಲ್ಲ, ಕಳೆದ ಸುಮಾರು ಇಪ್ಪತ್ತು ವರ್ಷಗಳಿಂದ ಈ ವಿಚಾರವನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಜೀವನ ಮತ್ತು ಶಿಕ್ಷಣ–ಇವೆರಡರಲ್ಲಿಯೂ ನಾನು "ಕಾಯಕಗೌರವ"ಕ್ಕೆ ಪ್ರಥಮ ಸ್ಥಾನವನ್ನು ನೀಡುತ್ತೇನೆ.

೬. ಅಸಮಾನತೆ, ಮೇಲು–ಕೀಳೆನ್ನುವ ಭಾವನೆ, ದಾಸ್ಯ ಮತ್ತು ಹಿಂಸೆ–ಇವೆಲ್ಲಕ್ಕೂ ಬೌದ್ಧಿಕ ಕಾಯಕದಿಂದ ತಪ್ಪಿಸಿಕೊಳ್ಳುವ ಆರ್ಥಿಕ ಪಾಪವೇ ಮುಖ್ಯವಾದ ಕಾರಣ. ಮಕ್ಕಳು ಮತ್ತು ವೃದ್ಧರು ಕೆಲಸ ಮಾಡಬೇಕಿಲ್ಲ. ವಿದ್ಯಾರ್ಥಿಗಳು ಮತ್ತು ಶಿಕ್ಷಕರೂ ದೈಹಿಕ ಕ್ರಮದ ಕೆಲಸ ಮಾಡಬೇಕಾಗಿಲ್ಲ. ರೋಗಿಷ್ಠರೂ ಸಾಧು ಸಂತರೂ ದೈಹಿಕ ದುಡಿಮೆ ಮಾಡಬಾರದು. ಉದ್ಯೋಗಿಗಳು ಹಾಗೂ ನಿರುದ್ಯೋಗಿಗಳೂ ದುಡಿಯಕೂಡದು. ವಿರಕ್ತರು ಮತ್ತು ದೇಶಪ್ರೇಮಿಗಳಿಗೆ ದೈಹಿಕ ದುಡಿಮೆ ಸಲ್ಲದು. ಚಿಂತಕರು, ಧರ್ಮಪ್ರಚಾರಕರು ಮತ್ತು ಕಾರ್ಯ–ನಿರ್ವಾಹಕರಿಗೂ ಇಂತಹ ಕೆಲಸ ತಕ್ಕದಲ್ಲ. ಹೀಗಿರುವಾಗ ಎಲ್ಲ ದೈಹಿಕ ದುಡಿಮೆಯನ್ನು ಮಾಡುವವರಾದರೂ ಯಾರು? ಅಮಾಯಕರು ಮತ್ತು ಅಸಹಾಯಕರೇ? ಇಂತಹ ಅಪಾಯಕರ ಸ್ಥಿತಿಗಳನ್ನು ನಿವಾರಿಸದ ಹೊರತು, ಇನ್ನಾವುದೇ ಸಿದ್ಧಾಂತಗಳು, ವಿಚಾರಧಾರೆಗಳು, ರಾಜಕೀಯ ಪದ್ಧತಿ, ಅಥವಾ ವ್ಯವಸ್ಥೆಗಳು ಉಪಯುಕ್ತವಾಗಲು ಸಾಧ್ಯವಿಲ್ಲ.

* * * *

# ೭. ನೀತಿಶಾಸ್ತ್ರ

೧. ಅಸತ್ಯಕ್ಕೆ ಯಾವುದೇ ಸಹಜ ಸಾಮರ್ಥ್ಯವಿಲ್ಲ. ತನ್ನ ಅಸ್ತಿತ್ವಕ್ಕೂ ಅದು ಸತ್ಯದ ಮೇಲೆ ವಿಶ್ವಾಸವಿಡಬೇಕು.

೨. ವಾಸ್ತವವಾಗಿ ಹೇಳುವುದಾದರೆ, ಸತ್ಯದಷ್ಟು ಸುಲಭವಾದ್ದು ಇನ್ನೇನೂ ಇಲ್ಲ. ಮಗುವಿಗೆ ಕೂಡ ಸತ್ಯ ಅರ್ಥವಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಅಪ್ರಾಮಾಣಿಕವಾಗಿ ವರ್ತಿಸುವುದು ತುಂಬ ಕಷ್ಟ. ಒಂದು ಅಸತ್ಯವನ್ನು ಬಚ್ಚಿಡಲು ಇನ್ನೊಂದು ಅಸತ್ಯವನ್ನು ಮೊದಲೇ ಸಿದ್ಧಮಾಡಿಕೊಳ್ಳಬೇಕು........ಎಲ್ಲರೂ ಇಂತಹ ಜಾಣತನವನ್ನು ಹೊಂದಿರುವುದಿಲ್ಲ. ಆದುದರಿಂದಲೇ ವಿಶೇಷ ವರ್ಗಕ್ಕೆ ಸೇರಿದ ಕೆಲವು ವ್ಯಕ್ತಿಗಳು ಕಾಣಸಿಗುತ್ತಾರೆ. ಅವರೇ 'ರಾಜ್ಯನೀತಿವಿಶಾರದರು'.

೩. ಆತ್ಮಜ್ಞಾನವನ್ನು ಸಂಪಾದಿಸಲು ಅಗತ್ಯವೆಂದು ಹೇಳಲಾದ ಮಾರ್ಗೋಪಾಯಗಳಲ್ಲಿ ಸತ್ಯಕ್ಕೇ ಮೊದಲನೆಯ ಸ್ಥಾನ, ಅದಕ್ಕೇ ಅತಿ ಮಹತ್ತ್ವ. ಜಗತ್ತಿನ ವಿವಿಧ ರಾಷ್ಟ್ರಗಳ ಎಲ್ಲ ನೈತಿಕ ಸೂತ್ರಗಳನ್ನು ತಕ್ಕಡಿಯ ಒಂದು ತಟ್ಟೆಯಲ್ಲಿಯೂ ಸತ್ಯವನ್ನು ಇನ್ನೊಂದು ತಟ್ಟೆಯಲ್ಲಿಯೂ ಇಟ್ಟು ತೂಗಿದರೆ, ಸತ್ಯಕ್ಕೆ ಹೆಚ್ಚು ತೂಕವೆಂದು ತಿಳಿದುಬರುತ್ತದೆ. ಸತ್ಯವೇ ಅತ್ಯುನ್ನತವಾದ ನೈತಿಕ ಸೂತ್ರ. ನೈತಿಕತೆಯ ಇತರ ಎಲ್ಲ ಮುಖಗಳೂ ಸಾಪೇಕ್ಷವಾಗಿ ಆನುಷಂಗಿಕ. ಆದುದರಿಂದಲೇ ಸತ್ಯಕ್ಕೆ ಘನತೆಯ ಸ್ಥಾನವನ್ನು ನೀಡಲಾಗಿದೆ. ಆತ್ಮಜ್ಞಾನ ಸಂಪಾದನೆಗೆ ವಿಶೇಷವಾಗಿ ಸತ್ಯದ ಆಚರಣೆಗೆ ಮಹತ್ತ್ವದ ಸ್ಥಾನ ನೀಡಲಾಗಿದೆ. ಇದು ಕೇವಲ ಶಾಬ್ದಿಕ ಸತ್ಯಕ್ಕೆ ಅನ್ವಯಿಸುವುದಿಲ್ಲ. ಆಲೋಚನೆ, ಮಾತು ಮತ್ತು ಕ್ರಿಯೆ–ಈ ಮೂರರಲ್ಲಿಯೂ ಸತ್ಯವನ್ನು ಆಚರಿಸಬೇಕು. ವ್ಯಕ್ತಿಯ ಜೀವನವು ಸತ್ಯದ ಅಡಿಪಾಯದ ಮೇಲೆ ಸಾಗಿದರೆ, ಆಗ ಅವನಿಗೆ ಆತ್ಮ ಸಾಕ್ಷಾತ್ಕಾರವಾಗುವುದರಲ್ಲಿ ಸಂದೇಹವಿಲ್ಲ.

೪. ತನ್ನ ನೈತಿಕ ಸಿದ್ಧಾಂತಗಳನ್ನು ದೈವಿಕ ಆಧಾರದ ಮೇಲೆ ರೂಪಿಸಿಕೊಂಡ ವ್ಯಕ್ತಿಯ ಇಡೀ ಜೀವನಕ್ಕೆ ಬಲವಾದ ಅಡಿಪಾಯವಿರುತ್ತದೆ.

೫. ಪರ್ವತದ ಮೇಲುಮೇಲಕ್ಕೆ ಹೋದಂತೆ, ಹೊಸ ಹೊಸ ಭವ್ಯ ನೋಟಗಳ ದರ್ಶನವಾಗುತ್ತದೆ. ವಿಚಾರಧಾರೆಯನ್ನು ಜೀವನದಲ್ಲಿ ಎಷ್ಟುಮಟ್ಟಿಗೆ ಅಳವಡಿಸಿಕೊಂಡು ಉನ್ನತ ಸಾಧನೆಗಳನ್ನು ಮಾಡಲಾಗಿದೆ ಎಂಬುದನ್ನು ಅದರ ಮಹತ್ತ್ವವು ಅವಲಂಬಿಸಿದೆ.



೬. ಆಸೆಯುಂಟಾದಾಗ, ದೃಢಚಿತ್ತದಿಂದ ಅವುಗಳನ್ನು ತೊರೆಯಬೇಕು. ಯಾವ ಆಸೆಯೂ ಮನಸ್ಸಿನಲ್ಲಿ ನೆಲೆಯೂರುವುದಿಲ್ಲ.

೭. ವಿಶ್ವದ ಐಕ್ಯಕ್ಕೆ ಏನು ಮಾಡಬೇಕೆಂದು ನಿರ್ಧರಿಸುವುದು ಸುಲಭ. ಆದರೆ ಮನಸ್ಸಿನಲ್ಲಿ ಉಂಟಾಗುವ ಕೋಪವನ್ನು ನಿಗ್ರಹಿಸುವುದು ಕಷ್ಟ.

೮. ದುಶ್ಚಟಗಳನ್ನು ಬಿಟ್ಟುಬಿಡುವುದು ಸುಲಭವಲ್ಲ. ದುಶ್ಚಟಗಳಿಂದಾಗಿಯೇ ಆತ್ಮಸಂಯಮವು ಕಷ್ಟವೆನಿಸುತ್ತದೆ. ದುಶ್ಚಟಗಳಿಲ್ಲದಿದ್ದಾಗ ಆತ್ಮಸಂಯಮ ತುಂಬ ಸುಲಭ. ಒಂದು ಆಮೆಗೆ ತಿಳಿದಿರುವಷ್ಟನ್ನೂ ಮಾನವ ತಿಳಿಯದಿರುವುದು ಹೇಗೆ? ಅಪಾಯದ ಸಂದರ್ಭ ಬಂದಾಗ ಚಿಪ್ಪಿನೊಳಗೆ ತೂರಿಕೊಳ್ಳಬೇಕೆಂದು ಆಮೆಗೆ ತಿಳಿದಿರುತ್ತದೆ; ಅಪಾಯವಿಲ್ಲದಾಗ ಅದರ ಅಂಗಾಂಗಗಳು ಮುಕ್ತವಾಗಿರುತ್ತವೆ. ಹಸಿವು ಬಾಯಾರಿಕೆಗಳನ್ನು ತಣಿಸಿಕೊಳ್ಳಲು ಎಷ್ಟು ಬೇಕೋ ಅಷ್ಟು ಮಾತ್ರ ಆಹಾರ ಪಾನೀಯಗಳನ್ನು ಸೇವಿಸುವುದೇನೂ ವಾಸ್ತವವಾಗಿ ಕಷ್ಟವಲ್ಲ. ಆದುದರಿಂದ ಎಂದೂ ಹೆಚ್ಚು ತಿನ್ನಬೇಡಿ, ಎಂದೂ ಅಗತ್ಯಕ್ಕಿಂತ ಹೆಚ್ಚು ಕಾಲ ನಿದ್ರಿಸಬೇಡಿ. ಹಾಗೆಂದ ಮಾತ್ರಕ್ಕೆ ಅಗತ್ಯವಾಗಿರುವಷ್ಟು ಆಹಾರವನ್ನು ಸೇವಿಸದಿರುವುದು, ಅಗತ್ಯವಾಗಿರುವಷ್ಟು ನಿದ್ರೆಯನ್ನು ಮಾಡದೆ ಇರುವುದು ಕೂಡ ಸರಿಯಲ್ಲ. ಇಂತಹ ವರ್ತನೆಗಳೆಲ್ಲ ಸರಳವೇ. ಇವಕ್ಕೆ ತರಬೇತಿ ಪಡೆಯಬೇಕಾದ ಅಗತ್ಯವಿಲ್ಲ, ಶಿಸ್ತಿನಿಂದ ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಅಷ್ಟೇ. ಆದರೆ ಈಗ ಸರಿಯಾದ ರೀತಿಯ ಶಿಕ್ಷಣವನ್ನು ನೀಡಲಾಗುತ್ತಿಲ್ಲ, ಆದುದರಿಂದ ಇಂತಹ ಜೀವನವನ್ನು ನಡೆಸುವುದು ತುಂಬ ಕಷ್ಟವಾಗುತ್ತಿದೆ. ಈ ಕಾರಣದಿಂದಾಗಿಯೂ ಆತ್ಮಸಂಯಮ ಮತ್ತು ಮನೋನಿಗ್ರಹಗಳು ಸುಲಭವೆನಿಸುವುದಿಲ್ಲ. ಆದರೆ 'ಸರ್ವೋದಯ' ವಿಚಾರಧಾರೆಯಲ್ಲಿ, ತನ್ನ ಮನಸ್ಸನ್ನು ನಿಗ್ರಹಿಸಿಕೊಳ್ಳಲು ಮತ್ತು ಇಂದ್ರಿಯಗಳ ಮೇಲೆ ನಿಗ್ರಹವನ್ನು ಇರಿಸಿಕೊಳ್ಳಲು ವ್ಯಕ್ತಿ ಕಲಿಯಬೇಕು ಎಂಬುದೇ ಪ್ರಮುಖವಾದ ಸಿದ್ಧಾಂತವಾಗಿದೆ.

೯. ಪ್ರಾರ್ಥನೆ ಒಂದು ಕರ್ತವ್ಯ; ನೂಲುವುದು ಕರ್ತವ್ಯ. ಹಾಗೆಯೇ ಆಹಾರ ಸೇವನೆಯೂ ಒಂದು ಕರ್ತವ್ಯವೇ. ಈ ಮೂರನ್ನೂ ಪವಿತ್ರ ಕಾರ್ಯಗಳೆಂದೇ ನಾನು ಪರಿಹರಿಸಿದ್ದೇನೆ. ಆದರೆ ಮೊದಲ ಎರಡು ಕೆಲಸಗಳನ್ನು ಮಾಡುವಾಗ ಸಿಗುವ ಮನಃಶಾಂತಿ, ಮೂರನೆಯ ಕೆಲಸದಲ್ಲಿ ನಿರತನಾಗಿರುವಾಗ ನನಗೆ ಲಭಿಸುವುದಿಲ್ಲ.

೧೦. ಗುಡ್ಡಬೆಟ್ಟಗಳಷ್ಟು ಎತ್ತರ ಬೆಳೆಯುವುದೇನೂ ನನಗೆ ಸಂತೋಷವನ್ನೂ ಉಂಟುಮಾಡುವುದಿಲ್ಲ. ಮರಣಾನಂತರ ನನ್ನ ದೇಹದ ಬೂದಿಯು ಸುತ್ತಮುತ್ತಲಿನ ನೆಲದ ಮೇಲೆ ಹರಡುವಂತಾದರೆ ಸಾಕು. ಅದೇ ನನಗೆ ಇಷ್ಟ.

೧೧. ಮಾನವತ್ವದ ಔನ್ನತ್ಯವನ್ನು ಅಳೆಯುವುದು ಸಾಧ್ಯವಿಲ್ಲ.

೧೨. ಪ್ರಯತ್ನದಲ್ಲಿ, ಸಾಧನೆಯಲ್ಲಿರುವುದಕ್ಕಿಂತ ಹೆಚ್ಚು ಸಂತೋಷವಿರುತ್ತದೆ.

೧೩. ಒಂದು ಅಭಿಪ್ರಾಯ–ಈ ಜಗತ್ತು ಧರ್ಮನಿಷ್ಠರಿಗಲ್ಲ. ಆದುದರಿಂದ ಅವರು ಲೌಕಿಕ ವ್ಯವಹಾರಗಳಲ್ಲಿ ತೊಡಗಕೂಡದು.

ಇನ್ನೊಂದು ಅಭಿಪ್ರಾಯ–ಈ ಜಗತ್ತು ಇರುವುದೇ ಧರ್ಮನಿಷ್ಠರಿಗಾಗಿ ಆದುದರಿಂದ ಅವರಿಗೆ ಸಹನೆಯಿರಬೇಕು.

ಒಟ್ಟು ತಾತ್ಪರ್ಯ–ಜಗತ್ತು ಧರ್ಮನಿಷ್ಠರಿಗಾಗಿಯೇ ಇರಲಿ ಅಥವಾ ಇಲ್ಲದಿರಲಿ, ಅವರು ಎಂದಿಗೂ ಧರ್ಮನಿಷ್ಠೆಯನ್ನು ಬಿಡಕೂಡದು.

೧೪. ದೈವತ್ವವಿರುವಲ್ಲಿ ಸೌಂದರ್ಯವಿರುತ್ತದೆ. ಸೌಂದರ್ಯವಿರುವಲ್ಲಿ ಕಾವ್ಯವಿರುತ್ತದೆ.

೧೫. ಮಹಿಳೆಗೆ ಎಂತಹ ಅಥವಾ ಯಾವುದೇ ಸನ್ನಿವೇಶ ಎದುರಾದಾಗ ಕೂಡ ಆತ್ಮರಕ್ಷಣೆಯನ್ನು ಮಾಡಿಕೊಳ್ಳುವ ಸಾಮರ್ಥ್ಯವಿರುತ್ತದೆ. ನಮ್ಮ ದೈಹಿಕ ಸಾಮರ್ಥ್ಯವನ್ನು ಅವಲಂಬಿಸಿಕೊಳ್ಳುವುದಕ್ಕೆ ಬದಲಾಗಿ ಆಧ್ಯಾತ್ಮಿಕ ಬಲದಿಂದ ಬದುಕುವ ಕಲೆಯನ್ನು ನಾವೆಲ್ಲರೂ ಕಲಿಯಬೇಕು.....ಇದನ್ನು ತಿಳಿದುಕೊಳ್ಳುವುದೇನೂ ಕಷ್ಟವಲ್ಲ. ಆದರೆ ತಿಳಿದುಕೊಂಡಂತೆ ಬದುಕುವುದು ಕಷ್ಟಕರವಾಗಿ ಕಾಣುತ್ತದೆ. ಏಕೆಂದರೆ ನಮ್ಮ ಇಡೀ ಜೀವನಶೈಲಿಯು ಸಂಪೂರ್ಣವಾಗಿ ದೇಹ–ಕೇಂದ್ರಿತವಾಗಿದೆ. ಸೌಂದರ್ಯ ಅಥವಾ ದೈಹಿಕ ಸಾಮರ್ಥ್ಯದ ಪರಿಕಲ್ಪನೆಗೆ ಸಂಬಂಧಪಟ್ಟಂತೆ, ನಮ್ಮ ದೃಷ್ಟಿಯು ದೈಹಿಕ ಅಂಶಗಳಿಂದ ಪ್ರಭಾವಿತವಾಗಿದೆ. ದೇಹದ ಬಗೆಗಿನ ಈ ಪೂರ್ವಭಾವನೆ ಮುಂದುವರಿಯುವವರೆಗೂ, ಮಹಿಳೆಯರ ಮನಸ್ಸಿನಲ್ಲಿ ದೃಢವಾಗಿ ನೆಲೆನಿಂತ ಭಯವು ದೂರವಾಗುವದು ಸಾಧ್ಯವಿಲ್ಲ. 'ಸ್ತ್ರೀಯರು ಅಬಲೆಯರು' ಎಂಬ ಸಾಮಾನ್ಯ ಭಾವನೆಯನ್ನು ಕ್ರೂರಿಗಳು ದುರುಪಯೋಗಪಡಿಸಿಕೊಳ್ಳುತ್ತ ಬಂದಿದ್ದಾರೆ. ಇದೇ ಭಯಕ್ಕೆ ಮೂಲ ಕಾರಣ.

೧೬. ವ್ಯಕ್ತಿ ಸಹಜವಾಗಿ ತಾಯಿಯನ್ನು ಪಡೆಯುತ್ತಾನೆ–ತಾಯಿಯ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಅವನಿಗಿಲ್ಲ. ಇದೇ ರೀತಿಯಲ್ಲಿ, ದೈವಾನುಗ್ರಹದ ಪ್ರಕಾರ, ವರ ಪಡೆಯಬಹುದು ಎಂಬ ಶ್ರದ್ಧೆಯನ್ನು ಬೆಳೆಸಿಕೊಂಡರೆ, ಆಗ ವಧುವಿನ ಮಾನಸಿಕ ತಲ್ಲಣ ಬಹಳಷ್ಟು ಕಡಮೆಯಾಗುತ್ತದೆ. ದೇವರಿಗೆ ಭೌತಿಕ ಅಸ್ತಿತ್ವವಿರುವುದಿಲ್ಲ. ಅವನನ್ನು ಮನಸ್ಸಿನಿಂದ ಮಾತ್ರವೇ ಗ್ರಹಿಸಬೇಕು. ಮದುವೆಯಂತಹ ವಿಚಾರಗಳು, ಇಡೀ ಜಗತ್ತನ್ನು ಪರಿಪೂರ್ಣ ಪ್ರೀತಿಯಿಂದ ನೋಡುವ ವಿಷಯಗಳಷ್ಟೇ ಆಗಿವೆ.

೧೭. ದೇಹವೇ ಪರಮ ಧ್ಯೇಯವಲ್ಲ, ಅದೊಂದು ಸಾಧನ ಮಾತ್ರ ಎಂಬ ಭಾವನೆಯು ಮನಸ್ಸಿನಲ್ಲಿ ದೃಢವಾಗಿ ಮೂಡಿದ ಪಕ್ಷದಲ್ಲಿ, ಆಗ ಈಗಿರುವಂತೆ, ಚಿಕ್ಕಪುಟ್ಟ ವಿಷಯಗಳನ್ನು ಕುರಿತಂತೆ, ವ್ಯಕ್ತಿಯು ಇಷ್ಟೊಂದು ತಲೆ ಕೆಡಿಸಿಕೊಳ್ಳಬೇಕಾದ ಪ್ರಮೇಯ ಇರುವುದಿಲ್ಲ. ಆಗ ಅವನಿಗೆ ಜೀವನವೆಂಬುದು ಪ್ರತ್ಯೇಕ ಬೆಳಕಿನಂತೆ ಕಾಣಬರುತ್ತದೆ. ಆಗ ಅವನಿಗೆ ದೇಹವನ್ನು ಅಲಂಕರಿಸಿಕೊಳ್ಳುವುದು ಅಗತ್ಯ ಎಂದು ಅನಿಸುವುದಿಲ್ಲ. ವಾಸ್ತವವಾಗಿ ಹೇಳುವುದಾದರೆ, ಈ ದೇಹವನ್ನು ಸಾಮಾನ್ಯವಾದ ಉಡುಪುಗಳಿಂದ ಮುಚ್ಚಿಕೊಂಡರೆ ಸಾಕು. ಆದರೆ, ಅದನ್ನು ಬಣ್ಣಬಣ್ಣದ ಸುಂದರ ಬಟ್ಟೆಗಳಿಂದ, ಬೆಡಗುಬಿನ್ನಾಣಗಳಿಂದ ಮರೆಸಬೇಕು ಎಂದು ಜನರು ಬಯಸುತ್ತಾರೆ. ನಿಜವಾಗಿಯೂ ದೇಹಕ್ಕೆ ಠೀವಿ, ಬೆಡಗು ಬಿನ್ನಾಣ, ಕಸೂತಿಗಳಂತಹ ಅಲಂಕಾರಗಳು ಅಗತ್ಯವೇ ಆಗಿದ್ದರೆ ಹುಲಿಗಳ ಚರ್ಮವನ್ನು ಪಟ್ಟೆಗಳಿಂದ ಅಲಂಕರಿಸಿದಂತೆ, ಮಾನವನ ದೇಹವನ್ನು ದೇವರು ಅಲಂಕರಿಸುತ್ತಿದ್ದನಲ್ಲವೇ? ಅದೇನೂ ದೇವರಿಗೆ ಅಸಾಧ್ಯವಾದುದಲ್ಲವಷ್ಟೆ? ಅವನ ಇಚ್ಛೆ ಹಾಗೆಯೇ ಆಗಿದ್ದ ಪಕ್ಷದಲ್ಲಿ, ನವಿಲಿಗೆ ನೀಡಿದಂತೆ ಮಾನವನಿಗೂ ಅವನು ಸುಂದರ ಗರಿಗಳನ್ನು ಅನುಗ್ರಹಿಸುತ್ತಿದ್ದನಲ್ಲವೇ? ಆದರೆ ದೇವರು ಮಾನವನನ್ನು ಒಂದು ವಿಭಿನ್ನ ಶೈಲಿಯಲ್ಲಿ, ಪ್ರತ್ಯೇಕ ಬಣ್ಣದಲ್ಲಿ ಸೃಷ್ಟಿಸಿದ್ದಾನೆ...... ದೇವರ ಸೃಷ್ಟಿಯಂತೆ, ಮಾನವನೂ ತುಂಬ ಸುಂದರನಾಗಿದ್ದಾನೆ. ಮಾನವ ದೇಹವನ್ನು ಅಲಂಕರಿಸುವುದೇನೂ ದೇವರ ಉದ್ದೇಶವಲ್ಲ.



೧೮. 'ಬ್ರಹ್ಮನ್' ಎಂಬುದೇ ಒಂದು ಉನ್ನತವಾದ ಉಜ್ಜ್ವಲವಾದ ವಿಷಯ. ....... 'ಬ್ರಹ್ಮಚಾರಿ'ಯ ಜೀವನದಲ್ಲಿ ಆತ್ಮಸಂಯಮ ಮತ್ತು ಮನೋನಿಗ್ರಹಗಳಿರುತ್ತವೆ ಆದರೆ, ಉದಾತ್ತ ವಿಚಾರಗಳನ್ನು ಚಿಂತಿಸುವವನಿಗೆ ಆತ್ಮಸಂಯಮವು ಸುಲಭಸಾಧ್ಯವಾಗುತ್ತದೆ.......ಬಡಜನರ ಸಮೂಹದ ಸೇವೆಯನ್ನೇ ತನ್ನ ಜೀವನದ ಆದರ್ಶವನ್ನಾಗಿ ಭಾವಿಸಿ, ಸೇವಾನಿರತನಾಗುವ ಯಾವುದೇ ವ್ಯಕ್ತಿ, ಹಾಗೆ ಸಲ್ಲಿಸುವ ಸೇವೆಯೇ 'ಬ್ರಹ್ಮಚರ್ಯ'ವಾಗಿರುತ್ತದೆ. ತನ್ನ ಗುರಿಸಾಧನೆಗಾಗಿ ಅವನು ಮಾಡುವ ಯಾವುದೇ ಕೆಲಸವನ್ನೂ 'ಬ್ರಹ್ಮಚರ್ಯ'ವೆಂದು ಭಾವಿಸಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, 'ಬ್ರಹ್ಮಚರ್ಯ' ಪ್ರತಿಜ್ಞೆಯನ್ನು ಪಾಲಿಸಬಯಸುವ ವ್ಯಕ್ತಿಯು ಯಾವುದಾದರೂ ಉದಾತ್ತವಾದ, ಜನಹಿತ ಕಾರ್ಯವನ್ನು ಮಾಡುವ ಉದ್ದೇಶವನ್ನು ಹೊಂದಿರಬೇಕು. ಆಗ ಮಾತ್ರ 'ಬ್ರಹ್ಮಚರ್ಯ' ಪಾಲನೆ ಸುಲಭವೆನಿಸುತ್ತದೆ. ಉನ್ನತ ವಿಚಾರಧಾರೆಗಳು ಮತ್ತು ಗುರಿಸಾಧನೆಗೆ ಅವಶ್ಯವಾಗಿರುವ ಆತ್ಮಸಂಯಮ ಇವೇ ನನ್ನ ದೃಷ್ಟಿಯಲ್ಲಿ 'ಬ್ರಹ್ಮಚರ್ಯ.' ಇದೇ ನಾನು ನಿಮ್ಮ ಮುಂದಿಡಲು ಬಯಸುತ್ತಿರುವ 'ಬ್ರಹ್ಮಚರ್ಯ'ದ ಮುಖ್ಯ ಲಕ್ಷಣ.

ಆದರೆ, ನಿಮಗೆ ಹೇಳಬೇಕಾದ ಇನ್ನೊಂದು ವಿಷಯವಿದೆ. ದೈನಂದಿನ ಜೀವನಕ್ಕೆ ಸಂಬಂಧಿಸಿದ ಅತ್ಯಂತ ಚಿಕ್ಕಪುಟ್ಟ ವಿಷಯಗಳಲ್ಲಿ ಕೂಡ ನೀವು ಆತ್ಮಸಂಯಮಿಗಳಾಗಿರಬೇಕು. ತಿನ್ನುವುದು, ಕುಡಿಯುವುದು, ಮಾತನಾಡುವುದು, ಕುಳಿತುಕೊಳ್ಳುವುದು ಮತ್ತು ನಿದ್ರಿಸುವುದೇ ಮೊದಲಾದಂತಹ ಚಿಕ್ಕಪುಟ್ಟ ಕ್ರಿಯೆಗಳ ಮೇಲೆಯೂ ಸರಿಯಾದ ನಿಯಂತ್ರಣವನ್ನು ಇರಿಸಿಕೊಳ್ಳಬೇಕು. ಸ್ವೇಚ್ಛಾಚಾರದಿಂದ ವರ್ತಿಸುವುದಾಗಲಿ, ಅಥವಾ ಆತ್ಮಸಂಯಮವನ್ನು ಸಾಧಿಸುವಲ್ಲಿ ಯಶಸ್ಸನ್ನು ನಿರೀಕ್ಷಿಸುವುದಾಗಲಿ, ನಿಷ್ಪ್ರಯೋಜಕ ಮಣ್ಣಿನ ಗಡಿಗೆಯಲ್ಲಿ ಅತ್ಯಂತ ಚಿಕ್ಕದಾದ ರಂಧ್ರವಿದ್ದರೂ ಜಲಸಂಗ್ರಹಕ್ಕೆ ಅದು ನಿರುಪಯುಕ್ತವೆನಿಸುತ್ತದೆ. ನಮ್ಮ ಮನಸ್ಸಿಗೆ ಸಂಬಂಧಿಸಿದಂತೆ ಕೂಡ ಇದೇ ಮಾತು ಅನ್ವಯಿಸುತ್ತದೆ.

# ೮. ಧರ್ಮ

೧. ಧರ್ಮದ ಬಗೆಗಿನ ಪ್ರೀತಿ, ಇತರ ವ್ಯಕ್ತಿಗಳ ಧರ್ಮಗಳ ಬಗೆಗಿನ ಗೌರವ ಹಾಗೂ ದೈವಭಕ್ತಿಯಿಲ್ಲದಿರುವಿಕೆಯ ಬಗೆಗಿನ ಉಪೇಕ್ಷೆ– ಇವು ಧರ್ಮದಲ್ಲಿ ಸೇರಿರುತ್ತವೆ.

೨. ಯಾವುದೇ ಎರಡು ಧರ್ಮಗಳ ನಡುವೆ ಎಂದೂ ವಿರೋಧವಿರುವುದಿಲ್ಲ. ಎಲ್ಲ ಧರ್ಮಗಳೂ ಅಧರ್ಮ–ಅನ್ಯಾಯಗಳನ್ನು ವಿರೋಧಿಸುತ್ತವೆ.

೩. ಮಾನವನ ಮುಖ್ಯ ಧರ್ಮ ಯಾವುದು? ಮಾನವತ್ವ, ಮಾನವೀಯತೆ.

೪. ಈ ಜಗತ್ತಿನಲ್ಲಿ ದೇವರನ್ನು ಕಾಣಲಾರೆವಾದರೆ, ಇನ್ನೆಲ್ಲಿಯೂ ಅವನನ್ನು ಕಾಣಲು ನಮಗೆ ಸಾಧ್ಯವಿಲ್ಲ.

೫. ನಾನು ಭಾಗವಹಿಸುವ ಎಲ್ಲ ಸಾರ್ವಜನಿಕ ಪ್ರಾರ್ಥನಾ ಸಭೆಗಳಲ್ಲಿಯೂ ಪ್ರಾರ್ಥನೆಯಲ್ಲಿ ಈ ನಿಯತ ಆಚರಣೆಯನ್ನು ಇತ್ತೀಚೆಗೆ ನಾನು ರೂಢಿಗೆ ತಂದಿದ್ದೇನೆ. 'ಸತ್ಯ, ಪ್ರೀತಿ ಮತ್ತು ಅನುಕಂಪ'ಗಳನ್ನು ನಮಗೆ ದಯಪಾಲಿಸು ಎಂದು ನಾನು ಮೊರೆಯಿಡುತ್ತೇನೆ. ರಾಮ, ಕೃಷ್ಣ ಮತ್ತು ಬುದ್ಧರು, ಒಬ್ಬರ ಅನಂತರ ಇನ್ನೊಬ್ಬರಂತೆ ಭಾರತದಲ್ಲಿ ಅವತರಿಸಿದರು. ಈ ಮೂವರು ಅನುಕ್ರಮವಾಗಿ ಸತ್ಯ, ಪ್ರೀತಿ ಹಾಗೂ ಅನುಕಂಪಗಳನ್ನು ಪ್ರತಿನಿಧಿಸುತ್ತಾರೆ. ಸತ್ಯ, ಪ್ರೀತಿ ಮತ್ತು ಅನುಕಂಪಗಳನ್ನು ಆಚರಿಸಬೇಕೆಂಬುದೇ ಅಲ್ಲ ಧರ್ಮಗಳ ಮೂಲಸಿದ್ಧಾಂತ. ಭಾರತೀಯ ಧರ್ಮಗಳಿಗೆ ಮಾತ್ರ ಈ ಮಾತು ಅನ್ವಯಿಸುತ್ತದೆ ಎಂದೇನೂ ತಿಳಿಯಬೇಕಾಗಿಲ್ಲ. ಸತ್ಯದಲ್ಲಿ ನಂಬಿಕೆಯಿಡಬೇಕೆಂದು ಉಪನಿಷತ್ತುಗಳೂ ಹೇಳುತ್ತವೆ. ಜೈನರಲ್ಲಿ ಸತ್ಯನಿಷ್ಠೆಯೇ ಮುಖ್ಯ ಶಿಷ್ಟಾಚಾರವಾಗಿದೆ. ಇಸ್ಲಾಮ್ ಮತ್ತು ಹಿಂದೂಧರ್ಮದ ಭಕ್ತಿಪಂಥಗಳಲ್ಲಿ ಅನುಕಂಪಕ್ಕೆ ಪ್ರಾಮುಖ್ಯ ನೀಡಲಾಗಿದೆ. ಇಸ್ಲಾಮ್ ಧರ್ಮವು ದೇವರನ್ನು 'ರಹಮಾನ್–ಉರ್–ರಹೀಮ್' ಎಂದು ವರ್ಣಿಸುತ್ತದೆ. ""ಸಕಲರಿಗೂ ಅನುಕಂಪ ತೋರಿಸುವನು" ಎಂಬುದು ಇದರ ಅರ್ಥ. "ದೇವರೇ ಪ್ರೇಮಸ್ವರೂಪಿ" ಎಂದು ಸಾರುವ ಕ್ರೈಸ್ತರು ಮತ್ತು ಇತರ ಕೆಲವು ಭಕ್ತಿಪಂಥಗಳು ಕೂಡ, ದೇವರ ಗುಣಸ್ವಭಾವಗಳಲ್ಲಿ ಪ್ರೀತಿಗೇ ಪ್ರಥಮ ಸ್ಥಾನವೆಂದು ನಂಬಿವೆ. ಹೀಗೆ ಜಗತ್ತಿನ ವಿವಿಧ ಧರ್ಮಗಳ ಬೋಧನೆಗಳ ಸಾರದಲ್ಲಿ ಸತ್ಯ, ಪ್ರೀತಿ ಮತ್ತು ಅನುಕಂಪಗಳು ಸೇರಿರುತ್ತವೆ. ..... ದೇವರ ಗುಣಲಕ್ಷಣಗಳಲ್ಲಿ ಇನ್ನೂ ಹಲವು ಮೌಲ್ಯಗಳು ಸೇರಿವೆ. ಆದರೂ ನಾನು ಈ



ಮೂರು ಮುಖ್ಯ ಮೌಲ್ಯಗಳಿಗೆ ಪ್ರಥಮ ಆದ್ಯತೆಯನ್ನು ನೀಡುತ್ತೇನೆ.

೬. ಹಿಂದೂ ಧರ್ಮ, ಇಸ್ಲಾಮ್ ಮತ್ತು ಇತರ ಧರ್ಮಗಳು ಒಂದೇ ಒಂದು ಧರ್ಮದ ಎಂದರೆ ಸತ್ಯದ, ವಿವಿಧ ಸ್ವರೂಪಗಳಾಗಿವೆ. ಪ್ರತಿಯೊಂದು ಧರ್ಮವೂ ತನ್ನದೇ ಆದ ವೈಲಕ್ಷಣ್ಯಗಳನ್ನು ಹೊಂದಿವೆ. ಆದರೂ ಅವುಗಳ ನಡುವೆ ವಿರೋಧ ಭಾವವಿಲ್ಲ. ಅನೇಕ ಧರ್ಮಗಳ ವಿವಿಧ ಆಧ್ಯಾತ್ಮಿಕ ಶಿಕ್ಷಣಗಳನ್ನು ಸ್ವತಃ ನಡೆದ ಅನಂತರ, ಶ್ರೀ ರಾಮಕೃಷ್ಣ ಪರಮಹಂಸರಿಗೆ ಎಲ್ಲ ಧರ್ಮಗಳಲ್ಲಿರುವ ಏಕತೆಯ ಅರಿವುಂಟಾಯಿತು. ತಮ್ಮ ಸ್ವಂತ ವಿಧಾನದ ಹೊರತಾಗಿ ಇನ್ನಾವುದೇ ಪೂಜಾವಿಧಾನಗಳನ್ನು ಎಂದೂ ಅನುಸರಿಸದೆ ಇದ್ದರೂ ಮಹಾರಾಷ್ಟ್ರದ ಸಂತ ತುಕಾರಾಮರು ಎಲ್ಲ ಪೂಜಾವಿಧಾನಗಳಲ್ಲಿರುವ ಮೂಲಭೂತ ಏಕತೆಯನ್ನು ಗುರುತಿಸಿದ್ದಾರೆ–ಸ್ವಧರ್ಮದ ಸಿದ್ಧಾಂತಗಳನ್ನು ನಿಷ್ಠೆಯಿಂದ ಆಚರಿಸುವವನು ಸಹಜವಾಗಿಯೇ ಇತರ ಧರ್ಮಗಳನ್ನು ಗೌರವಿಸುತ್ತಾನೆ. ಇತರ ಧರ್ಮಗಳನ್ನು ಗೌರವಿಸದವನು ಸ್ವಧರ್ಮವನ್ನು ಸರಿಯಾಗಿ ಆಚರಿಸುವುದಿಲ್ಲ

೭. ಇಂದು ನಾವು ಖಂಡಿತವಾಗಿಯೂ ಶ್ರದ್ಧೆಯಿಟ್ಟಿದ್ದೇವೆ! ಆದರೆ ಅದು ಎಂತಹ ಶ್ರದ್ಧೆ? ಕಾಟಾಚಾರಕ್ಕೆ ಯಾವುದೋ ದೇವರ ಪೂಜೆ ಮಾಡುವುದು, ದೇವರ ವಿಗ್ರಹದ ಎದುರು ಎಣ್ಣೆ ದೀಪ ಹಚ್ಚಿಡುವುದು, ದೇವಾಲಯಕ್ಕೆ ಪ್ರದಕ್ಷಿಣೆ ಹಾಕುವುದು, ಹೂವು ಹಣ್ಣುಗಳನ್ನು ದೇವರಿಗೆ ಸಮರ್ಪಿಸುವುದು–ಮೊದಲಾದಂತಹ ವಿಧಿಗಳನ್ನು ನಮ್ಮ ಶ್ರದ್ಧೆ ಒಳಗೊಂಡಿದೆ. ಇಂತಹ ಶ್ರದ್ಧೆಯಿರುವುದೂ ಸಮಾಜದ ಕೆಳದರ್ಜೆಯಲ್ಲಿರುವವರು ಮತ್ತು ದೀನದರಿದ್ರರಿಗೆ ಮಾತ್ರ; ದೈವಾನುಗ್ರಹದಿಂದ ನಮ್ಮ ಬದುಕು ಸುಖಕರವಾಗಲೆಂಬ ಹಂಬಲದಿಂದ ಅವರು ಹೀಗೆ ಮಾಡುತ್ತಾರೆ. ಇಂತಹ ತೋರಿಕೆಯ ಶ್ರದ್ಧೆಯೂ ಕಂಡುಬರದೆ ಇರುತ್ತಿದ್ದ ಪಕ್ಷದಲ್ಲಿ, ನಮ್ಮ ದೇಶದ ಸ್ಥಿತಿಗತಿಗಳು ಇನ್ನಷ್ಟು ಶೋಚನೀಯವಾಗಿ ಕಂಡುಬರುತ್ತಿದ್ದವು. ಇಂದು ದಾರಿದ್ರ್ಯ ತಾಂಡವವಾಡುತ್ತಿದ್ದರೂ, ಈ ದೈವಭಕ್ತಿಯಿಂದಾಗಿ ನಮ್ಮ ಜನರ ಮುಖಗಳಲ್ಲಿ ಸ್ವಲ್ಪವಾದರೂ ಲವಲವಿಕೆ ಕಂಡುಬರುತ್ತಿದೆ; ನರಳಾಡುತ್ತಿದ್ದವರೂ ಮುಗುಳ್ನಗುವುದು ಈ ದೈವಭಕ್ತಿಯಿಂದಲೇ ಸಾಧ್ಯವಾಗಿದೆ. ದೇವರಲ್ಲಿರಬೇಕಾದ ಈ ಮೂಲಭೂತ ಧಾರ್ಮಿಕ ನಂಬಿಕೆಗಳು ಇಲ್ಲವಾಗಿದ್ದರೆ, ಆಗ ನಮ್ಮ ಪಾಡು ಏನಾಗುತ್ತಿತ್ತೆಂದು ಊಹಿಸುವುದೂ ಅಸಾಧ್ಯ.

ಹೀಗೆ, ಶ್ರದ್ಧೆಯು ಒಂದು ಅಡಿಪಾಯ ಮಾತ್ರ ಎಂಬುದು ಸುಸ್ಪಷ್ಟವಾಗಿದೆ. ಧರ್ಮಮಂದಿರ ನಾವಿನ್ನೂ ನಿರ್ಮಿಸಬೇಕಾಗಿದೆಯಷ್ಟೆ!.......... ಹಿಂದಿನದು ವಿಜ್ಞಾನಯುಗವಾಗಿರಲಿಲ್ಲ. ಆದುದರಿಂದ ಧರ್ಮಮಂದಿರವನ್ನು ಕಟ್ಟಿದವರು ಅದನ್ನು ಶ್ರದ್ಧೆಯ ತಳಪಾಯದ ಮೇಲೆ ಮಾತ್ರ ನಿರ್ಮಿಸಿದರು. ವಿಚಾರವಾದಿಗಳು ಆಕ್ರಮಣ ನಡೆಸಿದಾಗ ಆ ಮಂದಿರ ಕುಸಿದುಹೋಯಿತು. ಆದರೆ ಈಗ ನಾವು ಮೂಢನಂಬಿಕೆ

ಹಾಗೂ ನಿಷ್ಕಪಟ ವಿಶ್ವಾಸಗಳ ಅಡಿಪಾಯದ ಮೇಲೆ ಮಾತ್ರವೇ ಅಲ್ಲ, ಬದಲಾಗಿ ವೈಚಾರಿಕ ಚಿಂತನೆಯ ಸುಭದ್ರ ತಳಹದಿಯ ಮೇಲೆ ಧರ್ಮಮಂದಿರದ ಪುನರ್ನಿರ್ಮಾಣವನ್ನು ಮಾಡಬೇಕಾಗಿದೆ.

೮. ಧರ್ಮವನ್ನು ರಕ್ಷಿಸುವುದು ಹೇಗೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಮೂರು ಕೆಲಸಗಳನ್ನು ಮಾಡಬೇಕು: (i) ಧರ್ಮದಲ್ಲಿ ನೆಲೆನಿಂತ ಅನಾವಶ್ಯಕ ಅಂಶಗಳನ್ನು ತೊಡೆದುಹಾಕಬೇಕು ಮತ್ತು ಅವು ಅನಗತ್ಯ ಹಾಗೂ ನಿರುಪಯುಕ್ತವೆಂದು ಸ್ಪಷ್ಟವಾಗಿ, ಅಪಾರ್ಥಕ್ಕೆ ಅವಕಾಶವಿಲ್ಲದಂತೆ ಘೋಷಿಸಬೇಕು. (ii) ಎಲ್ಲರಿಗೂ ಸ್ವೀಕೃತವಾಗುವಂತಹ ನೈತಿಕ ಮೌಲ್ಯಗಳನ್ನು ಸ್ಥಾಪಿಸಬೇಕು ಮತ್ತು ದೇವತಾಶಾಸ್ತ್ರಕ್ಕೆ ಸಂಬಂಧಿಸಿದ ಸೂಕ್ಷ್ಮ ಅಂಶಗಳು ಹಾಗೂ ಇತರ ವಿಷಯಗಳ ಬಗ್ಗೆ ಪರಸ್ಪರ ವಿರೋಧಿಸುವುದನ್ನು ಮುಂದುವರಿಸುವ ಮತ್ತು ಈಗ ಕಂಡುಬರುವಂತೆ ಧಾರ್ಮಿಕ ಸಂಘರ್ಷಗಳನ್ನು ಇನ್ನಷ್ಟು ತೀವ್ರಗೊಳಿಸುವ ವಿವಿಧ ಧರ್ಮಗಳನ್ನು ಸಮರ್ಥಿಸುವ ಬದಲಾಗಿ ವ್ಯಕ್ತಿಗಳು ತಮ್ಮ ತಮ್ಮ ಧರ್ಮಗಳ ಅನುಸಾರ, ಜೀವನ ನಡೆಸಲು ಸಾಧ್ಯವಾಗುವಂಥ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸಬೇಕು. ಆ ಸೂಕ್ಷ್ಮ ಅಂಶಗಳನ್ನು ಕುರಿತಂತೆ ಮುಂದೆ ವಿಚಾರ ಮಾಡೋಣ. (iii) ಧಾರ್ಮಿಕ ಚಿಂತನೆಗಳನ್ನು ಸರಿಯಾದ ರೀತಿಯಲ್ಲಿ ಮತ್ತು ಹಂತಹಂತವಾಗಿ ಜನರ ಮುಂದೆ ಮಂಡಿಸಬೇಕು. ಹೀಗೆ ಮಾಡುವುದರಿಂದ ಮಾತ್ರ, ಜನರ ಹೃದಯಗಳಲ್ಲಿ ಧರ್ಮ ಹಾಗೂ ಶ್ರದ್ಧೆಗಳೆರಡೂ ಶಾಶ್ವತವಾಗಿ ಬೇರೂರಲು ಸಾಧ್ಯವಾಗುತ್ತದೆ. ಅಷ್ಟೇ ಅಲ್ಲ, ವಿಜ್ಞಾನವೂ ಪ್ರಗತಿಹೊಂದುತ್ತದೆ.

೯. ಈಗ ಧರ್ಮಭಕ್ತಿಯು 'ಸರ್ವೋದಯ'ವಾಗಿ ಪರಿವರ್ತನೆ ಹೊಂದಿದೆ. "ಎಲ್ಲ ಜೀವಿಗಳನ್ನು ಸಮಾನ ದೃಷ್ಟಿಯಿಂದ ನೋಡುವ ಸಾಮರ್ಥ್ಯ"ವನ್ನು 'ಭಗವದ್ಗೀತೆ'*ಯಲ್ಲಿ ವರ್ಣಿಸಿದಂತೆ 'ಪರಾಭಕ್ತಿ'ಯೆಂದು, ಎಂದರೆ ಅತ್ಯುನ್ನತ ಬಗೆಯ ಭಕ್ತಿಯೆಂದು ಈಗ ಕರೆಯಕೂಡದು. 'ಪರಾಭಕ್ತಿ'ಯನ್ನು ಎಲ್ಲರೂ ಆಚರಿಸಬೇಕಾದ ಭಕ್ತಿಯ ಒಂದು ವಿಧವೆಂದಷ್ಟೇ ಪರಿಗಣಿಸಬೇಕು. ಹೀಗೆ ಅದು "ಅತ್ಯಂತ ಸಾಮಾನ್ಯ ವಿಧದ ಭಕ್ತಿ"ಯಾಗಬೇಕು. ಹಿಂದೆ ಕೆಲವು ಅಸಾಧಾರಣ ವ್ಯಕ್ತಿಗಳು ಮಾತ್ರ ಸೃಷ್ಟಿಸಲ್ಪಟ್ಟ ಎಲ್ಲ ಜೀವಿಗಳೂ ತನ್ನ ಬಂಧುಬಳಗಕ್ಕೆ ಸೇರಿದವು ಮತ್ತು ಅವುಗಳ ನಡುವೆ ಕಂಡುಬರುವ ಎಲ್ಲ ವ್ಯತ್ಯಾಸಗಳೂ ವಾಸ್ತವವಲ್ಲ ಎಂಬ ಅನುಭವವನ್ನು 'ಸಮಾಧಿ'ಯ ಕಾಲದಲ್ಲಿ ಪಡೆಯುತ್ತಿದ್ದರು. ಆದರೆ ಈಗ ಆ ಅನುಭವವನ್ನೇ ಎಲ್ಲರೂ ಹೊಂದಬೇಕಾಗಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸಾಮಾಜಿಕ ಹಾಗೂ ಸಾಮೂಹಿಕ 'ಸಮಾಧಿ'ಯ ಅನುಭವವನ್ನು ಹೊಂದಲು ನಾವು

---

* ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಾಮ್ । –'ಗೀತಾ', ೧೮–೫೪.



ಸಮರ್ಥರಾಗಬೇಕು.... ಈ ವಿಜ್ಞಾನಯುಗದಲ್ಲಿ, 'ಸಾಮ್ಯಯೋಗ'ವು, ಎಂದರೆ ಸಮಾನತೆ ಅಥವಾ ಅನನ್ಯತೆಯ ಅನುಭವವನ್ನು ಹೊಂದುವ ವಿಜ್ಞಾನ ಮತ್ತು ಕಲೆಯು, 'ಸಮಾಧಿ'ಯಲ್ಲಿ ಮಾತ್ರ ಪಡೆಯಬಹುದಾದ ಅನುಭವವಾಗಿ ಉಳಿದಿಲ್ಲ. ಅದನ್ನು ಇಡೀ ಸಮಾಜದಲ್ಲಿ ಆಚರಿಸಬೇಕು ಹಾಗೂ ಅನುಭವಿಸಬೇಕು. .....ಈಗ ನಾವು 'ಸಾಮ್ಯಯೋಗ'ದ ಅಡಿಪಾಯದ ಮೇಲೆ ನಮ್ಮ ಇದೇ ಜೀವನವನ್ನು ರೂಪಿಸಬೇಕಾಗಿದೆ. ಇದು ನಿಜವಾಗಿಯೂ ಆವಶ್ಯಕ ಮತ್ತು ಈ ವೈಜ್ಞಾನಿಕ ಯುಗದ ಒಂದು ಅಗತ್ಯ.

* * * *

# ೯. ಭೂದಾನ ಮತ್ತು ಗ್ರಾಮದಾನ

೧. 'ಭೂದಾನ-ಯಜ್ಞ'ದ ಮೂಲಕ, ಇಡೀ ಏಷ್ಯದ ಮುಖ್ಯ ಸಮಸ್ಯೆಯಾಗಿರುವ ಭೂಸಮಸ್ಯೆಗೆ ಪರಿಹಾರವನ್ನು ನೀಡುವುದು ನನ್ನ ಉದ್ದೇಶವಾಗಿದೆ. ಈ ಸಮಸ್ಯೆಯನ್ನು ಹಿಂಸೆಯ ಮೂಲಕ ಪರಿಹರಿಸಲು ನಾವು ಪ್ರಯತ್ನಿಸಿದರೆ, ಆಗ ನಮ್ಮ ಜನರ ನಡುವಣ ದ್ವೇಷ ಹೆಚ್ಚಾಗುತ್ತದೆ. ಈ ವೈಜ್ಞಾನಿಕ ಯುಗದಲ್ಲಿ, ಅದರ ಪರಿಣಾಮಗಳು ಉಪಯುಕ್ತವಾಗುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಅಹಿಂಸೆ, ಪ್ರೀತಿ ಮತ್ತು ಶಾಂತಿಗಳ ಮೂಲಕ ಈ ದೊಡ್ಡ ಸಮಸ್ಯೆಯನ್ನು ಪರಿಹರಿಸಲು ನಾವು ಪ್ರಯತ್ನಿಸಿದೆವಾದರೆ, ಆಗ ಜನರ ನಡುವಣ ಸಹಕಾರ ಹಾಗೂ ಇಡೀ ಸಮುದಾಯದ ಶಕ್ತಿ ಸಾಮರ್ಥ್ಯಗಳು ಬೆಳೆಯುತ್ತವೆ; ಜನರಿಗೆ ಸಂತೋಷ ಉಂಟಾಗುತ್ತದೆ. "ನೀವೇಕೆ ವಿನಾಕಾರಣ ಅಲೆದಾಡುತ್ತೀರಿ? 'ಭೂದಾನ' ಕೆಲಸಕ್ಕಾಗಿ ನೀವೇಕೆ ಇಷ್ಟೊಂದು ಶ್ರಮಪಡುತ್ತೀರಿ? ಶಾಸನದ ಮೂಲಕ ನೀವೇಕೆ ಈ ಕೆಲಸವನ್ನು ಮಾಡಕೂಡದು? "ಎಂದು ಕೆಲವರು ನನ್ನನ್ನು ಪ್ರಶ್ನಿಸುತ್ತಾರೆ"; ಶಾಸನಗಳ ಮೂಲಕ ಭೂಸಮಸ್ಯೆಯನ್ನು ಪರಿಹರಿಸುವುದು ಸುಲಭ" ಎಂದೂ ಹೇಳುತ್ತಾರೆ. ಆದರೆ ಶಾಸನದ ಮೂಲಕ ಎಲ್ಲವನ್ನೂ ಸಾಧಿಸುವುದು ಹೇಗೆ ಸಾಧ್ಯ? ಸದ್ಯದ ಭೂಮಾಲೀಕರಿಂದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಕಾರ ನೀಡುವ ಕಾನೂನೊಂದು ಜಾರಿಗೆ ಬಂತು ಎಂದು ಊಹಿಸಿ. ಆಗ ಜಮೀನನ್ನು ಬಿಟ್ಟುಕೊಡಲು ಕೃಷಿಕನೊಬ್ಬ ಒಪ್ಪದೆ ಇದ್ದರೆ, ಅವನ್ನು ದಸ್ತಗಿರಿ ಮಾಡಬಹುದು. ಕಾನೂನಿಗೆ ಮಾಡಲು ಸಾಧ್ಯವಾಗುವುದು ಇಷ್ಟು ಮಾತ್ರ. ಯಾವುದೇ ಕಾನೂನಿನ ಹಿಂದಿರುವುದು ಸೈನ್ಯಾಧಿಕಾರಕ್ಕೆ ಸರಿಸಮನಾದ, ರಾಜ್ಯ ಸರ್ಕಾರಗಳ ಬಲಪ್ರಯೋಗಾಧಿಕಾರ ಮಾತ್ರ. ಆದುದರಿಂದಲೇ, ಮೊದಲು ಈ ವಿಷಯಕ್ಕೆ ಸಂಬಂಧಿಸಿದಂತೆ ಜನರ ಮನಸ್ಸನ್ನು ಸಿದ್ಧಗೊಳಿಸಬೇಕು. ಅನಂತರ ಅವರು ಸ್ವಯಂಪ್ರೇರಣೆಯಿಂದ ಭೂದಾನ ಮಾಡಲು ಮುಂದೆಬರುತ್ತಾರೆ. ಜನರಲ್ಲಿ ಸಹಕಾರವಿರದೆ ಇದ್ದರೆ, ಮತ್ತು ಸುಧಾರಣೆಯೆಂಬುದು ಶಾಸನದ ದ್ವಾರಾ ಮಾಡುವ ಆಕ್ರಮಣವಾದರೆ, ಮೂಲ ಉದ್ದೇಶವನ್ನು ಸಾಧಿಸುವುದು ಸಾಧ್ಯವಾಗುವುದಿಲ್ಲ. ಅಲ್ಲದೆ ಸಮಾಜದಲ್ಲಿ ದ್ವೇಷ ಮತ್ತು ಹಿಂಸೆಗಳು ತಾಂಡವವಾಡುವ ಸಾಧ್ಯತೆಯಿರುತ್ತದೆ.

ಅಹಿಂಸಾತ್ಮಕ ಪ್ರಯತ್ನಗಳ ಜೊತೆಗೆ ಮಾತ್ರ ಶಾಸನಗಳಿಗೆ ಸ್ಥಾನವಿರುತ್ತದೆ.



ಅನೇಕರು ನಿರ್ದಿಷ್ಟ ಸುಧಾರಣೆಯೊಂದನ್ನು ಸ್ವಯಂಪ್ರೇರಣೆಯಿಂದ ಒಪ್ಪಿಕೊಂಡರೆ, ಮತ್ತು ಸ್ವಯಂಪ್ರೇರಣೆಯ ಆ ಕಾರ್ಯವು ಸಾರ್ವಜನಿಕರ ಮನಸ್ಸನ್ನು ಬದಲಾವಣೆಗೆ ಸಿದ್ಧಪಡಿಸಿದರೆ, ಆಗ ಮಾಡಲು ಉಳಿದಿರುವ ಯಾವುದೇ ಚಿಕ್ಕ ಕೆಲಸವನ್ನು ಕಾನೂನು ಪ್ರಕ್ರಿಯೆಯ ಮೂಲಕ ಸಾಧಿಸಬಹುದು. ಹೀಗೆ ಅಹಿಂಸೆಯಲ್ಲಿಯೂ ಶಾಸನಗಳಿಗೊಂದು ಸ್ಥಾನವಿದೆ. ಆದರೆ ಶಾಸನಕ್ಕೆ ಇರುವುದು ಅಂತಿಮ ಸ್ಥಾನ. ಅಹಿಂಸೆಯ ಮೂಲಕ, ಭೂಸಮಸ್ಯೆಗೆ ಪರಿಹಾರವನ್ನು ಕಂಡುಹುಡುಕಲು ಈಗ ಮಾಡುತ್ತಿರುವ ಪ್ರಯತ್ನವೇ ಸ್ವತಃ ಈ ವೈಜ್ಞಾನಿಕ ಯುಗದಲ್ಲಿನ ಒಂದು ಮಹಾ ಶಕ್ತಿಯಾಗಿದೆ.

೨. ಆದರೂ ಭೂದಾನ ಮತ್ತು ಗ್ರಾಮದಾನಗಳ ಮೂಲಕ, ಭೂ ಸಮಸ್ಯೆಯು ಕೆಲಮಟ್ಟಿಗೆ ಪರಿಹಾರವಾಗುತ್ತಿರುವುದು ಒಂದು ಚಿಕ್ಕ ಸಾಧನೆಯೆಂದೇ ನಾನು ಭಾವಿಸುತ್ತೇನೆ. ಈ ಚಳವಳಿಯ ಪರಿಣಾಮವಾಗಿ, ಜನರ ಚಿಂತನೆಯ ಮಟ್ಟ ಏರುತ್ತಿರುವುದು ಮಹತ್ತ್ವದ ವಿಷಯ. ಇಡೀ ಗ್ರಾಮದ ಜನರು ಸ್ವತಃ ಒಂದು ಕುಟುಂಬದಂತೆ ವರ್ತಿಸಬೇಕು. ಮಾನವರಿಗೆ ಭಗವಂತನ ಸಹಜ ಕೊಡುಗೆಗಳಾಗಿರುವ ಗಾಳಿ, ನೀರು ಮತ್ತು ಭೂಮಿಗಳನ್ನು ಎಲ್ಲರೂ ಹಂಚಿಕೊಳ್ಳಬೇಕು. ಎಲ್ಲ ಪ್ರಯತ್ನಗಳಲ್ಲಿಯೂ ಗ್ರಾಮಸ್ಥರು ಪರಸ್ಪರ ಸಹಕಾರ ನೀಡಬೇಕು. "ನಾನು ಕೆಲಸಮಾಡುತ್ತಿರುವುದು ನನಗಾಗಿ ಅಷ್ಟೇ ಅಲ್ಲ; ಇಡೀ ಸಮಾಜಕ್ಕಾಗಿ. ನಾನು ಕಾಳಜಿವಹಿಸುವುದು ನನಗಾಗಿ ಮಾತ್ರವಲ್ಲ; ಇಡೀ ಗ್ರಾಮ ಸಮುದಾಯಕ್ಕಾಗಿ" ಎಂಬ ಅರಿವು ಗ್ರಾಮಸ್ಥರಲ್ಲಿ ಮೂಡಬೇಕು. ಇಂತಹ ಪ್ರವೃತ್ತಿಯನ್ನು ನಾವು ಬೆಳೆಸಿಕೊಂಡರೆ, ಆಗ ಸಮಾಜದ ನೈತಿಕಮಟ್ಟ ಏರುತ್ತದೆ. ಆದುದರಿಂದಲೇ ಈ ಚಳವಳಿಯಲ್ಲಿ ನಾನು ಉತ್ಸಾಹ- ಲವಲವಿಕೆಗಳನ್ನು ತೋರಿಸುತ್ತಿದ್ದೇನೆ. ನನಗೆ ತುಂಬ ವಯಸ್ಸಾಗಿದೆ ; ಆದರೂ ಪ್ರಯಾಸವೆನಿಸುತ್ತಿಲ್ಲ. ದೈವಾನುಗ್ರಹವಿರುವುದೇ ಇದಕ್ಕೆ ಕಾರಣವಿರಬಹುದು. ದೈವಾನುಗ್ರಹವನ್ನು ವರ್ಣಿಸುವುದು ನನಗೆ ಸಾಧ್ಯವಾಗುವುದಿಲ್ಲ. ಆದರೆ ಅದರ ಅಮೃತವನ್ನು ನಾನು ಸವಿಯುತ್ತಿದ್ದೇನೆ. ಅದನ್ನು ಎಲ್ಲರೊಂದಿಗೆ ಹಂಚಿಕೊಳ್ಳಲು ಮತ್ತು ಎಲ್ಲರಿಗೂ ಅದರ ರುಚಿಯನ್ನು ತೋರಿಸಲು ಬಯಸುತ್ತೇನೆ.

ನಾವು ನವಮಾನವನನ್ನು ರೂಪಿಸಬೇಕು-ಹಳೆಯ ವ್ಯವಸ್ಥೆ ಈಗಾಗಲೇ ಬದಲಾಗಿ, ಹೊಸ ವ್ಯವಸ್ಥೆ ಜಾರಿಗೆ ಬಂದಿದೆ. ಈಗ ರಾಷ್ಟ್ರೀಯ ಗಡಿರೇಖೆಗಳಿಗೂ ಹೆಚ್ಚು ಪ್ರಾಮುಖ್ಯವಿಲ್ಲ. ಒಮ್ಮೆ ಆಸ್ಟ್ರೇಲಿಯದ ಸ್ನೇಹಿತನೊಬ್ಬ ನನ್ನನ್ನು ನೋಡಲು ಬಂದಿದ್ದ. "ಜಗತ್ತಿಗೆ ಭೂದಾನ ಚಳವಳಿಯು ಯಾವ ರೀತಿಯಲ್ಲಿ ಪ್ರಮುಖವಾಗಿದೆ?" ಎಂದು ಅವನು ನನ್ನನ್ನು ಕೇಳಿದ. "ನೋಡು, ಆಸ್ಟ್ರೇಲಿಯಾದಲ್ಲಿ ವಿಸ್ತಾರವಾದ ಭೂಪ್ರದೇಶವಿದೆ; ಆದರೆ ಜಪಾನಿನಲ್ಲಿ ಆ ಪ್ರಮಾಣದ ಭೂಮಿಯಿಲ್ಲ. ಆದುದರಿಂದ

ಆಸ್ಟ್ರೇಲಿಯಕ್ಕೆ ಬಂದು ನೆಲಸುವಂತೆ ಜಪಾನೀಯರನ್ನು ನೀವು ಆಹ್ವಾನಿಸಬೇಕು" ಎಂದು ನಾನು ಉತ್ತರಿಸಿದೆ. ಇದನ್ನು ಕೇಳಿ ಆ ಬಡಪಾಯಿಗೆ ಒಂದು ಕ್ಷಣ ಏನು ಮಾತನಾಡಲೂ ಸಾಧ್ಯವಾಗಲಿಲ್ಲ. ಅನಂತರ ಅವನು ಹೀಗೆಂದ: "ಹೌದು, ನಮ್ಮ ದೇಶದಲ್ಲಿ ಸಾಕಷ್ಟು ಭೂಪ್ರದೇಶವಿದೆ. ಆದರೆ ನಮ್ಮ ನಾಗರಿಕತೆಯನ್ನು ಅಚ್ಚುಕಟ್ಟಾಗಿ ಉಳಿಸಿಕೊಳ್ಳಬೇಕೆಂಬುದು ನಮ್ಮ ಆಸೆ. ಆದುದರಿಂದ, ನಮ್ಮ ನಾಗರಿಕತೆಯನ್ನೇ ತುಂಬ ಹೋಲುವ ನಾಗರಿಕತೆಯಿರುವ ಯೂರೋಪಿನ ಜನರು ಆಸ್ಟ್ರೇಲಿಯಕ್ಕೆ ಬರಲು ಇಷ್ಟಪಟ್ಟರೆ ಅವರನ್ನು ಸ್ವಾಗತಿಸಲು ನಾವು ಸಿದ್ಧ." ಆಗ ನಾನು ಹೀಗೆ ಹೇಳಿದೆ : "ನಿಜವಾಗಿ ಇದೇ ಭೂದಾನ ಯಜ್ಞಕ್ಕೆ ಅಪಾಯಕರವಾದ ವಿಷಬೀಜ. ಜಪಾನಿನ ನಾಗರಿಕತೆ ಭಿನ್ನವಾದುದು; ಆಸ್ಟ್ರೇಲಿಯ, ಯೂರೋಪ್ ಅಥವಾ ಭಾರತದ ನಾಗರಿಕತೆಗಳೂ ವಿಭಿನ್ನವಾಗಿವೆ. ಇದೇ ರೀತಿಯಲ್ಲಿ ಹಿಂದೂಗಳ ಸಂಸ್ಕೃತಿ ಭಿನ್ನವಾಗಿದೆ. ಮುಸಲ್ಮಾನರೂ ಬೇರೆ ಸಂಸ್ಕೃತಿಯನ್ನು ಹೊಂದಿರುತ್ತಾರೆ. 'ಭೂದಾನ ಯಜ್ಞ'ವಿರುವುದೇ ಇಂತಹ ಎಲ್ಲ ದುರ್ಭಾವನೆಗಳನ್ನು ತೊಡೆದುಹಾಕುವುದಕ್ಕಾಗಿ. ಭೂದಾನಯಜ್ಞದಲ್ಲಿ ನಮ್ಮೆದುರು ಇರುವುದು ಚಿಕ್ಕಪುಟ್ಟ ಆದರ್ಶಗಳಲ್ಲ. ಮಾನವನ ಜೀವನವನ್ನು ಸಂಪೂರ್ಣ ಬದಲಾಯಿಸಿ ಹೊಸ ಜಗತ್ತೊಂದನ್ನು ನಿರ್ಮಿಸುವುದು ನಮ್ಮ ಉದ್ದೇಶ."

೩. ಇಲ್ಲಿ ಭಾರತದಲ್ಲಿ ನಡೆಯುತ್ತಿರುವ ಭೂದಾನ–ಗ್ರಾಮದಾನ ಚಳವಳಿಯ ಮಾರ್ಗ ಮತ್ತು ವಿಧಾನಗಳಿಂದ ತಿಳಿದುಬಂದಿರುವಂತೆ, ಜಗತ್ತಿನ ಜನರಿಗೆ ಈ ರೀತಿಯ ಕೆಲಸದಲ್ಲಿ, ರಾಷ್ಟ್ರಗಳ ನಡುವಿರುವ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹುಡುಕಬಹುದಾದ ಸುಪ್ತಸಾಮರ್ಥ್ಯವಿದೆ ಎಂಬ ಅರಿವು ಉಂಟಾಗತೊಡಗಿದೆ. ಆದುದರಿಂದಲೇ ನನ್ನ 'ಪಾದಯಾತ್ರೆ'ಯ ಕಾಲದಲ್ಲಿ, ಯೂರೋಪ್, ಅಮೆರಿಕ ಮತ್ತು ಏಷ್ಯಗಳ ಅನೇಕ ಜನರು ನನ್ನನ್ನು ಭೇಟಿಯಾಗಲು ಬರುವುದನ್ನು ಮುಂದುವರಿಸಿದರು. ನನ್ನ ಪಾದಯಾತ್ರೆಯಲ್ಲಿ ಅವರೂ ಭಾಗವಹಿಸಿದರು; ತಮ್ಮ ದೇಶಗಳಿಗೆ ಮರಳಿದ ಅನಂತರ ಗ್ರಂಥಗಳನ್ನೂ ಲೇಖನಗಳನ್ನೂ ಬರೆದರು. ಈ ಚಳವಳಿಯಿಂದ, ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವ ನಿಜವಾದ ಹೊಸ ಮಾರ್ಗವೊಂದರ ಅನ್ವೇಷಣೆಯಾಗುತ್ತದೆ ಎಂಬ ನಿರೀಕ್ಷೆಯನ್ನು ಜನರಲ್ಲಿ ಮೂಡಿಸಿದರು.

೪. ಸ್ನೇಹಿತನೊಬ್ಬ ನನ್ನನ್ನು ಹೀಗೆ ಪ್ರಶ್ನಿಸಿದ : "ನಿಮ್ಮ ಈ ಗ್ರಾಮದಾನ ತುಂಬ ಸೊಗಸಾಗಿ ತೋರುತ್ತದೆ. ಆದರೂ ಪ್ರಾಯಃ ನೀವಿದನ್ನು ಜನರ ಮೇಲೆ ಹೊರಿಸಿದ್ದೀರಿ ಎಂದು ಅನಿಸುತ್ತಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಭೂಮಿಯು ಸಮುದಾಯಕ್ಕೆ ಸೇರಿದೆ ಎಂದು ನೀವು ಘೋಷಿಸಿದ ಪಕ್ಷದಲ್ಲಿ, ನಿಮ್ಮ ಈ ಯೋಜನೆಯಲ್ಲಿ, ಜನರಿಗೆ ತಮ್ಮ ಮನಸ್ಸಿಗೆ ಬಂದಂತೆ ಜೀವಿಸುವ ಸ್ವಾತಂತ್ರ್ಯವಿರುತ್ತದೆಯೇ?"



ಇಂತಹ ಪ್ರಶ್ನೆಗಳಿಂದ ನನಗೆ ಸಂತೋಷವಾಗುತ್ತದೆ. ಇಂತಹ ಒಳ್ಳೆಯ ವಿಚಾರದಲ್ಲಿ ಯಾವುದೇ ಕೆಡುಕಿನ ಅಂಶವಿರುವುದೇ ಆದರೆ, ಆ ಅಂಶವನ್ನು ತತ್‌ಕ್ಷಣ ತೆಗೆದುಹಾಕಬೇಕು. ಯಾವುದೇ ಒಳ್ಳೆಯ ಆಲೋಚನೆಯನ್ನು– ಅದು ಎಷ್ಟೇ ಶ್ರೇಷ್ಠವಾಗಿರಲಿ ಅಥವಾ ಉತ್ತಮವಾಗಿರಲಿ–ವಿಮರ್ಶಿಸದೆ ನಾನು ಒಪ್ಪಿಕೊಳ್ಳುವುದಿಲ್ಲ. ಅದನ್ನು ಕೂಲಂಕಶವಾಗಿ ಪರೀಕ್ಷಿಸಲು ಅಪೇಕ್ಷಿಸುತ್ತೇನೆ. ಅನೇಕ ಸಜ್ಜನರು 'ಗ್ರಾಮದಾನ'ದ ಬಗ್ಗೆ ಮೆಚ್ಚುಗೆ ಸೂಚಿಸಿದ್ದಾರೆ. ಮತ್ತು ಬಾಬಾ* ಅವರು ಭೂಮಾಲೀಕತ್ವವನ್ನು ರದ್ದುಮಾಡುವ ಬಗ್ಗೆ ಈಗ ಮಾತನಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಭೂಮಿಯು ಎಲ್ಲರಿಗೂ ಸೇರಿರುತ್ತದೆ. ಗ್ರಾಮದಲ್ಲಿ ಲಭ್ಯವಿರುವ ಎಲ್ಲ ಭೂಮಿಯನ್ನು ಒಟ್ಟುಗೂಡಿಸಿ, ಸಹಕಾರಿ ಕೃಷಿಯ ದೊಡ್ಡ ದೊಡ್ಡ ಯೋಜನೆಗಳನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಬೇಕು. ನಿಜವಾಗಿ ಅಂತಹ ಕೆಲಸವನ್ನು ಮಾಡುವುದು ನನ್ನ ಉದ್ದೇಶವೇ ಎಂದು ಅನೇಕರು ಪ್ರಶ್ನಿಸುತ್ತಾರೆ. ನನ್ನ ಉತ್ತರವಿಷ್ಟೆ: "ನಿಮಗೆ ಇಷ್ಟವಿದ್ದರೆ ಸಹಕಾರಿ ಕೃಷಿಯ ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೊಳ್ಳಿರಿ ಅಥವಾ ಇಷ್ಟವಿಲ್ಲವಾದರೆ ನೀವು ಹಾಗೆ ಮಾಡದೆಯೂ ಇರಬಹುದು. ಗ್ರಾಮದಾನದಲ್ಲಿ ನನಗೆ ನಂಬಿಕೆಯಿರುವುದು "ಮತ್ತೂ ಎಂಬ ತತ್ತ್ವ"ದಲ್ಲಿ (also-sim) ಅಲ್ಲದೆ, "ಕೇವಲ ಎಂಬ ತತ್ತ್ವ"ದಲ್ಲಿ (only-sim) ಅಲ್ಲ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಇದಕ್ಕೂ ಅವಕಾಶವಿರಬೇಕು; ಅದಕ್ಕೂ ಅವಕಾಶವಿರಬೇಕು. ಯಾವುದನ್ನು ಅತ್ಯುತ್ತಮವೆಂದು ಗ್ರಾಮಸ್ಥರು ಭಾವಿಸುತ್ತಾರೆಯೋ ಆ ಪ್ರಕಾರ ನಿರ್ಧರಿಸಲಾಗುವುದು. 'ಗ್ರಾಮದಾನ'ವೆಂದರೆ 'ಗ್ರಾಮಸ್ವರಾಜ್ಯ'ದ ಸ್ವಯಂಪ್ರೇರಿತ ಘೋಷಣೆ, ನಿಜವಾದ 'ಗ್ರಾಮ–ಸ್ವರಾಜ್ಯ'ದ ಪ್ರಾರಂಭ. ಆದುದರಿಂದ, ಈ ಪದ್ಧತಿಯೊಂದೇ ಉಳಿಯುತ್ತದೆ. ಪರಸ್ಪರ ಚರ್ಚೆಗಳು ಹಾಗೂ ಒಪ್ಪಂದದ ತರುವಾಯ, ಗ್ರಾಮಸ್ಥರು ಇದನ್ನು ಒಪ್ಪುತ್ತಾರೆ. ಅವರ ಮೇಲೆ ಹೊರಗಿನಿಂದ ಯಾವುದೇ ಪದ್ಧತಿಯನ್ನಾಗಲಿ ವ್ಯವಸ್ಥೆಯನ್ನಾಗಲಿ ಹೇರುವುದಿಲ್ಲ. ಅವರಲ್ಲಿ ಪ್ರತಿಯೊಬ್ಬನೂ ವೈಯಕ್ತಿಕವಾಗಿ ಜಮೀನಿನಲ್ಲಿ ಪ್ರತ್ಯೇಕವಾಗಿ ಬೇಸಾಯ ಮಾಡಬಯಸಿದರೆ, ಅವನು ಹಾಗೆ ಮಾಡಬಹುದು. ಇಬ್ಬರು ನಾಲ್ವರು ಅಥವಾ ಇನ್ನೂ ಹೆಚ್ಚು ಜನರು ಜೊತೆಗೂಡಿ, ಅಥವಾ ಇಡೀ ಗ್ರಾಮವೇ ಸಾಮೂಹಿಕವಾಗಿ ಬೇಸಾಯ ಮಾಡಲು ಅಪೇಕ್ಷಿಸಿದರೆ, ಹಾಗೆ ಕೂಡ ಮಾಡಬಹುದು. ಆದರೆ ಎಲ್ಲರೂ ಸಂಪೂರ್ಣ ಒಮ್ಮತದಿಂದ ಕೆಲಸ ಮಾಡಬೇಕು. ಭಿನ್ನಾಭಿಪ್ರಾಯ ಕಂಡುಬಂದರೆ, ಎರಡೂ ಬಗೆಯ ಪ್ರಯೋಗಗಳನ್ನು ಮಾಡಬಹುದು. ಆದರೆ ಒಟ್ಟಿನಲ್ಲಿ ಭೂಮಾಲೀಕತ್ವವು ಗ್ರಾಮದ್ದೇ ಆಗಿರುತ್ತದೆ. ಪರಿಣಾಮವಾಗಿ ಪ್ರತಿಯೊಂದು

---

* ವಿನೋಬಾಜಿ.

ಗ್ರಾಮದಲ್ಲಿಯೂ ನಿಜವಾದ 'ಗ್ರಾಮ-ಸ್ವರಾಜ್ಯ'ವಿರುತ್ತದೆ.

೫. ಒಳ್ಳೆಯ ಗುರಿಸಾಧನೆಗಾಗಿ ಕೆಟ್ಟಮಾರ್ಗವನ್ನು ನಾವು ಅನುಸರಿಸಿದರೆ ಆಗ ಭಾರತದಲ್ಲಿ ಸಮಸ್ಯೆಗಳು ಒಂದೇ ಸಮನೆ ಮುಂದುವರಿಯುತ್ತವೆ. ಆದರೆ ನಮ್ಮ ಸಮಸ್ಯೆಗಳನ್ನು ಪರಿಹರಿಸಲು ಅಹಿಂಸಾತ್ಮಕ ಮಾರ್ಗಗಳನ್ನು ಅನುಸರಿಸಿದರೆ, ಜಗತ್ತಿನಲ್ಲಿಯೇ ಯಾವ ಸಮಸ್ಯೆಗಳೂ ಇರುವುದಿಲ್ಲ. ಆದುದರಿಂದಲೇ ನಾನು ಭೂಸಮಸ್ಯೆಯನ್ನು ಶಾಂತಿಯುತ ವಿಧಾನದಲ್ಲಿ ಪರಿಹರಿಸಲು ಬಯಸುತ್ತೇನೆ. ಭೂಮಿಯನ್ನು ದಾನಮಾಡಬೇಕೆಂದು ನಾನು ಜನರನ್ನು ಕೋರುತ್ತೇನೆ. ನಾನು ಭಿಕ್ಷೆ ಬೇಡುತ್ತ ಇಲ್ಲ.......... 'ದರಿದ್ರ ನಾರಾಯಣ'ನ ಪ್ರತಿನಿಧಿಯಾಗಿ ನಾನು ಮುಂದಿಡುತ್ತಿರುವ ಈ ಬೇಡಿಕೆ ಭಿಕ್ಷೆಯಲ್ಲ. ಈ ಮೂಲಕ ನಾನು ಸಾಮಾಜಿಕ ಬದ್ಧತೆಯ ಬಗೆಗಿನ ಸಲಹೆ ಸೂಚನೆಗಳನ್ನು ಜನರಿಗೆ ನೀಡುತ್ತಿದ್ದೇನೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, 'ಭೂದಾನ'ವೆಂಬುದು ಒಂದು 'ದೀಕ್ಷೆ', 'ಭಿಕ್ಷೆ'ಯಲ್ಲ. ಆದುದರಿಂದ ಬುದ್ಧನ ಮೂಲಕ ಮಾಡಿಸಿಕೊಳ್ಳಲು ದೇವರು ಬಯಸಿದ್ದ ಈ ಉತ್ತಮ ಕಾರ್ಯವನ್ನು ನಿರ್ವಹಿಸುವ ಹೊಣೆ, ನನ್ನಂತಹ ದುರ್ಬಲನ ಪಾಲಿಗೆ ಬಂದಿದೆ ಎಂಬ ನಿರ್ಧಾರಕ್ಕೆ ನಾನು ಬಂದಿದ್ದೇನೆ.

೬. ಸ್ವಯಂಪ್ರೇರಣೆಯಿಂದ ತಮ್ಮ ಭೂಮಿಯನ್ನು 'ಗ್ರಾಮದಾನ'ವೆಂದು ಗ್ರಾಮಸ್ಥರು ಘೋಷಿಸಿದರೆ, ಅದನ್ನು 'ಅತ್ಯುತ್ತಮ ಸಂರಕ್ಷಣ ಕ್ರಮ'ವೆಂದು ಭಾವಿಸಬಹುದು. ಜಾಗತಿಕ ಕದನವೊಂದು ಪ್ರಾರಂಭವಾಗುವುದಾದರೆ, ಆಗ ಪಂಚವಾರ್ಷಿಕ ಯೋಜನೆಗಳು ಕುಸಿದುಬೀಳುತ್ತವೆ–ಏಕೆಂದರೆ ಈ ಯೋಜನೆಯು ಮುಖ್ಯವಾಗಿ ದೇಶದ ರಫ್ತು ಮತ್ತು ಆಮದುಗಳನ್ನೇ ಬಹುಮಟ್ಟಿಗೆ ಅವಲಂಬಿಸಿದೆ. ಯುದ್ಧ ಪ್ರಾರಂಭವಾದ ಪಕ್ಷದಲ್ಲಿ, ಎಲ್ಲ ರಫ್ತು ಮತ್ತು ಆಮದುಗಳು ನಿಂತು ಹೋಗುತ್ತವೆ. ಆಹಾರಧಾನ್ಯಗಳ ಬೆಲೆಗಳು ಗಗನಕ್ಕೇರುತ್ತವೆ. ರಾಷ್ಟ್ರೀಯ ಜೀವನದ ಸ್ಥಿತಿಗತಿಗಳ ತೊಂದರೆಗೆ ತುಂಬ ತೊಂದರೆಗೆ ಒಳಗಾಗುತ್ತದೆ. ಇಂತಹ ಸಂಧಿಕಾಲದಲ್ಲಿ ಯಾವುದು ತಾನೇ ಈ ದೇಶವನ್ನು ರಕ್ಷಿಸೀತು? 'ಗ್ರಾಮದಾನ'ಗಳ ಸಹಕಾರಿ ಮತ್ತು ಅಹಿಂಸಾತ್ಮಕ ರಚನೆಯೊಂದೇ ನಿಜವಾಗಿ ದೇಶವನ್ನು ರಕ್ಷಿಸಬಲ್ಲದು ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ.

* * * *



# ೧೦. ಗ್ರಾಮ-ಸ್ವರಾಜ್ಯ ಮತ್ತು ಶಾಂತಿಸೇನೆ

೧. ರಾಜ್ಯದ ಅಧಿಕಾರ ಮತ್ತು ಸ್ವರಾಜ್ಯ ಇವೆರಡೂ ಬೇರೆ ಬೇರೆ. ಅಧಿಕಾರವನ್ನು ಹಿಂಸೆಯ ಮೂಲಕ ಕಸಿದುಕೊಳ್ಳಬಹುದು. ಆದರೆ ಸ್ವರಾಜ್ಯವನ್ನು ಅಹಿಂಸೆಯ ಮೂಲಕವಲ್ಲದೆ ಸಾಧಿಸುವುದು ಸಾಧ್ಯವಿಲ್ಲ. ಆದುದರಿಂದಲೇ ಚಿಂತಕರು ರಾಜಕೀಯ ಅಧಿಕಾರಕ್ಕಾಗಿ ಹಂಬಲಿಸುವುದಿಲ್ಲ. ಬದಲಾಗಿ ಸ್ವರಾಜ್ಯ ಸಾಧನೆಗಾಗಿ ಜನರು ಒಟ್ಟು ಸೇರಿ ಕೆಲಸಮಾಡಬೇಕೆಂದು ಅವರು ಬಯಸುತ್ತಾರೆ. "ನನಗೆ ಇತರರನ್ನು ಆಳುವ ಇಚ್ಛೆಯಿಲ್ಲ" ನ ತ್ವಹಂ ಕಾಮಯೇ ರಾಜ್ಯಂ ಮತ್ತು "ಸ್ವರಾಜ್ಯವನ್ನು ಗಳಿಸಲು ನಾವು ಪ್ರಯತ್ನಿಸೋಣ" (ಯತೇಮಹಿ ಸ್ವರಾಜ್ಯೇ ।) ಇವೆರಡೂ ಅನುಕ್ರಮವಾಗಿ ಅವರ ನಿರೋಧಕ ಹಾಗೂ ಪ್ರಶಂಸಾತ್ಮಕ ರಾಜಕೀಯ ಘೋಷಣೆಗಳಾಗಿವೆ.

೨. ದೂರದೂರವಾದ ಹೃದಯಗಳನ್ನು ಒಟ್ಟಿಗೆ ಬೆಸೆಯುವ ಪ್ರಕ್ರಿಯೆ ಭಾರತದಲ್ಲಿ ಮುಂದುವರಿಯುತ್ತಿದೆ. ಪ್ರತ್ಯೇಕಗೊಂಡ ಜನರ ಹೃದಯಗಳನ್ನು ಒಗ್ಗೂಡಿಸಬೇಕೆಂಬ ಮೂಲಉದ್ದೇಶದಿಂದಲೇ ನಾನು ಭೂದಾನ ಮತ್ತು ಗ್ರಾಮದಾನ ಚಳವಳಿಗಳನ್ನು ಪ್ರಾರಂಭಿಸಿದೆ. ಹೃದಯಗಳ ವಿಮುಖತೆಗೆ ಹಲವಾರು ಕಾರಣಗಳಿವೆ. ಧಾರ್ಮಿಕ ದ್ವೇಷ, ಭಾಷಾಸಂಘರ್ಷ ಮತ್ತು ಕೋಮುವಾದಿ ದಂಗೆಗಳ ಪರಿಣಾಮವಾಗಿ ಜನರ ಒಗ್ಗೂಡುವಿಕೆಗೆ ಅಪಾಯ ಒದಗಿಬಂದಿದೆ. ಆರ್ಥಿಕ ಸಂಕಷ್ಟದ ಕಾಲದಲ್ಲಿ ಕೂಡ. ಒಮ್ಮೆ ಒಂದುಗೂಡಿದ ಹೃದಯಗಳು ಮತ್ತೆ ಬೇರೆ ಬೇರೆಯಾಗುತ್ತವೆ. ಈ ವಿವಿಧ ಕಾರಣಗಳನ್ನು ತೊಡೆದುಹಾಕುವ ಉದ್ದೇಶದಿಂದ ಇಂದಿನ ಗ್ರಾಮಗಳನ್ನು 'ಗ್ರಾಮ-ಸ್ವರಾಜ್ಯ'ದ ಘಟಕಗಳಾಗಿ ರೂಪಾಂತರಿಸಬೇಕೆಂದು ನಾನು ಬಯಸುತ್ತೇನೆ. 'ಗ್ರಾಮ-ಸ್ವರಾಜ್ಯ'ದ ಸಂದೇಶ ನೀಡುವ ಏಕೈಕ ಉದ್ದೇಶದಿಂದ ನಾನು ನಿಮ್ಮ ನಡುವೆ ಈಗ ಇದ್ದೇನೆ. 'ಗ್ರಾಮ-ಸ್ವರಾಜ್ಯ'ವೇ ಜನರನ್ನು ಒಗ್ಗೂಡಿಸುವ ಏಕೈಕ ವಿಧಾನವಾಗಿದೆ.

೩. ಗ್ರಾಮದಲ್ಲಿ 'ಗ್ರಾಮ-ಸ್ವರಾಜ್ಯ'ವನ್ನು ಸ್ಥಾಪಿಸಲು ಹಾಗೂ ಸಾಮೂಹಿಕ ಮಾಲೀಕತ್ವ ಉಂಟಾಗುವಂತೆ ಮಾಡಲು ನಿರ್ಧರಿಸಿರುವುದಾಗಿ ಘೋಷಿಸಿದಾಗ, ಪ್ರತಿಯೊಬ್ಬನೂ ಭೂಮಿಯಲ್ಲಿ ಚಿಕ್ಕ ಪಾಲನ್ನು ಪಡೆಯುತ್ತಾನೆ; ಸಾಕಷ್ಟು ಪ್ರಮಾಣದ ಜಮೀನನ್ನು ಪಡೆಯದವರಿಗೆ ನಾವು ಗ್ರಾಮೋದ್ಯೋಗಗಳನ್ನು ಒದಗಿಸುತ್ತೇವೆ;

ಗ್ರಾಮದಲ್ಲಿಯೇ ಜೀವನಕ್ಕೆ ತುಂಬ ಅಗತ್ಯವಾಗಿರುವ ವಸ್ತುಗಳನ್ನು ಉತ್ಪಾದಿಸುವ ಯೋಜನೆಗಳನ್ನು ಸಿದ್ಧಪಡಿಸುತ್ತೇವೆ.

೪. ಪ್ರತಿಯೊಂದು ಗ್ರಾಮವೂ ಏಳ್ಗೆಹೊಂದಿದರೆ, ದೇಶವೂ ಅಭಿವೃದ್ಧಿ ಹೊಂದಿ ಪ್ರಖ್ಯಾತವಾಗುತ್ತದೆ. ಪ್ರತಿಯೊಂದು ಅವಯವವೂ ಸರಿಯಾಗಿ ಕಾರ್ಯ ನಿರ್ವಹಿಸಿದರೆ, ಇಡೀ ದೇಹವು ಸರಿಯಾಗಿ ಕೆಲಸಮಾಡುತ್ತದೆ. ಅಂಗಗಳಲ್ಲಿ ಯಾವುದೇ ಒಂದು ಕಡಿಮೆ ಕೆಲಸ ಮಾಡಿದರೂ, ದೇಹಕ್ಕೆ ಸಮರ್ಥವಾಗಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಇದೇ ರೀತಿಯಲ್ಲಿ, ಗ್ರಾಮಗಳು ತಮ್ಮ ತಮ್ಮ ವ್ಯವಹಾರಗಳನ್ನು ಸರಿಯಾಗಿ ನಿರ್ವಹಿಸಿದರೆ, ಮತ್ತು ಪ್ರತಿಯೊಂದು ಗ್ರಾಮದಲ್ಲಿಯೂ ನಿಜವಾದ 'ಗ್ರಾಮ–ಸ್ವರಾಜ್ಯ' ಉದಯಿಸಿದರೆ, ಆಗ ದೇಶದಲ್ಲಿಯೇ ನಿಜವಾದ ಸ್ವರಾಜ್ಯ ಉದಯಿಸುತ್ತದೆ. ಆದುದರಿಂದ ಪ್ರತಿಯೊಂದು ಗ್ರಾಮದಲ್ಲಿ ಜನರೇ ಸರಕಾರವನ್ನು ನಡೆಸಬೇಕು. ದೇಶದಲ್ಲಿ ಇದ್ದಂತೆಯೇ ಗ್ರಾಮದಲ್ಲಿಯೂ, ಕಾರ್ಯ ನೀತಿಗಳನ್ನು ರೂಪಿಸಲು ಹಲವು ವಿಭಾಗಗಳಿರುತ್ತವೆ; ಹಲವು ಕಾರ್ಯವಿಭಾಗಗಳಿರುತ್ತವೆ. ರಾಜ್ಯಸರಕಾರದಲ್ಲಿ ಆರೋಗ್ಯ ಇಲಾಖೆಯಿರುವಂತೆ ಗ್ರಾಮಾಡಳಿತದಲ್ಲಿ ಕೂಡ ಆರೋಗ್ಯ ಖಾತೆಯಿರುತ್ತದೆ. ಯಾವುದೇ ಕೇಂದ್ರ ಸರಕಾರದಲ್ಲಿ ಉದ್ಯಮ, ಕೃಷಿ, ಶಿಕ್ಷಣ, ನ್ಯಾಯ ಮತ್ತು ಕಾನೂನು ಸಚಿವಾಲಯಗಳಿರುವಂತೆ ಗ್ರಾಮ–ಸರಕಾರದಲ್ಲಿ ಕೂಡ ಇವೆಲ್ಲ ಇರುತ್ತವೆ.

೫. ಗ್ರಾಮೋದ್ಯಮಗಳಿಗೆ ಹಾನಿಕರವಾದ ಏನನ್ನೂ ಮಾಡಕೂಡದು. ಈ ಸಂದರ್ಭದಲ್ಲಿ, ನಮ್ಮ ಸಿದ್ಧಾಂತ ಹೀಗಿರಬೇಕು; ಗ್ರಾಮದಲ್ಲಿಯೇ ಲಭ್ಯವಿರುವ ಕಚ್ಚಾ ಪದಾರ್ಥಗಳನ್ನು ಬಳಸುವ ಉದ್ಯಮಗಳನ್ನು ಅಭಿವೃದ್ಧಿಪಡಿಸಬೇಕು; ಗ್ರಾಮಸ್ಥರು ಪ್ರತಿದಿನ ಬಳಸುವಂತಹ ಸಿದ್ಧವಸ್ತುಗಳನ್ನೇ ಉತ್ಪಾದಿಸಬೇಕು. ಗ್ರಾಮೋದ್ಯಮಗಳು ಈ ಎರಡೂ ಅಂಶಗಳನ್ನು ಗಮನದಲ್ಲಿರಿಸಿಕೊಂಡಿರಬೇಕು. ನಾವು ಸಂರಕ್ಷಿತ ಅರಣ್ಯಗಳನ್ನು ಉಳಿಸಿಕೊಳ್ಳುವಂತೆ ಕೆಲವು ಕೈಗಾರಿಕೆಗಳನ್ನೂ ಗ್ರಾಮಸ್ಥರಿಗಾಗಿಯೇ ಏಕೆ ಮೀಸಲಿಡಬಾರದು?

೬. ಎಲ್ಲೆಡೆಗಳಲ್ಲಿಯೂ ದೇಶದ ರಕ್ಷಣಾ ಸಾಮರ್ಥ್ಯ ನೆಲೆಸಿರಬೇಕು. ಇಂತಹ ರಕ್ಷಣಾ ಸಾಮರ್ಥ್ಯಕ್ಕೇ ನಾನು 'ಶಾಂತಿ–ಸೇನೆ' ಎನ್ನುತ್ತೇನೆ.

ಶಸ್ತ್ರಸಜ್ಜಿತ ಸೈನ್ಯ ಮತ್ತು 'ಶಾಂತಿಸೇನೆ'ಗಳ ನಡುವೆ ತುಂಬ ವ್ಯತ್ಯಾಸವಿದೆ. ತರಬೇತಿ, ಶಿಸ್ತು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಇವೆರಡು ಸೈನ್ಯಗಳ ನಡುವೆ ಕೆಲಮಟ್ಟಿನ ಸಾಮ್ಯವಿದ್ದರೂ, ಇವೆರಡರ ಮುಖ್ಯ ಲಕ್ಷಣಗಳಲ್ಲಿ ವ್ಯತ್ಯಾಸವಿದೆ. ಶಸ್ತ್ರಸಜ್ಜಿತ ಸೈನ್ಯವು, ತನಗೆ ಪರಿಚಯವಿಲ್ಲದ ಸ್ಥಳಗಳಲ್ಲಿ ಕೂಡ ಹೆಚ್ಚು ಸಮರ್ಥವಾಗಿ ಕೆಲಸಮಾಡುತ್ತವೆ. ಏಕೆಂದರೆ ಗುಂಡಿಕ್ಕಿ ಜನರನ್ನು ಕೊಲ್ಲುವುದೊಂದೇ ಅವುಗಳ ಮುಖ್ಯ ಕೆಲಸ. ಹಳೆಯ ಪರಿಚಯವಿಲ್ಲದ ಸ್ಥಳಗಳಲ್ಲಿ ಕೂಡ ಈ ಕೆಲಸವನ್ನು ಚೆನ್ನಾಗಿಯೇ ನಡೆಸಬಹುದು.



ಇದಕ್ಕೆ ವ್ಯತಿರಿಕ್ತವಾಗಿ, ಅಹಿಂಸಾಪಡೆಯೆನಿಸಿದ 'ಶಾಂತಿಸೇನೆ'ಗೆ ಪರಿಚಿತರಿರುವ ಪರಿಚಿತ ಸ್ಥಳಗಳಲ್ಲಿ, ಚೆನ್ನಾಗಿ ಕೆಲಸ ಮಾಡುವ ಶಕ್ತಿಯಿರುತ್ತದೆ. ಒಂದು ನಿರ್ದಿಷ್ಟ ಸ್ಥಳದಲ್ಲಿ ದೀರ್ಘಕಾಲ ಮನಃಪೂರ್ವಕ ಸೇವೆ ಸಲ್ಲಿಸಿದ ವ್ಯಕ್ತಿಯು ಆ ಪ್ರದೇಶದ 'ಶಾಂತಿಸೈನಿಕ'ನಾಗಲು ತುಂಬ ಅರ್ಹನಾಗಿರುತ್ತಾನೆ. ಭಾರತೀಯರಲ್ಲದ ಯಾರಾದರೂ ನಾಯಕತ್ವವಹಿಸಿ, 'ಶಾಂತಿಸೇನೆ'ಯ ಕಾರ್ಯ ನಿರ್ವಹಿಸಲು ಫ್ರಾನ್ಸ್‌ಗೆ ಹೋದರೆ, ಅಲ್ಲಿ ಅವನು ಯಶಸ್ಸು ಗಳಿಸುವುದಿಲ್ಲ. ಯಾವುದೇ ಪ್ರದೇಶವಿರಲಿ, 'ಶಾಂತಿಸೈನಿಕ'ರಾಗಿ ಕೆಲಸಮಾಡಲು ಸ್ಥಳಿಯರೇ ಅತ್ಯಂತ ಅರ್ಹರು.

'ಶಾಂತಿಸೇನೆ'ಯ ಸಂಘಟನೆಯನ್ನು ಬಿಟ್ಟುಳಿದಂತೆ, ಕೆಲಸ ಮಾಡಲು ಬೇರಾವುದೇ ಬಲವಾದ ಸ್ಫೂರ್ತಿಯಿಲ್ಲ ಎಂದು ಈಚೆಗೆ ನನಗನಿಸತೊಡಗಿದೆ. ಈಗ ಎಲ್ಲರೂ ತಮಗೆ ವಹಿಸಲಾದ ವಿವಿಧ ಕೆಲಸಗಳನ್ನು ಬಿಟ್ಟು ಸ್ವತಃ 'ಶಾಂತಿ ಸೈನಿಕ'ರಾಗಿ ಉತ್ಸಾಹದಿಂದ ಕೆಲಸಮಾಡಬೇಕು. ಈಗ ದೇಶಕ್ಕೆ 'ಶಾಂತಿಸೈನಿಕ'ರ ಹೆಚ್ಚಿನ ಸೇವೆ ಅಗತ್ಯವಾಗಿರುತ್ತದೆ. 'ಶಾಂತಿಸೇನೆ'ಯು ಕೂಡಲೇ ಸೈನ್ಯದ ಸ್ಥಾನಕ್ಕೆ ಬರುವ ಸ್ಥಿತಿಯಲ್ಲಿದೆ ಎಂದೇನೂ ನಾನು ವಾದಿಸುವುದಿಲ್ಲ. ಆದರೆ ಇಂದು ದೇಶದ ಕೆಲವೆಡೆ ಅನೇಕ ಸಣ್ಣಪುಟ್ಟ ತೊಂದರೆಗಳು ಉದ್ಭವಿಸುತ್ತಿವೆ; ದಂಗೆಗಳೂ ಏಳುತ್ತಿವೆ. ಇಂತಹ ಸಂದರ್ಭಗಳಲ್ಲಿ ಕೆಲಸಮಾಡಲು 'ಶಾಂತಿಸೇನೆ' ಲಭ್ಯವಾದರೆ, ಅಂತಹ ಕೆಡುಕುಗಳನ್ನು ಬಹುಮಟ್ಟಿಗೆ ನಿವಾರಿಸಬಹುದು. ಮಾನವತ್ವದ ಗುಣಮಟ್ಟ ಕುಲಗೆಟ್ಟು ಹೋದಾಗಲೇ ಇಂತಹ ಕೆಡುಕುಗಳು ಕಾಣಿಸಿಕೊಳ್ಳುತ್ತವೆ. ಮಾನವೀಯತೆಯು ಇಳಿಗುಂದುವುದನ್ನು ಶಸ್ತ್ರಸಜ್ಜಿತ ಪಡೆಗಳು ತಡೆಯಲಾರವು. ಗ್ರಾಮಸ್ಥರ ಅಮಾನವೀಯ ವರ್ತನೆಯ ಸಂದರ್ಭಗಳಲ್ಲಿ 'ಶಾಂತಿಸೇನೆ'ಯೊಂದೇ ಉಪಯುಕ್ತವೆಂಬುದರಲ್ಲಿ ಸಂಶಯವಿಲ್ಲ.

'ಶಾಂತಿಸೇನೆ'ಯ ಶಕ್ತಿ ಅಧಿಕಗೊಂಡರೆ, ರಾಷ್ಟ್ರದ ಜೀವಧಾರಣ ಸಾಮರ್ಥ್ಯವೂ ಹಾಗೆಯೇ ಹೆಚ್ಚುತ್ತದೆ ಎಂದು ಎಲ್ಲರೂ ಒಪ್ಪುತ್ತಾರೆ. ಎಲ್ಲ ರಾಜಕೀಯ ಪಕ್ಷಗಳಿಗೆ ಸೇರಿದವರೂ ಈ ಕೆಲಸ ಅತ್ಯುತ್ತಮವೆಂದು ಒಪ್ಪುತ್ತಾರೆ. ಆದರೆ ಅದನ್ನು ಮಾಡುವ ಸಾಮರ್ಥ್ಯ ಅವರಿಗಿಲ್ಲ. ಕೆಲವು ಸಲ ವಿವಾದಗಳೂ ಘರ್ಷಣೆಗಳೂ ಸಂಭವಿಸಲು ರಾಜಕೀಯ ಪಕ್ಷಗಳೇ ಕಾರಣ ಅಥವಾ ರಾಜಕೀಯ ಪಕ್ಷಗಳು ಕನಿಷ್ಠಪಕ್ಷ ಅಂತಹ ವಿವಾದಗಳು ಮತ್ತು ಸಂಘರ್ಷಗಳ ಜೊತೆ ಒಂದಲ್ಲ ಒಂದು ವಿಧದ ಸಂಬಂಧವನ್ನು ಹೊಂದಿರುತ್ತವೆ. ಆದುದರಿಂದಲೇ ರಾಜಕೀಯ ಪಕ್ಷಗಳಿಗೆ ಸೇರಿದವರು ಕೆಲವು ಸಂದರ್ಭಗಳಲ್ಲಿ ತಾವೇ 'ಶಾಂತಿಸೈನಿಕ'ರಾಗಿ ಕೆಲಸಮಾಡಬಹುದೆಂದು ಹೇಳುತ್ತಾರೆ. ಆದರೆ ಈ ಜವಾಬ್ದಾರಿಯನ್ನು ಸ್ವತಂತ್ರವಾಗಿ ನಿರ್ವಹಿಸುವುದು ಅವರಿಗೆ ಸಾಧ್ಯವಾಗುತ್ತಿಲ್ಲ.

ಶಾಂತಿಸೇನೆಯ ಕೆಲಸಕ್ಕೆ ಎಲ್ಲರ ಶುಭ ಹಾರೈಕೆಯಿದೆ. ದೇಶದ ಪ್ರತಿಯೊಂದೂ

ಮನೆಯಲ್ಲಿ ಪ್ರವೇಶ ಪಡೆಯಲು 'ಶಾಂತಿಸೇನೆ' ನಮಗೆ ಸಹಾಯಮಾಡುತ್ತದೆ. 'ಶಾಂತಿಸೇನೆ'ಯ ಕೆಲಸ ಕಾರ್ಯಗಳ ಪರಿಣಾಮವಾಗಿ, ಆಂತರಿಕ ಸುವ್ಯವಸ್ಥೆಯ ಬಗ್ಗೆ ದೇಶದ ಸರಕಾರಕ್ಕಿರುವ ತಲ್ಲಣವನ್ನು ನಾವು ನಿವಾರಿಸಬಲ್ಲೆವಾದರೆ, ಆಗ ಸರಕಾರದ ಅಧಿಕಾರಶಕ್ತಿ ಹೆಚ್ಚುತ್ತದೆ. ನಮ್ಮ ದೇಶ ಇನ್ನಷ್ಟು ಬಲಿಷ್ಠವಾಗುತ್ತದೆ. ಗ್ರಾಮದಿಂದ ಗ್ರಾಮಕ್ಕೆ ಹೋಗಿ ಈ ಸಾಮರ್ಥ್ಯವನ್ನು ಹೆಚ್ಚಿಸಬಹುದು. ಆಗ ಸರಕಾರದ ಆತಂಕ ಕ್ಲೇಶಗಳು ಕಡಮೆಯಾಗಿ ರಾಷ್ಟ್ರೀಯ ಒಗ್ಗಟ್ಟು ಇನ್ನಷ್ಟು ಬಲಗೊಳ್ಳುತ್ತದೆ.

* * * *



## ೧೧. ಅಹಿಂಸೆ ಮತ್ತು ನೂತನ ಲೋಕ ವ್ಯವಸ್ಥೆ

೧. ಹೇಡಿತನದ ವರ್ತನೆಯೆಂಬ ಆರೋಪದಿಂದ ವ್ಯಕ್ತಿಯನ್ನು ಮುಕ್ತಗೊಳಿಸುವ ಉದ್ದೇಶದಿಂದ ಕ್ರೌರ್ಯವನ್ನು ಆಶ್ರಯಿಸುವುದೆಂದರೆ ಕಾವಲಿಯಿಂದ ಬೆಂಕಿಗೆ ಬಿದ್ದಂತೆ. ಹೇಡಿತನ ಮತ್ತು ಕ್ರೌರ್ಯ–ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು. ಹೆಚ್ಚೆಂದರೆ ಅವು ಕೆಲವೊಮ್ಮೆ ಮಾತ್ರ ಪರಸ್ಪರ ಸಹಕಾರ ನೀಡಬಹುದು. ಅಷ್ಟೆ! ದೊಡ್ಡ ಸೈನ್ಯವನ್ನು ಕಟ್ಟಲು ನಿಧಿಗಳ ಅಗತ್ಯವಿರುವುದರಿಂದ, ಜನರು ತೆರಿಗೆಯನ್ನು ಪಾವತಿಸುತ್ತಾರೆ; ತಾವು ಎಂದರೆ ದೇಶದ ನಾಗರಿಕರು ಸುರಕ್ಷಿತರು ಎಂದು ಭಾವಿಸುತ್ತಾರೆ. ಆದರೆ ಎಷ್ಟು ದೀರ್ಘಕಾಲ ಸ್ವತಃ ಅವರು ನಿರ್ಭಯರಾಗಿರುವುದಿಲ್ಲವೋ, ತಾವು ಸಂಪೂರ್ಣ ಸುರಕ್ಷಿತರೆಂದು ಅವರು ಭಾವಿಸಕೂಡದು ಬದಲಾಗಿ ಅವರು ದುರ್ಬಲರಾಗಿರುತ್ತಾರೆ; ಅರಕ್ಷಿತರಾಗಿರುತ್ತಾರೆ. ಏಕೆಂದರೆ ಅವರು ಸೈನ್ಯವನ್ನೇ ಸಂಪೂರ್ಣವಾಗಿ ನಂಬಿರುತ್ತಾರೆ. ತಮಗೆ ತಾವೇ ಅವರು ಇಂದ್ರಿಯಸುಖಗಳನ್ನು ನೀಡುತ್ತಾರೆ. ಅವರು ಪ್ರತಿದಿನ ಚಲನಚಿತ್ರ ಪ್ರದರ್ಶನಗಳನ್ನು ವೀಕ್ಷಿಸುತ್ತಾರೆ, ಲಂಪಟಸಾಹಿತ್ಯ ಕೃತಿಗಳನ್ನು ಓದುತ್ತಾರೆ, ದುಶ್ಚಟಗಳಿಗೆ ಅಂಟಿಕೊಂಡಿರುತ್ತಾರೆ, ರಾತ್ರಿ ತುಂಬ ತಡವಾಗಿ ಮನೆಗೆ ಹಿಂದಿರುಗುತ್ತಾರೆ, ಬೆಳಿಗ್ಗೆ ಬೇಗ ಏಳುವುದಿಲ್ಲ; ಬಿಸಿಲಿನಲ್ಲಿ ಕೆಲಸ ಮಾಡಲು ಅವರಿಗೆ ಸಾಧ್ಯವಾಗುವುದಿಲ್ಲ. ಎಲ್ಲರೂ ಆಲಸಿಗಳಾಗುತ್ತಾರೆ; ಸುಖಪುರುಷರಾಗಲು ಬಯಸುತ್ತಾರೆ. ಇಂತಹ ಪರಿಸ್ಥಿತಿಗಳಲ್ಲಿ, ಯುದ್ಧ ಪ್ರಾರಂಭವಾಗಿದೆ ಹಾಗೂ ನಮ್ಮ ಸೈನ್ಯಪಡೆಗಳು ಹಿಮ್ಮೆಟ್ಟಿವೆ* ಎಂಬ ಸುದ್ದಿ ಅವರಿಗೆ ತಿಳಿದುಬಂದರೆ, ಏನಾದೀತು? ಎಲ್ಲ ಜನರಲ್ಲಿಯೂ ತಾವು ಅಸಹಾಯಕರು ಮತ್ತು ದುರ್ಬಲರೆಂಬ ಭಾವನೆ ಮೂಡುತ್ತದೆ. ತಮ್ಮ ಅನಿಶ್ಚಿತ ಭವಿಷ್ಯದ ಬಗ್ಗೆ ಅವರು ಚಿಂತಿಸತೊಡಗುತ್ತಾರೆ. ಇಡೀ ದೇಶದ ನೈತಿಕತೆಯೇ ಕುಸಿದುಬಿದ್ದಂತೆ ತೋರಿಬರುತ್ತದೆ. ಭಯಭೀತ ಜನರನ್ನು ರಕ್ಷಿಸಲು ಸೈನ್ಯಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ದೇಶದ ಪ್ರತಿಯೊಬ್ಬ ನಾಗರಿಕನೂ ಪ್ರತಿ ಹುಡುಗ, ಹುಡುಗಿ, ಗಂಡಸು ಮತ್ತು ಹೆಂಗಸು–

* ಚೀನೀಯರು ನೇಫಾ ಮತ್ತಿತರ ಸರಹದ್ದು ಪ್ರದೇಶಗಳನ್ನೂ ಆಕ್ರಮಿಸಿದ ಅಕ್ಟೋಬರ್ ೧೯೬೨ ಕ್ಕಿಂತ ಮೊದಲು ಮಾಡಿದ ಉಪನ್ಯಾಸವೊಂದರ ಉದ್ಧೃತ ಭಾಗ

ನಿರ್ಭಯವಾಗಿರಲು ಕಲಿಯಬೇಕು. ನಾವು ಸುಖ ಸೋಮಾರಿಯ ಜೀವನವನ್ನು ನಡೆಸಕೂಡದು. ಬಹುವಿಧದ ಸುಖ ಸಂತೋಷಗಳನ್ನು ಪಡೆಯಲು ಪ್ರಯತ್ನಿಸಕೂಡದು. ರಾಷ್ಟ್ರವು ಇಂತಹ ಕಾರ್ಯಕ್ರಮವನ್ನು ಅನುಸರಿಸಿದರೆ, ಧೈರ್ಯದಿಂದ ವರ್ತಿಸಿದರೆ, ಆಗ ಅದು ಬಲಿಷ್ಠವಾಗುತ್ತದೆ; ಆಗ ಜನರ ಗುಣಾತ್ಮಕ ಅಭಿವೃದ್ಧಿಯೂ ಸಾಧ್ಯವಾಗುತ್ತದೆ.

೩. ಶತ್ರುವನ್ನು ಪ್ರೀತಿಸುವುದು ತುಂಬ ಒಳ್ಳೆಯದು.

೪. ಹಿಂಸಾತ್ಮಕ ಯುದ್ಧ ಹಾಗೂ ಅಹಿಂಸಾತ್ಮಕ ಯುದ್ಧಗಳ ವಿಧಾನಗಳ ನಡುವೆ ಕೆಲಮಟ್ಟಿನ ವ್ಯತ್ಯಾಸವಿದೆ. ಹಿಂಸಾತ್ಮಕ ಯುದ್ಧದಲ್ಲಿ ನಾವೇನು ಮಾಡುತ್ತೇವೆ? ಶತ್ರು ಸೈನ್ಯದ ಶಸ್ತ್ರಾಸ್ತ್ರಗಳ ಮುಂದೆ ನಮ್ಮ ಶಸ್ತ್ರಾಸ್ತ್ರಗಳು ದುರ್ಬಲವೆಂದು ಕಂಡುಬಂದಾಗ, ಹಿಂದಿಗಿಂತ ಹೆಚ್ಚು ಮಾರಕವಾದ ಶಸ್ತ್ರಾಸ್ತ್ರಗಳನ್ನು ಅನ್ವೇಷಿಸಿ, ಅವುಗಳನ್ನು ಬಳಸುತ್ತೇವೆ......... ಅಹಿಂಸಾತ್ಮಕ ಯುದ್ಧವನ್ನು ಮಾಡುವ ವಿಧಾನವು, ಹಿಂಸಾತ್ಮಕ ಯುದ್ಧವಿಧಾನಕ್ಕಿಂತ ಬೇರೆಯಾಗಿದೆ; ಅಹಿಂಸಾತ್ಮಕ ಯುದ್ಧವು ಉತ್ಸಾಹದಿಂದ ಕೂಡಿರುತ್ತದೆ. ಹಿಂಸಾತ್ಮಕ ಯುದ್ಧದಲ್ಲಿ ಆಯುಧಗಳು ಹೆಚ್ಚು ಮಾರಕವಾಗಿರುತ್ತವೆ ; ಅಹಿಂಸಾತ್ಮಕ ಯುದ್ಧದಲ್ಲಿ ವಿಧಾನದ ಪರಿಶುದ್ಧತೆಯನ್ನು ಉಳಿಸಿಕೊಳ್ಳುವುದು ಆವಶ್ಯಕ.

೫. 'ಅಹಿಂಸೆ' ಎಂಬ ಪದವನ್ನು ನಮಗೆ ಪರಿಚಯಿಸಿದವರು ಗಾಂಧೀಜಿ. ನಿಜವಾಗಿ ಹೇಳುವುದಾದರೆ ಅಹಿಂಸೆಯೆಂದರೆ ನಿಷ್ಕ್ರಿಯೆಯಲ್ಲ. ಅಹಿಂಸೆಯೆಂಬುದೊಂದು ಪರಮಾಧಿಕಾರ. ದೇವತೆಯಂತೆ, ಅಧಿಕಾರವನ್ನೂ ಪ್ರಸನ್ನಗೊಳಿಸಬೇಕು. "ಅಹಿಂಸಾದೇವತೆಯನ್ನು ಪ್ರಸನ್ನಗೊಳಿಸುವುದು" ಎಂದು ನಾನು ಹೇಳಿದಾಗ ಅದು ಎಂತಹ ಪ್ರಸನ್ನತೆ? ಭಾರತದ ನಿವಾಸಿಗಳಾಗಿರುವ ನಾವೆಲ್ಲರೂ ಸಹೋದರರಂತೆ ಬಾಳಬೇಕು. ನಮ್ಮ ಪರಸ್ಪರ ಸಂಬಂಧಗಳು ಮತ್ತು ವರ್ತನೆಗಳು ಪ್ರೀತಿಯನ್ನು ಆಧರಿಸಿರಬೇಕು. ಯಾರನ್ನೂ ಕೀಳೆಂದು ಅಥವಾ ಮೇಲೆಂದು ಪರಿಗಣಿಸಕೂಡದು. ನಾವು ಯಾರನ್ನೂ ಶೋಷಿಸಕೂಡದು; ಯಾರಿಗೂ ಹೆದರಕೂಡದು. ಹೀಗೆ ಮಾಡುವುದೇ ಅಹಿಂಸಾದೇವತೆಯ ಪೂಜೆ.

ಶಸ್ತ್ರಾಸ್ತ್ರಗಳ ಬಲದಲ್ಲಿ ನನಗೆ ಲವಲೇಶ ಶ್ರದ್ಧೆಯೂ ಇಲ್ಲ, ಆಯುಧ ಯಾವುದೇ ಇರಲಿ, ಅದು ಮೂಲತಃ ದುರ್ಬಲ. ಆಯುಧಗಳಿಗೆ ತಮ್ಮ ಅಂತರ್ಗತ ಬಲವಿಲ್ಲ. ನಾವು ಆ ಬಲವನ್ನು ನೀಡಿದಾಗ ಮಾತ್ರ, ಅವು ಶಕ್ತಿಶಾಲಿಯಾಗುತ್ತವೆ. ಆಯುಧಕ್ಕೆ ನಮ್ಮ ಬಲವನ್ನು ನೀಡುವ ಬದಲಾಗಿ, ನಾವೇ ಏಕೆ ಬಲಶಾಲಿಗಳಾಗಬಾರದು? ಆದುದರಿಂದಲೇ ಗಾಂಧೀಜಿಯವರು ಆತ್ಮಬಲದತ್ತ ನಮ್ಮ ಗಮನವನ್ನು ಸೆಳೆದರು.

೬. ಪ್ರಶ್ನೆ : ಇತರ ರಾಷ್ಟ್ರಗಳು ಇನ್ನೂ ಹಿಂಸೆಯಲ್ಲಿಯೇ ವಿಶ್ವಾಸವಿರಿಸಿರುವಾಗ,



ಒಂದೇ ಒಂದು ದೇಶ ಅಹಿಂಸೆಯನ್ನು ಏಕೆ ಅನುಸರಿಸಬೇಕು?

ಉತ್ತರ : ಅಹಿಂಸಾತ್ಮಕ ಸಾಮಾಜಿಕ ಸಂಘಟನೆಯ ಸಿದ್ಧಾಂತದ ಪ್ರಕಾರ, ಒಂದು ಮಾನವ ಜನಾಂಗವು ಪ್ರತ್ಯೇಕವಾದ ವಿವಿಧ ರಾಷ್ಟ್ರಗಳಾಗಿ ವಿಭಜಿತಗೊಳ್ಳಲು ಅನುಮತಿ ದೊರೆತದ್ದು ಕೇವಲ ಸೌಲಭ್ಯಕ್ಕಾಗಿ. ಯಾವುದೇ ಒಂದು ರಾಷ್ಟ್ರವು ಸಮಚಿತ್ತದಿಂದ ಆಲೋಚಿಸಿ, ಅಹಿಂಸಾಮಾರ್ಗವನ್ನು ಅನುಸರಿಸಿದ ಪಕ್ಷದಲ್ಲಿ ರಾಷ್ಟ್ರಗಳ ನಡುವೆ ಸಂಘರ್ಷ ಘಟಿಸುವ ಕಾಲದಲ್ಲಿ ಅದಕ್ಕೆ ತಾನು ಪ್ರತ್ಯೇಕವೆಂಬ ಭಾವನೆ ಎಂದೂ ಉಂಟಾಗುವುದಿಲ್ಲ; ನೆರೆಹೊರೆಯ ರಾಷ್ಟ್ರಗಳನ್ನೂ ಸ್ವರಾಷ್ಟ್ರದಂತೆ ಭಾವಿಸಿ ಆ ರಾಷ್ಟ್ರಗಳ ಜನರ ಹಿತಾಸಕ್ತಿಗಳನ್ನು ಸಂರಕ್ಷಿಸುವ ಕಾವಲು ಕೆಲಸವನ್ನು ಅದು ಮಾಡುತ್ತದೆ. ಹಿಂಸೆಯಲ್ಲಿ ನಂಬಿಕೆಯಿದ್ದರೂ, ಎಲ್ಲ ರಾಷ್ಟ್ರಗಳು ಒಂದೇ ಕಾಲದಲ್ಲಿ ಉನ್ಮಾದದಿಂದ ವರ್ತಿಸುವುದಿಲ್ಲ. ಅಷ್ಟೇ ಅಲ್ಲ; ಆ ರಾಷ್ಟ್ರಗಳು ಸ್ಪರ್ಧೆ ಮತ್ತು ಪರಸ್ಪರ ಭಯ–ಇವುಗಳಿಂದಾಗಿಯೇ ಹಿಂಸೆಯಲ್ಲಿ ವಿಶ್ವಾಸವಿಡಲು ತೊಡಗಿವೆ. ಸ್ವಂತಕ್ಕಾಗಿ ವ್ಯಕ್ತಿ ಎಂದೂ ಹಿಂಸಾಮಾರ್ಗವನ್ನು ಅನುಸರಿಸುವುದಿಲ್ಲ. ಆದುದರಿಂದ ಅಹಿಂಸಾಮಾರ್ಗವನ್ನು ಅನುಸರಿಸಲು ಬಯಸುವ ಹಾಗೂ ಇಡೀ ಜಗತ್ತಿನ ಇತರ ರಾಷ್ಟ್ರಗಳೊಂದಿಗೆ ಸ್ನೇಹಸಂಬಂಧಗಳನ್ನು ಇರಿಸಿಕೊಳ್ಳಲು ಯಾವುದಾದರೂ ಒಂದು ರಾಷ್ಟ್ರ ಪ್ರಯತ್ನಿಸಿದರೂ ಸಾಕು, ಅದು ನೆರೆಹೊರೆಯ ರಾಷ್ಟ್ರಗಳಿಗೂ ಅಹಿಂಸಾಮಾರ್ಗದಲ್ಲಿ ನಡೆಯುವಂತೆ ಪ್ರಚೋದನೆ ನೀಡಬಲ್ಲುದು.

೭ "ಪಾಕಿಸ್ತಾನದೊಂದಿಗೆ ಮಾತುಕಥೆ ನಡೆಸಲು ಆಹ್ವಾನಿಸಿದರೆ, ನೀವು ಎಂತಹ ಸಿದ್ಧತೆಯನ್ನು ನಡೆಸುತ್ತೀರಿ?" ಎಂದು ಯಾರೋ ಒಬ್ಬರು ನನ್ನನ್ನು ಪ್ರಶ್ನಿಸಿದಾಗ ನಾನು ಹೀಗೆ ಉತ್ತರಿಸಿದೆ: "ಸಶಸ್ತ್ರ ಸೈನ್ಯಗಳ ಅಗತ್ಯವಿಲ್ಲದಂತೆ ಮಾಡುವವರೆಗೂ ಪಾಕಿಸ್ತಾನದೊಂದಿಗೆ ರಾಜಿ ಮಾತುಕಥೆಗಳನ್ನು ನಡೆಸಲು ನನಗೆ ಸಾಧ್ಯವಾಗುವುದಿಲ್ಲ. ವಾಸ್ತವವಾಗಿ ಹೇಳುವುದಾದರೆ, ಸಂಧಾನ ಗೋಷ್ಠಿಗಳ ಕಾಲದಲ್ಲಿ ನಿಜವಾದ ಬಲವಿರುವುದು ಶಾಂತಮನಸ್ಸಿನ ವಿವೇಕದಲ್ಲಿ. ನಮ್ಮ ರಾಷ್ಟ್ರಗಳ ಸಶಸ್ತ್ರಪಡೆಗಳಲ್ಲಿ ಪೂರ್ಣ ವಿಶ್ವಾಸವನ್ನು ಇರಿಸಿಕೊಳ್ಳಲು ಸಾಧ್ಯವಾಗುವವರೆಗೆ ಇಂತಹ ಸಮಚಿತ್ತವನ್ನು ನಾವು ಹೊಂದುವುದು ಸಾಧ್ಯವಾಗಲಾರದು. ಅಹಿಂಸೆಯಲ್ಲಿ ಸಂಪೂರ್ಣ ವಿಶ್ವಾಸವನ್ನು ಹೊಂದದ ಹೊರತು ಸಹೋದರ ರಾಷ್ಟ್ರಗಳನ್ನು ಗೆಲ್ಲುವ ಬಲ ಬರುವುದಿಲ್ಲ. ಆದರೆ ಈ ಅಭಿಪ್ರಾಯವನ್ನು ನಾನು ವ್ಯಕ್ತಪಡಿಸಿದಾಗ, ಈ ಮನುಷ್ಯ ಹಳೆಯಯುಗದ ಒಂದು ವಿಶಿಷ್ಟಮಾದರಿಯಾಗಿರಬೇಕು ಅಥವಾ ನಾಲ್ಕು ಸಾವಿರ ವರ್ಷಗಳ ಹಿಂದಿನವನಾಗಿರಬೇಕು ಎಂದು ಜನರು ಭಾವಿಸಿದರು.

ಇಂದು ಇದು ಹುಚ್ಚುಹುಚ್ಚು ಮಾತಾಗಿ ಕಂಡುಬರಬಹುದು. ಆದರೆ, ಈ ಜಗತ್ತಿನ ಯಾವುದೋ ಒಂದು ಕಡೆ, ಯಾವುದೋ ಒಂದು ರಾಷ್ಟ್ರದಲ್ಲಿ, ಅಹಿಂಸಾ ಬಲವನ್ನು ಅಭಿವೃದ್ಧಿಗೊಳಿಸಲೇಬೇಕು. ಏಕೆಂದರೆ ಆ ರಾಷ್ಟ್ರವು, ಇತರ

ದೇಶಗಳು ತಮ್ಮ ಸಶಸ್ತ್ರಪಡೆಗಳನ್ನು ಕಡಮೆಗೊಳಿಸುವುದನ್ನು ಕಾಯದೆ, ಮೊದಲು ತನ್ನ ಪಡೆಗಳನ್ನು ಕಡಮೆಗೊಳಿಸಬೇಕು. ಈ ಅಹಿಂಸಾಬಲವನ್ನು ಇಂದು ನಾವು ಸಾಕಷ್ಟು ಅಭಿವೃದ್ಧಿಪಡಿಸದೆ ಹೋದರೆ, ನಾಳೆಯಾದರೂ ಹಾಗೆ ಮಾಡಲೇಬೇಕಾಗುತ್ತದೆ. ಆದುದರಿಂದ ಈ ಬಗೆಗಿನ ಯೋಜನೆಯನ್ನು ನಾವು ಈಗಲೇ ರೂಪಿಸಬೇಕು. ಪಾಕಿಸ್ತಾನದ ಭಯದಿಂದ ನಮ್ಮ ಸೈನ್ಯ ಬಲವನ್ನು ಹೆಚ್ಚಿಸುವ ಬಗ್ಗೆ ನಾವು ಮಾತನಾಡುವುದಾದರೆ, ಆಗ ರಷ್ಯ ಮತ್ತು ಪಾಕಿಸ್ತಾನಗಳಿಗೆ, ಸಶಸ್ತ್ರ ಪಡೆಗಳನ್ನು ಕಡಮೆಗೊಳಿಸಬೇಕೆಂಬ ಸಲಹೆಯನ್ನು ನಾವು ಹೇಗೆ ತಾನೇ ನೀಡಬಲ್ಲೆವು? ಎಲ್ಲ ದೇಶಗಳೂ ನಿಃಶಸ್ತ್ರೀಕರಣಕ್ಕೆ ಮುಂದಾಗಬೇಕು ಎಂದು ಒತ್ತಾಯಿಸುವ ಸಾಮರ್ಥ್ಯ ನಮಗಿಲ್ಲ ಆದರೆ ಅದನ್ನು ನಾವು ಗಳಿಸಬೇಕು. ಈ ಸಾಮರ್ಥ್ಯವನ್ನು ಯಾವ ದೇಶವೇ ಮೊದಲು ಗಳಿಸಲಿ, ಅದೇ ಇಡೀ ಜಗತ್ತನ್ನು ರಕ್ಷಿಸಬಲ್ಲುದು. ಮಾನವಜನಾಂಗದ ಸಮಗ್ರ ಇತಿಹಾಸವನ್ನು ಅವಲೋಕಿಸಿದಾಗ, ಭಾರತವು ಇಂತಹ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಬಲ್ಲದು ಎಂದು ನನಗನಿಸುತ್ತದೆ.

೮. ರಕ್ಷಣೆಗಾಗಿ ಹಿಂಸೆಯನ್ನು ಬಳಸಿಕೊಳ್ಳಲು ನಡೆಯುತ್ತಿರುವ ಭಾರೀ ಸಿದ್ಧತೆಗಳನ್ನು ನೋಡಿದಾಗ, ನನಗಂತೂ ಹಿಂಸಾಭೂತದ ಅವಸಾನದ ಕಾಲ ನಿಜವಾಗಿಯೂ ಸನ್ನಿಹಿತವಾಗುತ್ತದೆ ಎಂದು ಅನಿಸುತ್ತದೆ. ಹಿಂದೆ ಚಿಕ್ಕಪುಟ್ಟ ಯುದ್ಧಗಳಷ್ಟೇ ನಡೆಯುತ್ತಿದ್ದವು. ಆ ಯುದ್ಧಗಳು ಕೆಲಮಟ್ಟಿಗೆ ಸಮರ್ಥನೀಯವಷ್ಟೇ ಅಲ್ಲದೆ ಉಪಯುಕ್ತವೂ ಆಗಿದ್ದವು. ಆದರೆ ಈಗ ಯುದ್ಧವು "ಸಂಪೂರ್ಣ ಯುದ್ಧ" ವಾಗಿದೆ. ಸಂಪೂರ್ಣ ಯುದ್ಧವೆಂದರೇನು? ....... ಒಂದು ಪಕ್ಷದ ಜನರು ಇನ್ನೊಂದು ಪಕ್ಷದ ಜನರ ವಿರುದ್ಧ ನಿಲ್ಲುತ್ತಾರೆ, ಒಂದು ಪಕ್ಷದ ಮಹಿಳೆಯರು ಇನ್ನೊಂದು ಪಕ್ಷದ ಮಹಿಳೆಯರೊಂದಿಗೆ, ಒಂದು ಪಕ್ಷದ ಎತ್ತುಗಳು ಇನ್ನೊಂದು ಪಕ್ಷದ ಎತ್ತುಗಳೊಂದಿಗೆ, ಕತ್ತೆಗಳು ಮತ್ತು ಹೇಸರಗತ್ತೆಗಳು ಕೂಡ ಇನ್ನೊಂದು ಗುಂಪಿನ ಕತ್ತೆಗಳೂ ಹಾಗೂ ಹೇಸರಗತ್ತೆಗಳೊಂದಿಗೆ...... ಬಾಂಬ್‌ಗಳು ಬಿದ್ದರೆ ಆಗ ಕತ್ತೆಗಳು, ಕುದುರೆಗಳು, ಹೇಸರಗತ್ತೆಗಳು ಮಹಿಳೆಯರು – ಎಲ್ಲರೂ ತತ್‌ಕ್ಷಣ ನಾಶವಾಗುತ್ತಾರೆ. ಅಮೆರಿಕದ ಬಡಪಾಯಿ ಹೇಸರಗತ್ತೆಗಳಿಗೆ ತಾವು ರಷ್ಯದಲ್ಲಿ ಹೇಸರಗತ್ತೆಗಳ ವಿರುದ್ಧವಾಗಿರುವುದು ತಿಳಿದಿರುವುದಿಲ್ಲ. ...... ಇದರ ಅರ್ಥವೇನೆಂದರೆ 'ಸಂಪೂರ್ಣಯುದ್ಧ'ದಲ್ಲಿ ಯಾವುದೇ ಜೀವಂತ ಅಥವಾ ಮೃತ ವಸ್ತುವೂ, ಜೀವಿಯೂ ತನ್ನ ಸ್ವಭಾವವನ್ನು ಉಳಿಸಿಕೊಳ್ಳುವುದಿಲ್ಲ. ಎಲ್ಲವೂ ಸೈನ್ಯದ ಹಿಂಸಾ ಮನೋಭಾವವನ್ನೇ ಪಡೆಯುತ್ತವೆ. ಈಗ ವಿಜ್ಞಾನವು ಎಷ್ಟೊಂದು ಆಯಾಮಗಳಲ್ಲಿ ಅಭಿವೃದ್ಧಿ ಸಾಧಿಸಿದೆಯೆಂದರೆ, ಈ ಹಿಂಸಾಭೂತವು ನಿಜವಾಗಿಯೂ ತನ್ನನ್ನೇ ನಾಶಪಡಿಸಿಕೊಳ್ಳುವತ್ತ ಸಾಗುತ್ತಿದೆ. ಆಗ ಸಹಿಂಸೆಯು ತಾನಾಗಿ ಹಿಂಸೆಯ ಸ್ಥಾನವನ್ನು



ಆಕ್ರಮಿಸುತ್ತದೆ. ಆದುದರಿಂದಲೇ ಭಾರೀ ಪ್ರಮಾಣದಲ್ಲಿ ಹಿಂಸಾತ್ಮಕ ಚಟುವಟಿಕೆಗಳ ಸಿದ್ಧತೆ ನಡೆದಾಗ, ನನಗೇನೂ ಭಯವಾಗುವುದಿಲ್ಲ. ಏಕೆಂದರೆ ಹಿಂಸೆಯು ಈಗ ನಿರ್ಗಮಿಸತೊಡಗಿದೆ; ಆ ಸ್ಥಾನದಲ್ಲಿ ಪ್ರವೇಶಮಾಡುವ ಅವಕಾಶವು ನನಗೆ ಒದಗಿಬಂದಿದೆ. ಹಣತೆಯು ಉಜ್ಜ್ವಲವಾಗಿ ಉರಿಯುತ್ತಿದೆ; ಸದ್ಯವೇ ಅದು ನಂದಿಹೋಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಈ ಭಯಂಕರ ಯುದ್ಧ ಸಿದ್ಧತೆಗಳು, ಜಗತ್ತಿನ ಎಲ್ಲೆಡೆಗಳಲ್ಲಿಯೂ ಹಿಂಸೆಯು ಮಾಯವಾಗುವುದರ ಪ್ರಾರಂಭದ ಸೂಚನೆಯಾಗಿದೆ. ಅನಂತರ ನೆಲೆನಿಲ್ಲುವುದು ಅಹಿಂಸೆಯೊಂದೇ.

೯. ಆಗಾಗ ಕೆಲವು ವಿದೇಶೀಯರು ನನ್ನ ಪಾದಯಾತ್ರೆಯಲ್ಲಿ ಭಾಗವಹಿಸಿದ್ದಾರೆ. ಒಮ್ಮೆ ಅಮೆರಿಕದವನೊಬ್ಬ ನನ್ನ ಜೊತೆ ಇದ್ದ. ಹೊರಡುವ ಮೊದಲು ಅಮೆರಿಕದ ಪ್ರಜೆಗಳಿಗಾಗಿ ಏನಾದರೂ ಒಂದು ಸಂದೇಶ ನೀಡಬೇಕೆಂದು ಅವನು ಕೇಳಿಕೊಂಡ. ಅವರಿಗೆ ಸಂದೇಶವನ್ನು ನೀಡುವ ಧಾರ್ಷ್ಟ್ಯ ನನಗಿಲ್ಲವೆಂದು ತಿಳಿಸಿದೆ. ನನಗೆ ತಿಳಿದಿರುವುದು ಪ್ರಾಮಾಣಿಕ ಸೇವೆ ಸಲ್ಲಿಸುವ ವಿಧಾನ ಮಾತ್ರ. ಅಂತಹ ಸೇವೆ ಮಾಡುವುದರಲ್ಲಿಯೇ ನಾನು ತೊಡಗಿದ್ದೇನೆ. ಆದರೆ ಅವನು ಮತ್ತೆ ಮತ್ತೆ ಹೀಗೆ ಒತ್ತಾಯಿಸಿದ : "ಅಮೆರಿಕಕ್ಕೆ ಮರಳಿದ ಅನಂತರ, ಜನರು 'ಭಾರತದಲ್ಲಿ ನೀನೇನು ನೋಡಿದೆ' ಎಂದು ಸಹಜವಾಗಿ ಪ್ರಶ್ನಿಸುತ್ತಾರೆ. ಬಾಬಾ ಏನು ಹೇಳಿದರೆಂದು ಅವರು ಕೇಳಿದರೆ ನಾನೇನು ಉತ್ತರ ಕೊಡಲಿ?" ಆಗ ಏನಾದರೂ ಹೇಳಲೇಬೇಕೆಂದು ನನಗನಿಸಿತು. ಹೀಗೆ ಹೇಳಿದೆ : "ಅಮೆರಿಕಕ್ಕೆ ಮಾತ್ರವಲ್ಲ; ರಷ್ಯಕ್ಕೂ ನಾನು ಹೇಳಬಯಸುವುದಿಷ್ಟೆ : ಈಗ ಮಾಡುತ್ತಿರುವಂತೆ ಶಸ್ತ್ರಾಸ್ತ್ರಗಳನ್ನು ಕ್ಷಿಪಣಿಗಳ, ಬಾಂಬ್‌ಗಳ, ಜಲಾಂತರ್ನೌಕೆಗಳ ಉತ್ಪಾದನೆಯನ್ನು ಮುಂದುವರಿಸಬೇಕೆಂದು ಅವರಿಗೆ ತಿಳಿಸುವೆ. ಹೀಗೆ ಮಾಡದಿದ್ದರೆ ಅಲ್ಲಿ ನಿರುದ್ಯೋಗದ ಭಾರೀ ಸಮಸ್ಯೆ ಉದ್ಭವಿಸುತ್ತದೆ. ಆದರೆ ಇನ್ನೂ ಒಂದು ವಿಷಯವನ್ನು ಅವರಿಗೆ ನಾನು ತಿಳಿಸಬೇಕು. ನೀವು ಮತ್ತು ರಷ್ಯಾದವರು ನಿಮ್ಮ ಶಸ್ತ್ರಾಸ್ತ್ರಗಳನ್ನು ಭಾರೀ ಪ್ರಮಾಣದಲ್ಲಿ ಅಧಿಕಗೊಳಿಸುತ್ತಿದ್ದೀರಿ.* ಆದರೆ ನಿಮ್ಮಿಬ್ಬರ ನಡುವೆ ಯುದ್ಧ ಸಂಭವಿಸಿದಾಗ ಅಮೆರಿಕವು ರಷ್ಯದ ಯುದ್ಧ ನೌಕೆಗಳನ್ನೂ ಯುದ್ಧ ವಿಮಾನಗಳನ್ನೂ ನಾಶಪಡಿಸುತ್ತದೆ. ಅದಕ್ಕೆ ಪ್ರತಿಯಾಗಿ ರಷ್ಯ ಕೂಡ ಅಮೆರಿಕದ ಯುದ್ಧನೌಕೆಗಳನ್ನೂ ಯುದ್ಧವಿಮಾಣಗಳನ್ನೂ ನಾಶಪಡಿಸುತ್ತವೆ. ಅಮೆರಿಕದವರು ಮತ್ತು ರಷ್ಯದವರು ಬಹುಮಟ್ಟಿಗೆ ಕ್ರೈಸ್ತರಾಗಿದ್ದಾರೆ. ಏಸುಕ್ರಿಸ್ತನ ಜಯಂತಿಯಾದ ಕ್ರಿಸ್‌ಮಸ್ ಡಿಸೆಂಬರ್ ೨೫ರಂದು ಬರುತ್ತದೆ. ಆ ದಿನವೇ ನಿಮ್ಮ ನಿಮ್ಮ ಶಸ್ತ್ರಾಸ್ತ್ರಗಳನ್ನೂ ಯುದ್ಧನೌಕೆಗಳನ್ನು ಯುದ್ಧವಿಮಾನಗಳನ್ನೂ ನಿಮ್ಮ ಕೈಯಲ್ಲಿಯೇ ಸಮುದ್ರದಲ್ಲಿ ಮುಳುಗಿಸಿ. ರಷ್ಯವು ತನ್ನ ಸ್ವಂತ ನೌಕೆಗಳನ್ನು

* ಆಂಶಿಕ ಪರೀಕ್ಷಾ ನಿಷೇಧ ಒಪ್ಪಂದಕ್ಕೆ ಸಹಿ ಹಾಕುವುದಕ್ಕೂ ತುಂಬ ಹಿಂದಿನ ಒಂದು ಸನ್ನಿವೇಶಕ್ಕೆ ಈ ಉಲ್ಲೇಖ ಸಂಬಂಧಿಸಿದೆ.

ವಿಮಾನಗಳನ್ನೂ ಸಮುದ್ರದಲ್ಲಿ ಮುಳುಗಿಸಬೇಕು. ಹಾಗೆಯೇ ಅಮೆರಿಕವೂ ಮಾಡಬೇಕು. ರಷ್ಯನ್ನರು ನಿಮ್ಮ ಶಸ್ತ್ರಾಸ್ತ್ರಗಳನ್ನು ಹಾಗೂ ನೀವು ರಷ್ಯಾದ ಶಸ್ತ್ರಾಸ್ತ್ರಗಳನ್ನು ಮುಳುಗಿಸುವುದಕ್ಕಿಂತ ಇದು ನೂರು ಪಾಲು ಒಳ್ಳೆಯದು. ಹೀಗೆ ಮಾಡುವುದರಿಂದ ಏಸುಕ್ರಿಸ್ತ ಪ್ರತಿಪಾದಿಸಿದ ಶಾಂತಿ ಮತ್ತು ಪ್ರೀತಿಗಳ ಸೂತ್ರಗಳ ಆಚರಣೆಯು ಖಚಿತವಾಗುತ್ತದೆ. ಆಗ ನಿರುದ್ಯೋಗದ ಸಮಸ್ಯೆ ಇರುವುದಿಲ್ಲ; ಯಾರಿಗೂ ಯಾವ ತೊಂದರೆಯೂ ಉಂಟಾಗುವುದಿಲ್ಲ. ಮಕ್ಕಳಿಗೂ ಕ್ರಿಸ್‌ಮಸ್ ಉತ್ಸವವನ್ನು ವೀಕ್ಷಿಸುವ ಅವಕಾಶ ಸಿಗುತ್ತದೆ. ಎಲ್ಲರಿಗೂ ನಾಲ್ಕು ಅಥವಾ ಐದು ದಿನಗಳ ರಜೆಯನ್ನು ಘೋಷಿಸಿ. ಜನವರಿ ಒಂದರಿಂದ ನಿಮ್ಮ ನಿಮ್ಮ ಯುದ್ಧೋಪಕರಣಗಳ ಕಾರ್ಖಾನೆಗಳನ್ನು ಪುನಃ ಪ್ರಾರಂಭಿಸಿ."

ಇದನ್ನು ಕೇಳಿದ ಸ್ನೇಹಿತ ನಗತೊಡಗಿದ "ನೀನು ನಗಬಹುದು, ಆದರೆ ನಿಮ್ಮವರಿಗೂ, ಇಡೀ ಜಗತ್ತಿಗೂ ಇದೇ ನನ್ನ ಗಂಭೀರ ಸಂದೇಶ"– ನಾನೆಂದೆ.

೧೦. ಯಾರೂ ನಮ್ಮನ್ನು ಆಳಕೂಡದು ಎಂಬಷ್ಟರ ಮಟ್ಟಿನ ಸ್ವಾತಂತ್ರ್ಯದ ಬಗೆಗಿನ ಪ್ರೀತಿಯೇನೂ ಅಂತಹ ಶ್ರೇಷ್ಠ ಮೌಲ್ಯವಲ್ಲ. ಇದು ಪ್ರಾಣಿಗಳಲ್ಲಿ ಕೂಡ ಕಂಡುಬರುತ್ತದೆ. ಸ್ವತಃ ತಾನೂ ಇತರರನ್ನು ಆಳಕೂಡದು ಎಂದು ತಿಳಿದಿರುವವನೇ ನಿಜವಾದ ಸ್ವಾತಂತ್ರ್ಯ ಪ್ರೇಮಿ.

೧೧. ನಾನು ಇಂಗ್ಲಿಷಿನಲ್ಲಿಯೂ ಒಂದು ಬಿಡಿಲೇಖನವನ್ನು ಬರೆದಿದ್ದೇನೆ. ಜರ್ಮನಿ, ಫ್ರಾನ್ಸ್, ಅಮೆರಿಕ ಮತ್ತು ಇಂಗ್ಲೆಂಡ್‌ಗಳಂತಹ ದೇಶಗಳ ಉದ್ದಗಲಕ್ಕೂ ನಮ್ಮ ಚಳವಳಿಯ ಸುದ್ದಿ ಹರಡಿದೆ. ಕಾರಣ ಸುಸ್ಪಷ್ಟವಾಗಿದೆ. ಜಗತ್ತು ಶಾಂತಿಗಾಗಿ ಹಂಬಲಿಸುತ್ತಿದೆ. ನಾವು ಎಲ್ಲಿಯೇ ಒಂದು ಬಾವಿಯಲ್ಲಿ ಮುಳುಗಿದರೂ, ಬಾಯಾರಿದವರು ಆ ಬಗ್ಗೆ ತಿಳಿದೇ ತಿಳಿಯುತ್ತಾರೆ. ಏಕೆಂದರೆ ಅವರಿಗೆ ನೀರಿನ ಅಗತ್ಯವಿರುತ್ತದೆ. ಆದುದರಿಂದ ನಿಜವಾಗಿಯೂ ಇದು ನಿಮ್ಮ ಮುಂದಿರುವ ಪ್ರಶ್ನೆಯಾಗಿದೆ. ನಿಮ್ಮ ಗ್ರಾಮದಲ್ಲಿ ಯಾವ ವಿಶೇಷ ರೀತಿಯ ಕೆಲಸವನ್ನು ನೀವು ಮಾಡುತ್ತಿದ್ದೀರಿ? ಜಗತ್ತಿನ ಒಬ್ಬ ಪೌರನಾಗಿ ಜಗತ್ತಿಗೆ ಯಾವ ಕೊಡುಗೆಯನ್ನು ನೀವು ನೀಡುತ್ತಿದ್ದೀರಿ.? ಸರಿ. ನೀವು ಬೆಳಗಿನ ಉಪಾಹಾರವನ್ನು ಮುಗಿಸಿದ್ದೀರಿ. ಮಧ್ಯಾಹ್ನದ ಊಟವನ್ನೂ ಮಾಡಿದ್ದೀರಿ. ಸಂಜೆ ಚಲನಚಿತ್ರಮಂದಿರಕ್ಕೂ ಹೋಗಿಬಂದಿದ್ದೀರಿ. ನಿಮ್ಮ ಇತರ ಎಲ್ಲ ಖಾಸಗಿ ಹಿತಾಸಕ್ತಿಗಳನ್ನೂ ಪೂರೈಸಿಕೊಂಡಿದ್ದೀರಿ. ಆದರೆ ನಿಮ್ಮ ಈ ಚಟುವಟಿಕೆಗಳೆಲ್ಲ ಜಗತ್ತಿಗೆ ಯಾವುದೇ ಮಾರ್ಗದರ್ಶನವನ್ನು ನೀಡುತ್ತಿಲ್ಲ. ಜಾಗತಿಕ ಪೌರತ್ವವೊಂದೇ ಈ ವೈಜ್ಞಾನಿಕ ಯುಗಕ್ಕೆ ತಕ್ಕುದಾದ ಉಪಯುಕ್ತ ಸಂದೇಶ.

೧೨. ದೇವರ ಪಿತೃತ್ವಾಧಿಕಾರವನ್ನು ಗುರುತಿಸಿ ಗೌರವಿಸದ ವಿನಾ, ಜಗತ್ತಿನಲ್ಲಿ ಮಾನವ ಭ್ರಾತೃತ್ವವು ನೆಲಸಲಾರದು.

* * * *